

ನೋಮ್ ಚಾಮ್ಸ್ಕಿ
ಅವರ
ಆಯ್ದ ಕೃತಿಗಳು
ಸಂಪಾದಕರು
ಎಚ್.ಎಸ್.ರಾಘವೇಂದ್ರರಾವ್
ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಜನಪ್ರಿಯ ಮಾಲೆ

# ಅರವಿಂದ ಮಾಲಗತ್ತಿ ಅವರ

## ಆಯ್ದ ಕವಿತೆಗಳು

ಸಂಪಾದಕರು

**ಡಾ. ಎಚ್. ಎಸ್. ರಾಘವೇಂದ್ರರಾವ್**

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಬೆಂಗಳೂರು

**ARAVINDA MALAGATTI AVARA**

**AYDA KAVITEGALU**

A Collection of Selected poems by Prof. Arvinda Malagatti

**Editor**

**Dr. H.S. Raghavendra Rao**

Professor in Kannada

National College, Jayanagar

Bangalore-560 011

**Publisher**

**N. Thippeswamy**

Administrative Officer

Kannada Book Authority

J.C. Road, Kannada Bavana

Bangalore-560 002

© Reserved

First Print : 2004

Pages :xx+184=204 Price : Rs. **100/-**

ISBN: 81-7713-169-9

**D.T.P.**

**Nethra Printers**

Chamarajapet Bangalore-18

*Cover Page Design:* Raffiq Uppinangadi

**Printed**

**Shakthi Printers & Publishers,**

No. 277, 5th Cross,

Vidhana Soudha Extn.,

Kavidhama Nagar, Laggere

Bangalore-560 058.

Phone : 080-22712264, 22712299

# ಅಕ್ಷರ ಸೂರ್ಯನಿಗೆ ನಮನ

## ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

### ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್ ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದಲ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರೇ. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನು ಮಹತ್ವವನ್ನು ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೆ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು

ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ ಕನ್ನಡ ಪುಸ್ತಕ ಪ್ರಾಧಿಕಾರ ಎಂಬ ಮಾತಿಗೆ ಬೆಲೆ ಬರುತ್ತದೆ. ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು!

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. ಜ್ಞಾನದ ಬಲದಿಂದ ಅಜ್ಞಾನದ ಕೇಡು ಎಂದು ಬಸವಣ್ಣನವರು ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ನಾವಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲ! ಅನೇಕ ತಳವರ್ಗದ ಜನಸ್ತಾನಗಳು ಮೊದಲಬಾರಿಗೆ ಅಕ್ಷರ ಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೂ, ರೂಪಕಗಳಲ್ಲೂ ಕಾಣಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ-ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದವು. 1820ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆಡಂ ವರದಿಗಳು ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದು ಹೋದ ಕಾಲವು ನಿರ್ವಾತವಾಗಿತ್ತೆಂದೂ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೂ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ! ಆ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದಯಕ್ಕೆ ಸಜ್ಜುಗೊಳ್ಳುವ ಅಗತ್ಯವಿದೆಯೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ!

ಕನ್ನಡದ ಜನ ಓದುವ ಮೂಲಕ ಓದುವ ಸಂಸ್ಕೃತಿಯನ್ನು ಬೆಳೆಸುತ್ತಿದ್ದಾರೆ. ಓದು ಎಂಬುದು ಕೇವಲ ಕುರುಡಲ್ಲ. ಅದಕ್ಕೊಂದು ಸಾಂಸ್ಕೃತಿಕ ಹಿನ್ನೆಲೆ ಇದೆ. ಓದೆಂಬುದು ಅಂತಿಮವಾಗಿ ಸಂಸ್ಕೃತಿಯನ್ನು ತಿಳಿಯುವ ಬಗೆ. ಅದು ಅಂತರಂಗವನ್ನು ಬೆಳಸಿಕೊಳ್ಳುವ ಒಂದು ಪರಿ. ಪುಸ್ತಕ ಪ್ರಾಧಿಕಾರವು ಅತಿ ನಮ್ರತೆಯಿಂದ ಈ ಅಂಶಗಳನ್ನು ಭಾವಿಸುತ್ತದೆ; ಅದರಂತೆ ನಡೆಯಲು ಯತ್ನಿಸಿದೆ. ಇಂಥ ಸಾಂಸ್ಕೃತಿಕ ಓದಾಟದಲ್ಲಿ ಹಲವಾರು ಗ್ರಂಥಗಳು ಪ್ರಕಟಗೊಂಡಿವೆ. ಅಂಥ ಪುಸ್ತಕಗಳಲ್ಲಿ ಜನಪ್ರಿಯ ಮಾಲೆಯ ಅಡಿಯಲ್ಲಿ ಪ್ರಕಟವಾಗುತ್ತಿರುವ ಡಾ. ಅರವಿಂದ ಮಾಲಗತ್ತಿ ಅವರ 'ಅಯ್ದ ಕವಿತೆಗಳು': ಬಹುಮುಖ್ಯ ಕೃತಿಯಾಗಿದೆ.

ಪ್ರೊ. ಅರವಿಂದ ಮಾಲಗತ್ತಿ ದಲಿತ-ಬಂಡಾಯ ಪರಂಪರೆಯಲ್ಲಿ ಗಟ್ಟಿದನಿ. ಅವರು ತಮ್ಮ ವಿಮರ್ಶೆ, ಸಂಶೋಧನೆ, ವೈಚಾರಿಕತೆ ಹಾಗೂ ಕಾವ್ಯಾಭಿವ್ಯಕ್ತಿಯ ಸಂದರ್ಭಗಳಲ್ಲಿ ಸುದೀರ್ಘಕಾಲ ಒಂದರೊಡನೆ ಒಂದಾಗಿ ಅವುಗಳ ಮೂಲಕ ತನ್ನನ್ನೂ ತನ್ನ ಒಳಗನ್ನೂ ತನ್ನ ಜನಗಳನ್ನೂ ಸೇರಿಸಿಕೊಂಡೇ ನುಲಿದಿದ್ದಾರೆ. ಅತ್ತ ಅಕ್ಷರಗಳ ಮೂಲಕ ಅಭಿವ್ಯಕ್ತಗೊಂಡ ಸಾಹಿತ್ಯಾಧ್ಯಯನ; ಇತ್ತ ತೋಂಡಿ ಸಂಪ್ರದಾಯದ ಮೂಲಕ ದತ್ತಗೊಂಡ ಜಾನಪದಾಧ್ಯಯನ; ಮತ್ತಿತ್ತ ಆಧುನಿಕ ವೈಚಾರಿಕತೆಯ ಮೂಲಕ ಒಳಗೊಂಡ ರಾಜಕೀಯಾಧ್ಯಯನ-ಅವರ ಸಮಸ್ತವಸ್ತುವಿಷಯ ಪರಿಕರವನ್ನು ನಿಯಂತ್ರಿಸುತ್ತಿವೆ ಹಾಗೂ ಆಕಾರ ಕೊಡುತ್ತಿವೆ. ಇವರ ಸಮಕಾಲಿಕರಾದ ಸಿದ್ಧಲಿಂಗಯ್ಯ, ಕೆ.ಬಿ. ಸಿದ್ಧಯ್ಯ, ಮುಳ್ಳೂರು ನಾಗರಾಜ, ಚಂದ್ರಶೇಖರ ತಾಳ್ಯ, ಲಕ್ಷ್ಮೀಪತಿ ಕೋಲಾರ, ಎಚ್.ಎಸ್. ಶಿವಪ್ರಕಾಶ್ ಮೊದಲಾದವರ ಗಟ್ಟಿದನಿಯು ಕಾವ್ಯಾಭಿವ್ಯಕ್ತಿಯಲ್ಲಿ ನಿರಂತರಗೊಳ್ಳುತ್ತಿರುವಾಗಲೇ ಕವಿತೆಯನ್ನು ಒಳಗೊಂಡ ಸಾಹಿತ್ಯಾಧ್ಯಯನದ ವೈಚಾರಿಕತೆಯ ನೆಲೆಯನ್ನು ಇವರು ಗಟ್ಟಿ ಹಿಡಿದದ್ದು ಪ್ರಮುಖವಾದ ಸಂಗತಿಯೆಂದು ನನ್ನ ತಿಳಿವಳಿಕೆ.

ಅರವಿಂದ ಮಾಲಗತ್ತಿ ಅವರ ಕವಿತೆಗಳ ಲೋಕಕ್ಕೆ 'ಪ್ರವೇಶ' ಬರೆದಿರುವ ಡಾ. ಎಚ್. ಎಸ್. ರಾಘವೇಂದ್ರ ರಾವ್ ಇವರ ಕವಿತೆಗಳ ಪ್ರಾಮುಖ್ಯತೆಯ ನೆಲೆಗಳು ಯಾವುವೆಂಬುದನ್ನು ಚೆನ್ನಾಗಿಯೇ ಗುರುತಿಸಿದ್ದಾರೆ. ಇವರ ಕವಿತೆಯು ವಿಷಾದ ಮತ್ತು ಆಶಾವಾದಗಳೆರಡನ್ನು ಬಹು ಮುಖ್ಯವಾಗಿ ಒಳಗೊಂಡಿವೆಯೆಂಬ ನಿಲುವು ಸರಿಯಾದುದೇ. ಕವಿತೆಯು ಭೂತದ ಕಡೆ ವಿಷಾದವನ್ನೂ ವರ್ತಮಾನದ ಕಡೆ ವಿವೇಕವನ್ನೂ ಭವಿಷ್ಯದತ್ತ ಆಶಾವಾದವನ್ನೂ ಜತೆಜತೆಯಾಗಿ ಹಿಡಿಯುವುದು ಮುಖ್ಯ ಸಂಗತಿಯೆಂದೇ ನಾನು ತಿಳಿಯುತ್ತೇನೆ. ಕನ್ನಡ ಕಾವ್ಯ ಪರಂಪರೆಯಲ್ಲಿ 'ಆಶಾ ಚಿಂತನ' ಪ್ರಮುಖವಾಗಿದೆ. ಇದು 'ಅಕೃತಿ ಲೋಕ'ವನ್ನು ನಮ್ಮ ಮುಂದೆ ತಂದು

ನಿಲ್ಲಿಸುತ್ತದೆ. ಆಶಾವಾದಿತ್ವವು ಸಮಾಜದ ಹೊಸ ನಂಬುಗೆಗಳಿಗೆ ತಾತ್ವಿಕ ಸ್ಪರ್ಶ ನೀಡಬಲ್ಲದು. ಸಮಾಜ-ಕುಟುಂಬ-ವ್ಯಕ್ತಿಗಳ ಪರಸ್ಪರ ಸಾಂಗತ್ಯಕ್ಕೆ ಈ ಆಶಾವಾದಿತ್ವವು ಕೊಡುವ 'ಅಮೃತ' ಯಾವುದೆಂಬುದರ ಬಗೆಗೆ ನಾವು ಇನ್ನು ಅತಿಸೂಕ್ಷ್ಮವಾಗಿ ಪರಿಶೀಲಿಸಬೇಕಾಗಿದೆ. ಹಾಗೆ ಪರಿಶೀಲನೆಗೆ ಒಡ್ಡಿಕೊಳ್ಳುವ ನೆಲೆಯಲ್ಲಿ ಅರವಿಂದ ಮಾಲಗತ್ತಿ, ಸಿದ್ಧಲಿಂಗಯ್ಯ, ಕೆ.ಬಿ. ಸಿದ್ಧಯ್ಯ-ಇವರ ಕವಿತೆಗಳನ್ನು ನಮ್ಮ ವಿಮರ್ಶೆ ಸರಿಯಾಗಿ ನೋಡುವ ಅಗತ್ಯವಿದೆ.

ಪ್ರೊ. ಎಚ್. ಎಸ್. ರಾಘವೇಂದ್ರರಾವ್ ನಮ್ಮ ನಡುವಿನ ಸೂಕ್ಷ್ಮ ಸಂವೇದಿ ಚಿಂತಕರು. ಕಾವ್ಯ, ಕತೆ, ಕಾದಂಬರಿಯಂಥ, ಸೃಜನಶೀಲ ಕೃತಿಗಳ ಅನುಸಂಧಾನವೆಂದರೆ ಅವರಿಗೆ ಬಹುಪ್ರಿಯ. ಒಟ್ಟು ಕನ್ನಡ ಕಾವ್ಯಕ್ಕೆ ಅವರು ಕಳೆದ ಮೂವತ್ತು ವರ್ಷಗಳ ಕಾಲ ಪ್ರತಿಕ್ರಿಯಿಸುತ್ತ ನಡೆದು ಬಂದಿರುವ ಹಾದಿ ಕಡಮೆಯದ್ದೇನಲ್ಲ. ಅಪರೂಪ ಕೃತಿಗಳನ್ನು ಓದುಗರ ಹಾಗೂ ಸಮಾಜದ ನಡುವೆ ತಂದು ವ್ಯಾಖ್ಯಾನಿಸಿ, ವಿಶ್ಲೇಷಿಸಿ ತೋರಿಸಿಕೊಟ್ಟ ಕೀರ್ತಿ ಇವರದೇ. ನಮ್ಮ ಓದುಸಮಾಜವು ಮರೆತು ಹೋಗಿರುವ ಹಲವಾರು ಪಠ್ಯಗಳನ್ನು ಎತ್ತಿಕೊಂಡು ಬಹುಧೀರವಾಗಿ ವ್ಯಾಖ್ಯಾನಿಸಿದ್ದನ್ನು ನಮ್ಮ ಸಾಹಿತ್ಯವಿಮರ್ಶೆ ಈಗಾಗಲೇ ಕಂಡುಕೊಂಡಿದೆ. ಪ್ರೊ. ಅರವಿಂದ ಮಾಲಗತ್ತಿ ಅವರ ಹಲವು ಕವನ ಸಂಕಲನಗಳಿಂದ ಅತ್ಯುತ್ತಮ ಕವಿತೆಗಳನ್ನು ಆಯ್ದು ಜೋಡಿಸಿರುವ ಸಂಪಾದನಕ್ರಮ ನಮ್ಮ ಮೆಚ್ಚುಗೆಗೆ ಖಂಡಿತವಾಗಿ ಪಾತ್ರವಾಗಬಲ್ಲುದೆಂದು ನಾನು ತಿಳಿಯುತ್ತೇನೆ. ಕವಿ ಅರವಿಂದ ಮಾಲಗತ್ತಿ ಅವರ ಕವಿತೆಗಳ ಬಹುಮುಖತೆಯ ವ್ಯಾಪ್ತಿಯನ್ನು ತಿಳಿಯಲು ಡಾ. ಎಚ್.ಎಸ್.ರಾಘವೇಂದ್ರ ರಾವ್ ಬರೆದಿರುವ ಪ್ರಸ್ತಾವನೆ ಹಲವು ದೃಷ್ಟಿಗಳಿಂದ ಮುಖ್ಯವೆನಿಸಿದೆ. ಕವಿ ಮತ್ತು ಸಂಪಾದಕರಿಬ್ಬರಿಗೂ ಪ್ರಾಧಿಕಾರದ ಪರವಾಗಿ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಈ ಸಂಕಲನವು ಸಿದ್ಧವಾಗಿ ಎರಡು ವರ್ಷಗಳೇ ಕಳೆದುವು. ಹಲವಾರು ಕಾರಣಗಳಿಂದ ಇದು ಪ್ರಕಟಗೊಳ್ಳಲು ಸಾಧ್ಯವಾಗಿರಲಿಲ್ಲ. ನಾನು ಕವಿ-ಸಂಪಾದಕರಿಬ್ಬರ ತಾಳ್ಮೆಯನ್ನು ಪರಿಶೀಲಿಸದೆ ಓದುಗಲೋಕಕ್ಕೆ ಈ ಆಯ್ದ ಕವನ ಸಂಕಲನವನ್ನು ಒಪ್ಪಿಸುತ್ತೇನೆ. ಪ್ರಾಧಿಕಾರದ ಸದಸ್ಯಮಿತ್ರರ ಒತ್ತಾಸೆ, ನೆರವು ಇದು ಪ್ರಕಟಗೊಳ್ಳಲು ಕಾರಣವಾಗಿದೆ. ಆಡಳಿತಾಧಿಕಾರಿಗಳಾದ ಎನ್. ತಿಪ್ಪೇಸ್ವಾಮಿ ಅವರು ನನ್ನೊಡನೆ ನಿಂತು ಇದು ಪ್ರಕಟಗೊಳ್ಳಲು ಸಹಾಯಕರಾಗಿದ್ದಾರೆ. ಅಂದವಾಗಿ ಬಹುಶೀಘ್ರವಾಗಿ ಮುದ್ರಿಸಿಕೊಟ್ಟ ತರುಣ ಮುದ್ರಕರಾದ ಶ್ರೀ ಸಿವಿಜಿ ಚಂದ್ರು ಅವರನ್ನೂ ಅವರ ಮಡದಿ ಶ್ರೀಮತಿ ಗಿರಿಜಾ ಚಂದ್ರು ಅವರನ್ನೂ ಕೊಂಡಾಡಲು ಸಂತೋಷವಾಗುತ್ತದೆ. ಕನ್ನಡ ಜನ ಈ ಕಾವ್ಯ ಸಂಕಲನವನ್ನು ಆದರದಿಂದ ಕೈಗೆತ್ತಿಕೊಳ್ಳಬೇಕೆಂದು ಆಶಿಸುತ್ತೇನೆ.

# ಅರವಿಂದ ಮಾಲಗತ್ತಿಯವರ ಕಾವ್ಯ: ಒಂದು ಪ್ರವೇಶಿಕೆ

ಕನ್ನಡ ಕಾವ್ಯದ ಇಂದಿನ ಸನ್ನಿವೇಶದಲ್ಲಿ ಪ್ರವೇಶ ಬಿಂದುಗಳು ಅನೇಕ. ಇವು ಆಯಾ ಕವಿಯ ತಾತ್ವಿಕತೆಯ ಸ್ವರೂಪದಿಂದ ತೀರ್ಮಾನವಾಗುತ್ತಿವೆಯೇ ವಿನಾ ಆಕೃತಿ ಸಂಬಂಧಿಯಾದ ವಿಷಯಗಳಿಂದ ಅಲ್ಲ. ಕೊನೆಗೂ ಮುಖ್ಯವಾಗುವುದು, ಇಪ್ಪತ್ತೊಂದನೆಯ ಶತಮಾನದಲ್ಲಿ ಖಚಿತವಾದ ಆಕಾರಗಳನ್ನು ಪಡೆಯುತ್ತಿರುವ ನವ ಆಧುನಿಕತೆಯ ಸವಾಲುಗಳನ್ನು ಕವಿಯು ಎದುರಿಸುವ ಬಗೆಯೇ ಆಗಿದೆ. ಇಂಥ ಅನುಸಂಧಾನವು, ಗತ ಮತ್ತು ಪ್ರಸ್ತುತಗಳ ನಡುವೆ ಮಾಡಿಕೊಳ್ಳುವ ಆಯ್ಕೆಯು ತಂತಿಯ ಮೇಲಿನ ನಡಿಗೆಯೆನ್ನುವುದರಲ್ಲಿ ಅನುಮಾನವಿಲ್ಲ. ಅದರಲ್ಲೂ ದಲಿತ–ಬಂಡಾಯ ಸಾಹಿತ್ಯದ ಹಿನ್ನೆಲೆಯಿಂದ ಬಂದ ಕವಿಗಳು ಈ ಬಿಕ್ಕಟ್ಟುಗಳನ್ನು ಇನ್ನಷ್ಟು ತೀವ್ರವಾಗಿ ಎದುರಿಸಬೇಕಾಗುತ್ತದೆ. ಹೊರಗಿನಿಂದ ಬರುವ ಮಾರಿಗಳನ್ನು ಎದುರಿಸುವ ಭರತದಲ್ಲಿ ಅಂತರಂಗದ ಶತ್ರುಗಳನ್ನು ನಿರ್ಲಕ್ಷಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಹಾಗೆಂದು ಜಾಗತೀಕರಣ, ಆಧುನೀಕರಣಗಳು ಹಳೆಯ ಜಗಳಗಳನ್ನು ಪಕ್ಕಕ್ಕೆ ತಳ್ಳಿ ಎಲ್ಲವನ್ನೂ ನುಂಗಲಿರುವ ಭವಿಷ್ಯದ ಕತ್ತಲೆಯನ್ನು ನೋಡದೆ ಇರುವುದೂ ಅವರಿಗೆ ಸಾಧ್ಯವಾಗುವುದಿಲ್ಲ. ಅನುಭಾವದ ರಹಸ್ಯಲೋಕದಲ್ಲಿ, ಜಾನಪದ ಪುರಾಣದಲ್ಲಿ ನಡೆಸುವ ನಾಸ್ಟಾಲ್ಜಿಕ್ ಆದ ಯಾನವೂ ಹಲವರಿಗೆ ಹಿಡಿಸದೆ ಇರಬಹುದು.

ಇಂಥ ಸನ್ನಿವೇಶದಲ್ಲಿ ಅರವಿಂದ ಮಾಲಗತ್ತಿಯವರ ಕಾವ್ಯವು ಹಲವು ಕಾರಣಗಳಿಗಾಗಿ ಮುಖ್ಯವಾಗುತ್ತದೆ. ಆಕೃತಿ ಲೋಲುಪವಾದ ವಿಮರ್ಶಾಲೋಕವು ಇವರ ಕಾವ್ಯಕ್ಕೆ ಅಷ್ಟಾಗಿ ಗಮನ ಕೊಟ್ಟಿಲ್ಲ. "ಕಾರ್ಯ", "ಗೌರ್ಮೆಂಟ್ ಬ್ರಾಹ್ಮಣ" ಮುಂತಾದ ಬರೆಹಗಳು ಇವರ ಕವಿತೆಯನ್ನು ಬದಿಗೆ ಸರಿಸಿದವು. ಆದರೆ ಕಥೆ, ಕವಿತೆ, ನಾಟಕ, ಕಾದಂಬರಿ, ವಿಮರ್ಶೆ, ವಿಚಾರ ಮುಂತಾದ ಮಾಧ್ಯಮಗಳಲ್ಲಿ ಇವರು ತೋರಿಸಿರುವ ಪ್ರಯೋಗಶೀಲತೆ ಮತ್ತು ವೈವಿಧ್ಯಗಳು ಮುಖ್ಯವಾದವೆಂದು ನನಗೆ ತೋರುತ್ತದೆ. ಸಿ. ಎನ್. ರಾಮಚಂದ್ರನ್ ಅವರ ಲೇಖನವನ್ನು ಹೊರತು ಪಡಿಸಿದರೆ, ದಲಿತ–ಬಂಡಾಯ ಸನ್ನಿವೇಶದಾಚೆಗಿನ ವಿಮರ್ಶಕರು ಇವರ ಕವಿತೆಯ ಬಗ್ಗೆ ಬರೆದಂತಿಲ್ಲ. ಈ ಮಾತಿಗೆ ನಾನೂ ಅಪವಾದವಲ್ಲ. ಈ ಲೇಖನವು ಅವರ ಕವಿತೆಯ ವಿಭಿನ್ನ ನೆಲೆಗಳನ್ನು ಪರಿಶೀಲಿಸುವ ಹಾಗೂ ಅದರ ಅನನ್ಯತೆಯನ್ನು ಗುರುತಿಸುವ ಉದ್ದೇಶ ಹೊಂದಿದೆ.

ಕುತೂಹಲದ ಸಂಗತಿಯೆಂದರೆ ಇವರ ಕವಿತೆಯ ಮೊದಲ ಹೆಜ್ಜೆಯಿರುವುದು ಹಾಡುಗಳಲ್ಲಿ. ಎಷ್ಟೋ ಸಲ ಬರವಣಿಗೆಯಾಗಿ ಮೈದಳೆಯದ, ತೋಂಡೀ ಎನ್ನಬಹುದಾದ ಅಂದುಂದಿನ ದುಂದುಗಳಲ್ಲಿ. ಉತ್ತರ ಕರ್ನಾಟಕದ ಜನಪದ ಗೀತೆಗಳು ಹಾಗೂ ಬೇಂದ್ರೆಯವರ ಕವಿತೆಗಳು ಇವರ ಮೇಲಿನ ಮೊದಲ ಪ್ರಭಾವವೆಂದು ತೋರುತ್ತದೆ. ಇಂಥ ಕವಿತೆಯ

ಲೋಕದಿಂದ ಶಿಷ್ಟ ಪ್ರಪಂಚಕ್ಕೆ ಬಂದಾಗ ಉಂಟಾದ ಸಹಜ ಸಂಕೋಚವು ಈ ಬಗೆಯ ಕವಿತೆಗಳ ಪ್ರಕಟನೆಯನ್ನು ಮುಂದೆ ಹಾಕಿದಂತೆ ಕಾಣುತ್ತದೆ. ಆದ್ದರಿಂದಲೇ ಸಾಕಷ್ಟು ತಡವಾಗಿ ಪ್ರಕಟವಾದ (೧೯೯೯) "ನಾದ ನಿನಾದ" ಸಂಕಲನದಲ್ಲಿ ಇವರ ಬಹಳ ಹಿಂದೆಯೇ ಬರೆದಿರುವ ಅನೇಕ ಗೀತೆಗಳಲ್ಲಿ ಕೆಲವು ಸಂಕಲಿತವಾಗಿವೆ. ಮಾಲಗತ್ತಿಯವರ ಒಟ್ಟು ಕವಿತೆಗಳ ಸಂದರ್ಭದಲ್ಲಿ ದ್ವೀಪದಂತೆ ಕಂಡರೂ ಇದು ಬಹು ವಿಶಿಷ್ಟವಾದ ಪ್ರಾರಂಭವೆಂದು ನನ್ನ ನಂಬಿಕೆ. ಇಂಥ ಹಲವು ಕವಿತೆಗಳು ಗೇಯತೆ, ನಾದಮಯತೆಗೆ ಒತ್ತು ನೀಡಿದರೂ, ಅವು ದಲಿತ ಪುರಾಣಗಳ ಮರುಸೃಷ್ಟಿಯಲ್ಲಿ ತೊಡಗುವುದಿಲ್ಲ. ಆಧುನಿಕತೆಯನ್ನು ಅಲ್ಲಗಳೆಯುವುದೂ ಇಲ್ಲ. ಅರ್ಥವೂ ವಿಚಾರವಾಗಿ ಪರಿವರ್ತಿತವಾಗುವ ಬಗೆಯಲ್ಲಿ ಅವು ಆಸಕ್ತಿ ತೋರುವುದಿಲ್ಲ. ಬದಲಾಗಿ ಅನುಭವಕಥನವೇ ಅವುಗಳ ಮುಖ್ಯ ನೆಲೆ. ಅವರೇ ಹೇಳುವಂತೆ ಜನಪ್ರಿಯತೆಯನ್ನು ಸಂಪಾದಿಸಬೇಕೆನ್ನುವ ತೀವ್ರ ಹಂಬಲ ಅಲ್ಲಿ ಕೆಲಸ ಮಾಡಿದೆ. ಶಬ್ದಗಳ ನಾದಗುಣವನ್ನು ಅರಸುವ ಈ ಹಂಬಲವನ್ನು, ಅವರ ಕವಿತೆಯು ನಂತರದ ದಿನಗಳಲ್ಲಿ ತಾನೇ ಬಿಡುತ್ತದೆ. ಈ ಕವಿಯು ಯಾವಾಗಲೂ ತನ್ನದೇ ಬಂಡಿಜಾಡುಗಳಲ್ಲಿ ಸಿಕ್ಕಿಕೊಳ್ಳುವುದಿಲ್ಲವೆನ್ನುವುದು ಬಹಳ ಮುಖ್ಯ.

ಕವಿತೆ ಮತ್ತು ಕಥಾ ಸಾಹಿತ್ಯಗಳೆರಡನ್ನೂ ಗಂಭೀರವಾಗಿ ತೆಗೆದುಕೊಂಡು ಅವುಗಳನ್ನು ವಿಶಿಷ್ಟ ಉದ್ದೇಶಗಳಿಗಾಗಿ ಬಳಸಲು ಇವರಿಗೆ ಸಾಧ್ಯವಾಗಿದೆ. "ಕಾರ್ಯ", "ಗೌರ್ಮೆಂಟ್ ಬ್ರಾಹ್ಮಣ"ಗಳ ಸಾಧನೆಯು ಗಮನೀಯವಾದುದು. ಆದರೆ ಅತ್ಯಂತ ಆಶ್ಚರ್ಯಕರವಾದ ಸಂಗತಿಯೆಂದರೆ ಇವರು ಭಾವನಿರ್ಭರವಾದ ಅನುಭವಗಳ ಅಭಿವ್ಯಕ್ತಿಗೆ ಗದ್ಯವನ್ನು ಆರಿಸಿಕೊಂಡು, ಕಡು ವೈಚಾರಿಕವೆನ್ನಬಹುದಾದ ಸಂಗತಿಗಳನ್ನು ಈಚಿನ ಕವಿತೆಗಳಲ್ಲಿ ನಿರೂಪಿಸುತ್ತಿರುವುದು. ಇದು ಅ-ಸಾಮಾನ್ಯವಾದ ಆಯ್ಕೆ. ಕವಿತೆಗೂ ಭಾವ ಪ್ರಕಟನೆಗೂ ಇದೆಯೆನ್ನಲಾದ ನಂಟನ್ನು ಅವರು ಬುದ್ಧಿಪೂರ್ವಕವಾಗಿಯೇ ಮುರಿಯುತ್ತಾರೆ. ಹಾಗೆಂದು ಕವಿತೆಯು ನೀರಸವಾಗದಂತೆ ಅಗತ್ಯವಾದ ವಸ್ತು ಪ್ರತಿರೂಪಗಳನ್ನು ರೂಪಿಸಿಕೊಳ್ಳುತ್ತಾರೆ. ಅವರ ಕವಿತೆಯನ್ನು ಎಚ್ಚರದಿಂದ, ಮಾಮೂಲಿಗಿಂತ ಭಿನ್ನವಾಗಿ, ಓದುವ, ಪರಿಶೀಲಿಸುವ ಅಗತ್ಯ ಒದಗಿರುವುದು ಈ ಕಾರಣದಿಂದಲೇ.

ಎಪ್ಪತ್ತರ ದಶಕದಲ್ಲಿ ಬರೆಯ ತೊಡಗಿದ ಎಲ್ಲ ತರುಣರಿಗೂ ಅನಿವಾರ್ಯವಾಗಿದ್ದ ದಲಿತ-ಬಂಡಾಯ ಸಾಹಿತ್ಯದ ಪ್ರಭಾವವನ್ನು ಸಹಜವಾಗಿಯೇ ಅರವಿಂದರೂ ಒಳಗು ಮಾಡಿಕೊಂಡರು. ಆದರೆ ಅವರ ಕವಿತೆಯು ವಿಷಾದ ಮತ್ತು ಆತ್ಮವಿಮರ್ಶೆಗಳನ್ನು ತನ್ನ ಸ್ಥಾಯಿಯಾಗಿ ಮಾಡಿಕೊಂಡಿತು. ಎಂಥ ಆಕ್ರೋಶದ ಸನ್ನಿವೇಶದಲ್ಲಿಯೂ ಅವರು "ಅನ್ಯವನ್ನು" ದ್ವೇಷದಿಂದ ನೋಡುವುದಿಲ್ಲ. ತಿರಸ್ಕಾರ ಇರಬಹುದು, ದ್ವೇಷವಲ್ಲ. ನಾಳೆ ಮುಂಜಾನೆ ಕ್ರಾಂತಿಯಾಗಬಹುದೆಂಬ ಹುಸಿ ಆಶಯವಂತೂ ಅವರಿಗೆ ಆಗಂತುಕ. ಮೊದಲಿನಿಂದಲೂ "ದಲಿತ" ಪದದ ನಿರ್ವಚನ ಹಾಗೂ ಅದು ಬಂಡಾಯದೊಂದಿಗೆ ರೂಪಿಸಿಕೊಳ್ಳುವ ಸಾಮ್ಯ-ವೈಷಮ್ಯಗಳಲ್ಲಿ ಆಸಕ್ತಿ ತೋರಿದ ಈ ಕವಿಯು, ಸಂಘಟನೆಯಲ್ಲಿ ಆಸಕ್ತರಾದಾಗಲೂ ಹೃದಯವುಳ್ಳ ಹಾದಿಯನ್ನೇ ಆರಿಸಿಕೊಂಡಿದ್ದಾರೆ. ಪ್ರತಿಭಟನೆಯ ಹೆಸರಿನಲ್ಲಿ ಬೇಳೆ ಬೇಯಿಸಿಕೊಳ್ಳುವ ಪ್ರವೃತ್ತಿಯನ್ನು ಕಟುವಾಗಿ ಆದರೆ ಪರೋಕ್ಷವಾಗಿ

ಟೀಕಿಸಿದ್ದಾರೆ. "ಮೂರನೆಯ ಕಣ್ಣು" ಸಂಕಲನದ ಕೆಲವು ಕವನಗಳಲ್ಲಿ ಇಂಥ ಬಾಣಗಳನ್ನು ಗುರುತಿಸಬಹುದು.

"ಮೂಕನಿಗೆ ಬಾಯಿ ಬಂದಾಗ" ಅವರ ಮೊದಲ ಸಂಕಲನವಾದರೂ, ಆಯ್ದ ಕವಿತೆಗಳ ಸಂಕಲನವೂ ಹೌದು. ಏಕೆಂದರೆ ಅವು ದಲಿತಸಹಜವಾದ ಸಾಮಾಜಿಕ ಪ್ರಜ್ಞೆಯ ಆಚೆಗಿನ ಕವಿತೆಗಳನ್ನು ಬೇಕೆಂದೇ ಹೊರಗಿಟ್ಟಿವೆ. ಸಿದ್ಧಲಿಂಗಯ್ಯನ ಮತ್ತು ದೇವನೂರ ಮಹಾದೇವರ ಬರವಣಿಗೆಯ ಪ್ರಖರತೆಯ ಇತರ ಕೆಲವು ಮಾದರಿಗಳನ್ನು ನಿರ್ಲಕ್ಷ್ಯಕ್ಕೆ ಒಳಪಡಿಸಿದವು. ಅಲ್ಲದೆ ಎಂಬತ್ತರ ದಶಕದ ಮೊದಲ ಭಾಗದಲ್ಲಿ ದಲಿತಬಂಡಾಯದ ಹೆಸರಿನಲ್ಲಿ ಬಂದುದೆಲ್ಲವನ್ನೂ ಕೊಂಚ ಅಸಹನೆ ಹಾಗೂ ಪೂರ್ವಾಗ್ರಹಗಳಿಂದ ನೋಡುವ ಮನೋಭಾವವು ಆ ಚಳುವಳಿಯ ಚೌಕಟ್ಟಿನ ಹೊರಗೆ ಮೂಡಿಬಂದಿತ್ತು. ಸಂಘಟನೆಯಲ್ಲಿ ಭಾಗವಹಿಸುವುದಕ್ಕೂ ಸಾಹಿತಿಯೆಂದು ಗುರುತಿಸಿಕೊಳ್ಳುವುದಕ್ಕೂ ಅಂತರವಿಲ್ಲದ ಸನ್ನಿವೇಶದಲ್ಲಿ ಹೊಸ ಪ್ರತಿಭೆಗಳು ನಿರ್ಲಕ್ಷಿತವಾದವು. ಚೆನ್ನಣ್ಣ ವಾಲೀಕಾರರ 'ಬೇಲ್ಯ"ಇರಲಿ ಅರವಿಂದರ ಈ ಕವಿತೆಗಳಿರಲಿ ರನ್ನನ ಆತ್ಮಪ್ರತ್ಯಯಕ್ಕೆ ಹೊಸ ಆಯಾಮ ಕೊಡುವ ಇಲ್ಲಿನ ಕವಿತೆಗಳು ನಿಜಕ್ಕೂ "ಹೊಲೆ ಮಾದಿಗರ ಹಾಡು"ಗಿಂತ ಬೇರೆಯಾಗಿದ್ದವು. ವಿಷಾದ ಮತ್ತು ಕಥನಗಳು ಇಲ್ಲಿನ ಮೂಲಸೆಲೆ. ಸಿದ್ದಲಿಂಗಯ್ಯನವರ ಶಕ್ತಿಯ ಸೆಲೆಗಳು ಇತಿಹಾಸ, ತರ್ಕ, ನಿಯತಲಯ ಮತ್ತು ಆಡುಮಾತುಗಳಾದರೆ ಇಲ್ಲಿ ವೈಯಕ್ತಿಕ ಅನುಭವಗಳೇ ಕವಿತೆಯ ಪ್ರೇರಣೆಗಳಾಗುತ್ತವೆ. ಅನುಭವ ಎಂದರೆ ಕವಿಯದು ಹಾಗೂ ಅವನ ನಿಕಟ ಪರಿಸರದ ವ್ಯಕ್ತಿಗಳದು. ಅಲ್ಲಿನ ಅವಮಾನವು ಸಂವೇದನ ಶೀಲತೆಯನ್ನು ಕಳೆದುಕೊಳ್ಳದೆ, ವಾಚ್ಯವಾಗದೆ ಆಕ್ರೋಶವಾಗುತ್ತದೆ. ತಾವೇ ಮಾಡಿಕೊಟ್ಟ ಚಪ್ಪಲಿಗಳು ತಮ್ಮ ಗುಡಿಸಲುಗಳ ಬಾಗಿಲಿಗೆ ರಾತ್ರಿ ಬಂದು ಮುಂಜಾನೆ ಮಾಯಾವಾಗುವುದನ್ನು ಹೇಳಿಕೊಳ್ಳುವ ಯಾತನೆ ಈ ಬಗೆಯದು. ಇದು ಬದಲಾಗಲಾರದು ಎನ್ನುವ ವಾಸ್ತವ ಪ್ರಜ್ಞೆ ಮತ್ತು ಅಪರೂಪದ ಆತ್ಮವಿಮರ್ಶೆಗಳು ಈ ಕವಿತೆಗಳನ್ನು ವಾಚಾಳಿತನದಿಂದ ಕಾಯುತ್ತವೆ. "ಬಾಡಗಿ ಜನಿವಾರ"ದಂತಹ ಕವಿತೆಯು ಆಮೇಲೆ ಗದ್ಯ ರೂಪದಲ್ಲಿಯೂ ಮೈದಳೆದಿದೆ. ಈ ಸಂಕಲನದಲ್ಲಿ "ಮೂಕನಿಗೆ ಬಾಯಿ ಬಂದಾಗ" ಮತ್ತು "ಮೂಕ ಮಾತನಾಡಿದಾಗ" ಎಂಬ ಎರಡು ಭಾಗಗಳಿರುವುದು ಆಕಸ್ಮಿಕವಲ್ಲ. ಅಚಾನಕ್ಕಾಗಿ ಮಾತಿನ ಶಕ್ತಿ ಬಂದಾಗ ಇರುವ ಹಿಂಜರಿಕೆ ಮತ್ತು ಉತ್ಸಾಹಗಳೆರಡನ್ನೂ ಇಲ್ಲಿ ಕಾಣಬಹುದು. ನನಗೆ ಮುಖ್ಯವಾದ ಸಂಗತಿಯೆಂದರೆ ಸಮುದಾಯದ ಅನುಭವಗಳನ್ನು ದಾಖಲೆ ಮಾಡುವ, ಅದರ ಪ್ರತಿನಿಧಿಯಾಗುವ ಅಪೇಕ್ಷೆ ಇರುವಾಗಲೂ ಈ ಕವಿಯು ವೈಯಕ್ತಿಕವಾದ ಅನುಭವಗಳಿಗೆ ಎರವಾಗದಿರುವುದು. ಅಂದಿನ ದಲಿತ-ಬಂಡಾಯ ಕಾವ್ಯದಲ್ಲಿ ಈ ಸೆಲೆಯು ಅಪರೂಪವೆಂದೇ ಹೇಳಬಹುದು. ಕಾವ್ಯವಿರಲಿ, ಅಂದಿನ ಕಥಾಸಾಹಿತ್ಯವೂ ಸಾಮಾನ್ಯೀಕರಣದ ನಿಟ್ಟಿನಲ್ಲಿಯೇ ಚಲಿಸುತ್ತಿತ್ತು.

ನಾಲ್ಕು ವರ್ಷಗಳ ನಂತರ ಬಂದ "ಕಪ್ಪುಕಾವ್ಯ" ಕೇವಲ ಇಪ್ಪತ್ತೈದು ಕವಿತೆಗಳ ಸಂಕಲನ. ಇದರ ನಂತರ ಹನ್ನೊಂದು ವರ್ಷಗಳವರೆಗೂ ಇನ್ನೊಂದು ಸಂಕಲನ ಬರಲಿಲ್ಲ. ಈ ಮೌನದ ಕಾರಣ ಮತ್ತು ಸೂಚನೆಗಳು ಮಾಲಗತ್ತಿಯವರ ಕವಿತೆಯು ಪಡೆದ ಮಹತ್ವದ

ತಿರುವಿಗೆ ಎಡೆ ಮಾಡಿಕೊಟ್ಟಿವು. ಇದು ಸನ್ನಿವೇಶದ ಒತ್ತಡಗಳಿಗೆ ತನ್ನನ್ನು ಕೊಟ್ಟುಕೊಂಡ ಸಂಕಲನ. ಇಲ್ಲಿನ ಆಶಯಗಳೊಂದಿಗೆ ಜಗಳವಿರದಿದ್ದರೂ ಅವು ಚಳುವಳಿಯ ಹರಿವಿನಲ್ಲಿ ತನ್ನನ್ನು ಕಳೆದುಕೊಳ್ಳ ಬಯಸಿದ ಪ್ರಾಮಾಣಿಕ ಲೇಖಕನ ಆಶಯಗಳು. ಭ್ರಮನಿರಸನಕ್ಕಿಂತ ಮೊದಲು ಭ್ರಮೆಗಳಿರಬೇಕಲ್ಲ. ಪ್ರಾದೇಶಿಕವಾದ ಭಾಷೆ, ಇಂದ್ರಿಯಗಮ್ಯ ವಿವರಗಳು ಹಾಗೂ ರೂಪಕಗಳನ್ನು ಇಲ್ಲಿಯೂ ನೋಡಬಹುದಾದರೂ ಇವು ತಮ್ಮ ಸಂಗಾತಿಗಳ ಕವಿತೆಗಳಿಗಿಂತ ಬಹಳ ಭಿನ್ನವಲ್ಲ.

೧೯೮೫ ರಿಂದ ೧೯೯೬ರವರೆಗಿನ ಹನ್ನೊಂದು ವರ್ಷಗಳು ಮಾಲಗತ್ತಿಯವರ ವ್ಯಕ್ತಿತ್ವ ಹಾಗೂ ಕಾವ್ಯ ಕೇಂದ್ರಗಳಲ್ಲಿ ಬಹಳ ಮಹತ್ವದ ಬದಲಾವಣೆಗಳನ್ನು ತಂದವು. ಅಂಥದೊಂದು ಸಂಭವ ಜರುಗದಿದ್ದರೆ ಅವರ ಕವಿತೆಯ ಬಗ್ಗೆ ಇಷ್ಟೊಂದು ಉತ್ಸಾಹದಿಂದ ಬರೆಯುವ ಅಗತ್ಯವೇ ಇರಲಿಲ್ಲ. ಇದು ಕೇವಲ ಕಾವ್ಯಪ್ರತಿಭೆಯ ಅಥವಾ ಸಂವಹನಶೀಲತೆಯ ಪ್ರಶ್ನೆಯಲ್ಲ. ಕನ್ನಡ ಕವಿಗಳು ಇದುವರೆಗೆ ಮುಖಾಮುಖಿ ಯಾಗದಿರುವ ವೈಚಾರಿಕ ಹಾಗೂ ತಾತ್ವಿಕ ಪ್ರಶ್ನೆಗಳಿಗೆ, ಗಂಭೀರವಾಗಿ ಕವಿತೆಯ ನೆಲೆಯಲ್ಲಿಯೇ ಮುಖಾಮುಖಿಯಾಗುವ ಎಚ್ಚರ ಮತ್ತು ಸಾಮರ್ಥ್ಯವನ್ನು ಇವರ ಹಲವು ಕವಿತೆಗಳು ತೋರಿಸುತ್ತವೆ. ಇಲ್ಲಿನ ಕವಿ ಬೇಂದ್ರೆಯವರನ್ನು ಹಾಗೆಯೇ ಗೋಪಾಲಕೃಷ್ಣ ಅಡಿಗರನ್ನು ಪ್ರೀತಿ ಕುತೂಹಲಗಳಿಂದ ಗ್ರಹಿಸಿದ್ದಾನೆ. ಅದೇ ರೀತಿಯಲ್ಲಿ ಇಲ್ಲಿನ ಕವಿತೆಗಳ ಆಕೃತಿಯು ಚೆನ್ನವೀರ ಕಣವಿಯವರ "ಮಣ್ಣಿನ ಮೆರವಣಿಗೆ" ಸಂಕಲನದ ಅನೇಕ ಕವಿತೆಗಳನ್ನು ಆಕೃತಿಯ ನೆಲೆಯಲ್ಲಿ ನೆನಪಿಗೆ ತರುತ್ತವೆ. ಆಶಯಗಳ ನೆಲೆಯಲ್ಲಿ ಅವರುಗಳಿಂದ ಭಿನ್ನವಾಗಲೂ ವಿಧಾನ ಮತ್ತು ಪರಿಕರಗಳು ಆ ಪರಂಪರೆಯಲ್ಲಿ ಮೂಡಿಬಂದವು.

ಸಮಕಾಲೀನವಾದ ಜಾಗತಿಕ, ರಾಷ್ಟ್ರೀಯ ಹಾಗೂ ಸಾಂಸ್ಕೃತಿಕ ವಿದ್ಯಮಾನಗಳಿಗೆ ಅತ್ಯಂತ ತೀವ್ರವಾಗಿ ಸ್ಪಂದಿಸಿ, ಎಲ್ಲ ಸಂದರ್ಭಗಳಲ್ಲಿಯೂ ಆಧುನಿಕವಾದ, ಜನಪರವಾದ ನಿಲುವುಗಳನ್ನು ತೆಗೆದುಕೊಂಡ ಮತ್ತು ಇವೆಲ್ಲವನ್ನೂ ಕವಿತೆಗಳ ಒಡಲಿನಲ್ಲಿಯೇ ಅಳವಡಿಸಿಕೊಂಡ ಅಪರೂಪದ ಕವಿಗಳಲ್ಲಿ ಮಾಲಗತ್ತಿಯವರೂ ಒಬ್ಬರು. ಎಚ್. ಎಸ್. ಶಿವಪ್ರಕಾಶ್ ಅವರನ್ನು ಹೊರತು ಪಡಿಸಿದರೆ ಇಷ್ಟು ಸಮರ್ಥವಾದ ಇನ್ನೊಂದು ನಿದರ್ಶನ ನನಗೆ ಹೊಳೆಯುತ್ತಿಲ್ಲ. ಇವರು ಶಿವಪ್ರಕಾಶರ ಹಾಗೆ ಇತಿಹಾಸ, ಪುರಾಣ, ಅನುಭಾವಗಳ ಗೊಡವೆಗೆ ಹೋಗದೆ, ವರ್ತಮಾನದ ಅನುಸಂಧಾನ ಮಾಡುವುದರಿಂದ ಅವರಿಗಿಂತ ಭಿನ್ನರಾಗುತ್ತಾರೆ. ತನ್ನ ದಲಿತ ಬೇರುಗಳನ್ನು ಜೀವಂತವಾಗಿ ಉಳಿಸಿಕೊಂಡಾಗಲೂ ಹೆಚ್ಚು ವೈಶ್ವಿಕವಾದ, ವಿಶಾಲವಾದ ನೆಲೆಗಳನ್ನು ಒಳಗೊಳ್ಳುವ ಇಲ್ಲಿನ ಕವಿತೆಗಳು ಹೇಗೆ ಮುಖ್ಯವೆಂದು ವಿವರಿಸುವ ಆಸೆ ನನಗಿದೆ. ಸಿ. ಎನ್. ರಾಮಚಂದ್ರನ್ ಅವರು ಈ ಕೆಲಸವನ್ನು ಸಾಕಷ್ಟು ಮಾಡಿದ್ದಾರೆ. ನನ್ನ ಬರವಣಿಗೆಯು ಅವರ ಹೇಳಿರುವ ಅನೇಕ ಸಂಗತಿಗಳನ್ನು ಗೃಹೀತವಾಗಿ ತೆಗೆದುಕೊಂಡು, ಕೆಲವೊಮ್ಮೆ ಮತ್ತೆ ಹೇಳಿ ಮುಂದುವರಿಯುತ್ತದೆ. ಈ ಸಂಕಲನದ ಪ್ರಮುಖ ಕಾಳಜಿಗಳು ನಂತರದ ಸಂಕಲನವಾದ "ಸಿಲಿಕಾನ್ ಸಿಟಿ ಮತ್ತು ಕೋಗಿಲೆ"ಯಲ್ಲಿ ಸಮರ್ಥವಾಗಿ ಮುಂದುವರೆದಿವೆ. ನಾನು ಅವೆರಡನ್ನೂ ಒಟ್ಟಿಗೆ ಗಮನಕ್ಕೆ ತಂದುಕೊಳ್ಳುತ್ತೇನೆ.

ಈ ಸಂಕಲನದ ಹದಿನೇಳು ಕವಿತೆಗಳು ನೀಳ್ಗವಿತೆಗಳು. ಒಂದೆರಡು ಪುಟಗಳ ಶೀಘ್ರ ಸ್ಖಲನದ ಕಾಲದಲ್ಲಿ ಈ ಬೆಳವಣಿಗೆಯೇ ಗಮನೀಯವಾಗುತ್ತದೆ. ಶಿವಪ್ರಕಾಶ್, ವೆಂಕಟೇಶ್‌ಮೂರ್ತಿ, ಕೆ. ಬಿ. ಸಿದ್ದಯ್ಯ, ಶಿವತೀರ್ಥನ್, ಮುಳ್ಳೂರು ನಾಗರಾಜ, ಮುನಿಶಾಮಪ್ಪ, ಚಂದ್ರಶೇಖರ ತಾಳ್ಯ, ಲಕ್ಷ್ಮೀಪತಿ ಕೋಲಾರ ಮುಂತಾದ ಹಲವು ಮಧ್ಯ ವಯಸ್ಕರು, ತರುಣರು ಈ ದಾರಿಯನ್ನು ಆರಿಸಿಕೊಂಡರು. ಆದರೆ ಸಮಕಾಲೀನ ಪ್ರಸ್ತುತತೆಯನ್ನು ಪಡೆದ ಪುರಾಣ ಅಥವಾ ಇತಿಹಾಸ ಸೃಷ್ಟಿಯು ಅವರೆಲ್ಲರ ದಾರಿಯಾಗಿತ್ತು. ಆದರೆ ಮಾಲಗತ್ತಿಯವರ ಕವಿತೆಗಳು ಆ ಆಯ್ಕೆಯನ್ನು ಮಾಡಿಕೊಳ್ಳುವುದಿಲ್ಲ. ಅವರದು ಕಥನವಾದರೂ ಅಲ್ಲಿ ಕಥೆಯಿಲ್ಲ. ವಿಚಾರಗಳ ಮಂಡನೆಯ ಸಂಗಡವೇ ಒಗಟುಗಳಂಥ ರೂಪಕಗಳು ಅಲ್ಲಿ ಇಡಿಕಿರಿಯುತ್ತವೆ. ಕಳೆದ ಎರಡು ದಶಕಗಳ ಕನ್ನಡ ಸಾಹಿತ್ಯದ ಹಾಗೂ ದಲಿತ ಬಂಡಾಯ ಚಳುವಳಿಯ ಬೆಳವಣಿಗೆಗಳ ಪರಿಚಯವಿರುವವರು ಮಾತ್ರ ಇಲ್ಲಿನ ಹಲವು ಒಗಟುಗಳನ್ನು ಬಿಡಿಸಬಲ್ಲರು, ರೂಪಕಗಳನ್ನು ಗ್ರಹಿಸಬಲ್ಲರು. "ಚಟ್ಟ ತೊಟ್ಟಿಲು ಭೂಮಿ", "ಗಂಡಭೇರುಂಡ" ಮುಂತಾದ ಕವಿತೆಗಳನ್ನು ಈ ನೆಲೆಯಲ್ಲಿ ಮಾತ್ರವೇ ಗ್ರಹಿಸಲು ಸಾಧ್ಯ. ಏಕೆಂದರೆ ಅರವಿಂದರು ಇಲ್ಲಿ ತಮ್ಮ ಕಾಲದ ಸಾಂಸ್ಕೃತಿಕ ಸಂಗತಿಗಳಿಗೆ ಕೂಡ ಕವಿತೆಯ ಮೂಲಕವಾಗಿಯೇ ತೀವ್ರವಾಗಿ ಪ್ರತಿಕ್ರಿಯಿಸುತ್ತಿದ್ದಾರೆ. ವ್ಯಕ್ತಿಗಳ ನೆಲೆಯಲ್ಲಿ, ಹಾಗೇ ಸನ್ನಿವೇಶಗಳ ನೆಲೆಯಲ್ಲಿ. ಅವರು ಕ್ರಮೇಣ ಪಡೆದುಕೊಂಡ ಒಂಟಿತನಕ್ಕೆ ಕಾರಣ ಕೂಡ ಇಲ್ಲಿಯೇ ಇರುವಂತೆ ಕಾಣುತ್ತದೆ.

ತನ್ನ ವೈಯಕ್ತಿಕ ಹಾಗೂ ಸಾಮುದಾಯಿಕ ನೆಲೆಗಳ ಬಗೆಗಿನ ಕಾಳಜಿಯನ್ನು ಕಳೆದುಕೊಳ್ಳದೆ, ಒಟ್ಟು ಭಾರತೀಯ ಸಮಾಜವೇ ಎದುರಿಸುತ್ತಿರುವ ಸಮಸ್ಯೆಗಳ ಕಡೆ ಗಮನ ಹರಿಸಿರುವುದು ಇಲ್ಲಿನ ಮುಖ್ಯ ನೆಲೆ. "ವಿದ್ಯುತ್ ತಂತಿಗಳು" ಎನ್ನುವ ಕವಿತೆಯು ಇದನ್ನು ರೂಪಕಗಳ ಭಾಷೆಯಲ್ಲಿ ಮಂಡಿಸುತ್ತದೆ. ಪರದೇಶೀ ಹಾವು ಮತ್ತು ಸ್ವದೇಶೀ ಸರ್ಪ ಇವೆರಡರ ಸಹಯೋಗವನ್ನು ಗ್ರಹಿಸಿದ ನಂತರ ಎರಡರಲ್ಲಿ ಯಾವುದನ್ನೂ ಆರಿಸಿಕೊಳ್ಳಲು ಸಾಧ್ಯವಿಲ್ಲವೆನ್ನುವ ತಿಳಿವಳಿಕೆ ಮೂಡುತ್ತದೆ.

"ಕನ್ನಡದ ಹಾವುಗಾರಗೆ ಗೊತ್ತು
ದೇಶೀ ಸರ್ಪಗಳ ಕೆಣಕಿದರೆ
ಕೈಯಲ್ಲಿ ಮಂತ್ರದಂಡವೂ ಇಲ್ಲ, ಮಾಯದ ಚಾಪೆ, ಟೋಪಿಯೂ ಇಲ್ಲ;
ಈ ಸ್ವದೇಶಿಯ ಬಡ ಹಾವುಗಳು ಬದುಕುಳಿಯಲು
ವಿದೇಶೀ ಸರ್ಪಗಳೇ ಮದ್ದು" (ಆಯ್ದ ಕವನಗಳು, ಪುಟ ೧೦೭)

"ಸಾಫ್ಟ್‌ವೇರ್ ಮತ್ತು ಎಮ್ಮೆ", "ಪಂಡರೋಳ ಪೆಟ್ಟಿಗೆ" ಮುಂತಾದ ಕವಿತೆಗಳಲ್ಲಿಯೂ ಇಂತಹುದೇ ಆಲೋಚನೆಗಳ ಮುಂದುವರಿಕೆಯನ್ನು ಗುರುತಿಸಬಹುದು. ಕುತೂಹಲದ ಸಂಗತಿಯೆಂದರೆ, "ರಾಷ್ಟ್ರ", "ದೇಶಭಕ್ತಿ" ಮುಂತಾದ ಪರಿಕಲ್ಪನೆಗಳು ಪ್ರಶ್ನಿತವೂ ನಿರಾಕರಿತವೂ ಆಗುತ್ತಿರುವ ಈ ದಿನಗಳಲ್ಲಿ ಮಾಲಗತ್ತಿಯವರು ದೇಶದ ಬಗೆಗಿನ ಖಚಿತವಾದ ಕಾಳಜಿಗಳನ್ನು ವ್ಯಕ್ತಪಡಿಸುತ್ತಾರೆ. ತನ್ನ ಸಮುದಾಯದ ಇತಿಹಾಸದ ದಾರುಣ ನೆಲೆಗಳ

ಸ್ಪಷ್ಟ ಅರಿವು ಇರುವಾಗಲೂ, "ಕಮಲದ ಪರಾಗ" ಮತ್ತು "ಗಂಗಾಧರನ ಸೇನೆ"ಗಳ ದುರುದ್ದೇಶಗಳನ್ನು ಮರೆಯದಾಗಲೂ ಈ ನಿಲುವನ್ನು ಅವರು ಬಿಡುವುದಿಲ್ಲ. "ಬಂಡಾಯವು ಭಾರತೀಯ ಮನಸ್ಸನ್ನೂ ಸಂಪೂರ್ಣವಾಗಿ ಗ್ರಹಿಸಲಿಲ್ಲ.... ಯಾವ ವ್ಯವಸ್ಥೆಯ ವಿರೋಧಿಸಲು ಬಂಡಾಯ ಮುಂದಾಯಿತೋ ಅಪ್ರತ್ಯಕ್ಷವಾಗಿ ಆ ವ್ಯವಸ್ಥೆಯಾಗಿ ಅಡಿಯಾಳಾಗಿ ಛಿದ್ರವಾಯಿತು. ಹೀಗಾಗಿ ಬಂಡಾಯ ಪ್ರತಿಭಟಿಸುವುದನ್ನು ಕಲಿಸಿತೇ ವಿನಃ ಸಮಾಜದೊಂದಿಗಿದ್ದು ಬದುಕುವುದನ್ನು ಕಲಿಸಲಿಲ್ಲ.... ಗಡಿ ಭಾನಗಡಿ, ಭಾಷಾ ಭಾನಗಡಿ, ಪ್ರತ್ಯೇಕತೆಯ ಸೊಲ್ಲು ತಾಂಡವವನ್ನು ಆರಂಭಿಸಿವೆ. ಜಾತೀಯತೆ, ಮತೀಯತೆ, ಧರ್ಮಾಂಧತೆ ಇವುಗಳಿಂದ ಕೂಡಿದ ಹಿತಾಸಕ್ತಿಯ ಗುರಿ, ರಾಷ್ಟ್ರದ ಬುಡವನ್ನೇ ಅಲುಗಾಡಿಸುವಂತೆ ಭಾಸವಾಗುತ್ತಿದೆ. ಒಟ್ಟಿನಲ್ಲಿ ಈ ತ್ರಿವಳಿ ರಕ್ಕಸರ ಇರುವಿಕೆ ನವೋದಯದ ಸಂದರ್ಭವನ್ನು ನೆನಪಿಗೆ ತರುತ್ತದೆ. ಹೀಗಾಗಿ ನಾವಿಂದು ನವೋದಯದ ಅಂದಿನ ಮಾನಸಿಕ ಸ್ಥಿತಿ ಮತ್ತು ಭಾವನೆಗಳನ್ನು ಹಾಗೂ ಇಂದು ನಾಳಿನ ಬದುಕಿನ ಚಿಂತನಾಕ್ರಮವನ್ನು ಬೆರಸಿ ಹೊಸ ಹೆಜ್ಜೆ ಹಾಕಬೇಕಾಗಿದೆ. ಅದಕ್ಕೆ ಸಂಯುಕ್ತವಾದ'ದ ಮಾರ್ಗ ಅಗತ್ಯವಾಗಿದೆ. ಇವು ಕೇವಲ ಲೇಖನಗಳಲ್ಲಿ ಪ್ರಕಟವಾದ ವಿಚಾರಗಳಾಗಿದ್ದರೆ ಕಾವ್ಯದ ಪರಿಶೀಲನೆಯ ಸಂದರ್ಭದಲ್ಲಿ ನಿರ್ಣಾಯಕವಾಗುತ್ತಿರಲಿಲ್ಲ. ಆದರೆ ಆವರ ಕಾವ್ಯವೇ ಆ ನೆಲೆಯಲ್ಲಿ ನಿಂತಿರುವಂತೆ ನನಗೆ ತೋರುತ್ತದೆ. ಇದು ಮುಖಾಮುಖಿಯ ದಾರಿಯಲ್ಲ. ಹೊಂದಾಣಿಕೆ ದಾರಿ. ವಾಸ್ತವವಾಗಿ ಉದಾರೀಕರಣ ಮತ್ತು ಜಾಗತೀಕರಣಗಳ ಮೂಲಕ ನಾವು ಆಹ್ವಾನಿಸಿರುವ ಹೊರಗಿನ ರಾಕ್ಷಸನಿಗೆ ಹೋಲಿಸಿದರೆ ಜಾತೀಯತೆ ಮತ್ತು ಸಮಾಜೋರಾಜಕೀಯದ ಮುಖವಾಡ ಧರಿಸಿರುವ ರಾಕ್ಷಸರು ಗೌಣವೆಂದೇ ಮಾಲಗತ್ತಿಯವರು ಹೇಳುತ್ತಾರೆ. ಇವೆಲ್ಲವೂ ಪರಿಶೀಲನೆಗೆ ಅರ್ಹವಾದ ವಿಚಾರಗಳೆನ್ನುವುದರ ಜೊತೆಗೆ, ಕವಿತೆಯು ಇವೆಲ್ಲವನ್ನೂ ಒಳಗೊಳ್ಳುವ ಸಾಹಸ ಮಾಡುತ್ತಿದೆಯೆನ್ನುವುದು ಮುಖ್ಯ. ಕೊನೆಗೂ ಕವಿಯನ್ನು ಪರಿಹಾರ ನೀಡುವ ಮಾಂತ್ರಿಕನೆಂದು ಪರಿಗಣಿಸಲು ಸಾಧ್ಯವಿಲ್ಲ. ಈ ಕವಿಗೆ ಸರಳವಾದ ಸರ್ವಸಮ್ಮತವಾದ ಗ್ರಹಿಕೆಗಳಲ್ಲಿ ಆಸಕ್ತಿಯಿಲ್ಲ. ಮುಖವಾಡಗಳನ್ನು ಕಳಚುವ ಈ ಆಸಕ್ತಿಯು ಅಪೇಕ್ಷಣೀಯವೇ. ಆದರೆ ರಾಜಕೀಯವಾದ ಪರ್ಯಾಯಗಳಲ್ಲಿ ಆಯ್ಕೆಯ ಅಗತ್ಯವೂ ಇದೆಯೆಂದು ನನಗೆ ತೋರುತ್ತದೆ. ಇವರ ಕವಿತೆಗಳಲ್ಲಿ ಮಾರ್ಕ್ಸ್, ಲೋಹಿಯಾಗಳ ಮಾತು ಹಾಗಿರಲಿ ಅಂಬೇಡ್ಕರ್ ಅವರ ಪ್ರಸ್ತಾಪವೂ ಅಪರೂಪವೇ. ಗಾಂಧಿಯವರ ಮೇಲೆ ಒಂದು ಆಕರ್ಷಕ ಕವಿತೆಯಿದೆಯಷ್ಟೆ. ಅವರು ಹೇಳುವ "ಅಂತರಿಕ ದ್ವಂದ್ವಗಳು" ಹಲವು ನೆಲೆಗಳಲ್ಲಿ ಅವರ ಕವಿತೆಯ ದಿಕ್ಕುಗಳನ್ನು ನಿರ್ಧರಿಸುತ್ತವೆ. ಯಾವುದೇ ಭ್ರಮೆಗೆ ಒಳಗಾಗಬಯಸದ ಬೌದ್ಧಿಕ ಪ್ರಾಮಾಣಿಕತೆಯು ಇಲ್ಲಿನ ಕವಿತೆಗಳ ಲಕ್ಷಣವೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಮನುಷ್ಯಸ್ವಭಾವದಲ್ಲೇ ಇದೆಯೆಂದು ಅವರು ಭಾವಿಸುವ ಸಹಕಾರ, ಪ್ರೀತಿಗಳನ್ನು ಪರಿಹಾರ ಸೂತ್ರವೆಂದು ಬಗೆಯುವುದು ಕಷ್ಟವಾಗುತ್ತದೆ. ಹುಸಿ ರಾಮಬಾಣಗಳಿಗೆ ಮರುಳಾಗದೆ, ಸಿನಿಕರಾಗದೆ ಸಾಗುವುದು ಇಕ್ಕಟಿನ ಹಾದಿ. ವ್ಯಕ್ತಿಯ ವರ್ತನೆಗೆ ಸೂಕ್ತವೆಂದು ತೋರುವ ದಾರಿಯು, ಸಮುದಾಯಗಳಿಗೂ ಸರಿಯೇ ಎನ್ನುವುದು ಮುಖ್ಯ ಪ್ರಶ್ನೆ. "ಕಡಲುಪ್ಪು ಕಾವ್ಯ" ಕವಿತೆಯ ಕೊನೆಯಲ್ಲಿ ಬರುವ ಈ ಸಾಲುಗಳು ನಿರ್ಣಾಕವಾಗಿವೆ.

"ಇತಿಹಾಸದ ಚಕ್ಕಡಿ, ಚಕ್ರದ ಬಾಯಿಯಲಿ
ಪರಿಮಳ–ಬಣ್ಣಗಳಿಲ್ಲದ ಹೂಗಳ ರಾಶಿಯ ಮೊಳಗು
ನೆಲಸಮವಾಗೆ ನೀರು ಹರಿಯುವುದು
ಉಪ್ಪು ಸಕ್ಕರೆಯ ಸಂಜಾತ
ಸಮರಸದ ಜೋಗದ ಜಲಪಾತ". (ಆಯ್ದ ಕವಿತೆಗಳು, ಪುಟ ೧೨೯)

"ಇಳಾಗಾನ", "ಕಡಲುಪ್ಪು ಕಾವ್ಯ" ಮತ್ತು "ಸಪ್ತಮಾಸಗಳ ತೇರು" ಬಹಳ ಮುಖ್ಯವಾದ ಕವನಗಳು. ಆಧುನಿಕವಾದ ವೈಚಾರಿಕ ಕಾಳಜಿಗಳನ್ನು ಭಾವನೆಗಳ ನೆಲೆಯಲ್ಲಿಯೂ ಅನುಭವಿಸಿ, ಜಾನಪದೀಯವೆನ್ನಬಹುದಾದ ಬಂಧಗಳಲ್ಲಿ ಕಟ್ಟಿಕೊಡುವ ಈ ಕವಿತೆಗಳು ಕನ್ನಡದಲ್ಲಿಯೇ ಅನನ್ಯವಾಗಿವೆ. ಹಾಡುಗಳು ಉಂಟು ಮಾಡಬಹುದಾದ ತನ್ಮಯತೆಯನ್ನು ಬೇಕೆಂದೇ ಬಿಟ್ಟುಕೊಡುವ ಈ ಕವಿತೆಗಳು ಲಯಗಾರಿಕೆಗೆ ಎರವಾಗಿಲ್ಲ. ಸಂವೇದನೆಯ ಮೂಲ ಘಟಕಗಳು ಗ್ರಾಮೀಣವೂ, ಪ್ರಾದೇಶಿಕವೂ ಆಗಿದ್ದರೂ ಅವು ವಿಚಾರಗಳನ್ನು ಹಿಡಿದಿಡುವ ಸಾಮರ್ಥ್ಯವನ್ನು ಪಡೆದಿವೆ. ಇನ್ನಷ್ಟು ಮಿತವ್ಯಯ ಮತ್ತು ಚೆಲ್ಲಿಕೊಳ್ಳದ ಮಾತುಗಾರಿಕೆಯನ್ನು ಸಾಧಿಸಬಹುದಿತ್ತು ಎನಿಸಿದರೂ ಈ ಕವಿತೆಗಳು ಪರಿಣಾಮಕಾರಿಯಾಗಿವೆ. ತರ್ಕಬದ್ಧವೆನ್ನಬಹುದಾದ ಶಿಲ್ಪ ನಿರ್ಮಾಣವು ಇಲ್ಲಿಯೂ ಸಾಧ್ಯವಾಗಿಲ್ಲ.

"ಸಪ್ತಮಾಸಗಳ ತೇರು" ಕೌಟುಂಬಿಕ ಅನುಭವಗಳ ನೆಲೆಯಿಂದ ಹೊರಟು, ಆಧುನಿಕತೆಯ ಫಲವಾದ ವಿಚ್ಛೇದಗಳನ್ನು ಹೇಳುತ್ತದೆ. "ಮಾತು ಹಳ್ಳಿಯದು ಮನಸು ದಿಳ್ಳಿಯದು" ಎನ್ನುವ ಸ್ಥಿತಿ, ರಾಜಕುಮಾರಿ ಎನಿಸಿಕೊಂಡ ಪತ್ನಿ ರಾಕ್ಷಸಿಯಾಗುವ ಅನಿವಾರ್ಯತೆ, ತಾಯಿ–ಪತ್ನಿಯರ ನಡುವೆ ಆಯ್ಕೆ ಮಾಡಿಕೊಳ್ಳುವ ಅನಿವಾರ್ಯತೆಗೆ ಸಿಲುಕಿದ ಮಗ ಇವೆಲ್ಲ ಸಂಗತಿಗಳ ಹೊಣೆಗಾರಿಕೆಯು ಆಧುನಿಕತೆಯದೇ, ಶಿಕ್ಷಣದ್ದೇ ಎಂದು ಹೇಳಲಾಗುವುದಿಲ್ಲ. ಕಾರಣ ಏನೇ ಇರಲಿ. ಪರಿಣಾಮವಂತೂ ನಾಯಕನ ಒಂಟಿತನ ಮತ್ತು ಯಾತನೆ.

"ಬಿದ್ದೇ ನಾ ಬಿದ್ದೇ
ಅವಳ ಹೆಗಲ ಮೇಲಿಂದ ಗಿರಿಕಂದರಗಳ ಆಳಕೆ
ನಾ ಚಿಕ್ಕವ ನಾ ಚಿಕ್ಕವ ಬಲು ಚಿಕ್ಕವ
ನಿನ್ನ ಕಾಲು ಬೆರಳ ಉಗುರಿಗಿಂತಲೂ ಬಲು ಚಿಕ್ಕವ ನಾ
ಎತ್ತಿಕೋ ನನ್ನ ಎತ್ತಿಕೋ
ಉಪ್ಪೀ ಮೊದಲಂತೆ ಮೊಲೆಯುಣಿಸು
ತಿಳಿದು ತಿಳಿಯದೆಯೆ ಕೆಟ್ಟೆನು
ಕಣ್ಣು ಕುಕ್ಕಿಸುವ ಸೂರ್ಯನ
ನೀನುಟ್ಟ ದಟ್ಟಿಯಲಿ ಮರೆಮಾಡು
ಕೂಸು ಮರಿ ನಾನು
ತೇರು ನೀನು

ಏರಲಾಗದು ನನಗೆ
ಎತ್ತಿಕೋ ನನ್ನ ಎತ್ತಿಕೋ. (ಆಯ್ದ ಕವಿತೆಗಳು, ಪುಟ ೧೩೭)

ಈ ಶಿಶುತನಕ್ಕೆ ಮರಳುವ ಬಯಕೆಯು ಪ್ರೀತಿಯ ಸಂಕೇತವೋ, ಅಸಹಾಯಕತೆಯ ಸಂಕೇತವೋ ಹೇಳುವುದು ಕಷ್ಟ. ಇಲ್ಲಿ ತಾಯಿಯು ಒಂದು ಜೀವ ವಿಧಾನಕ್ಕೆ ಹಾಗೆಯೇ ಸಂಸ್ಕೃತಿ ವಿವರಗಳಿಗೆ ಸಂಕೇತವೆಂದುಕೊಂಡರೆ ಕವಿಯು ಅದಕ್ಕೆ ಹಿಂದಿರುಗುವ ಅಪೇಕ್ಷೆಯ ಮೂಲಕವೇ ಆಧುನಿಕತೆಗೆ ಸವಾಲು ಹಾಕುತ್ತಿರುವಂತೆ ತೋರುತ್ತದೆ. ಆದರೆ ಬಿಡುಗಡೆ ಮತ್ತು ಮರಳುವಿಕೆಗಳು ಅಷ್ಟು ಸುಲಭವಲ್ಲ. ಕವಿತೆಯ ವಿಷಾದವು ಕೊಂಚ ಕಾಲ ಸ್ಥಾಯಿಯಾಗಿ ನಂತರ ಮರವೆಗೆ ಸಲ್ಲುವುದೇ ವಾಸ್ತವವೆಂದು ತೋರುತ್ತದೆ. ಆಗ ಇಲ್ಲಿನದು ಭಾವುಕ ಹಳಹಳಿಕೆಯಾಗಿ ಬಿಡುತ್ತದೆ. ಇಡೀ ಕವನದಲ್ಲಿ ತಂದೆ ತತ್ವದ ಗೈರುಹಾಜರಿಯನ್ನು ಗಮನಿಸಬಹುದು. ತಾಯಿ ಬರೆಸಿದ ಕವಿತೆಗಳಲ್ಲಿ. ಆದ್ದರಿಂದ ಅಲ್ಲಿ ಕೋಪ ತಾತ್ಕಾಲಿಕ, ಪ್ರೀತಿ ದುಃಖಗಳೇ ಶಾಶ್ವತ.

"ಇಳಾಗಾನ" ತಾಯಿ ಮಗಳ ಸಂವಾದದಲ್ಲಿ ಹೆಣ್ಣು ಕುಲದ ಇತಿಹಾಸವನ್ನೇ ಬಗೆಯುತ್ತದೆ. ಬೇಂದ್ರೆ, ನರಸಿಂಹಸ್ವಾಮಿ, ಅಡಿಗ, ಮಧುರಚೆನ್ನ ಮುಂತಾದವರು ತಾಯಿತತ್ವವನ್ನು ಕಂಡರಿಸಿರುವ ಬಗೆಯ ಜೊತೆಗೆ ಹೋಲಿಕೆಯನ್ನು ಬಯಸುವ ಈ ಕವಿತೆಯು ಪುರುಷತತ್ವದ ಸಂಪೂರ್ಣ ನಿರಾಕರಣೆಯಿಂದಲೇ ವಿಶಿಷ್ಟವಾಗಿದೆ. ಕವಿಯು ಇಲ್ಲಿ ತನ್ನನ್ನು ನಿರಸನ ಮಾಡಿಕೊಂಡು ಹೆಣ್ಣಿನ ನೆಲೆಯಿಂದಲೇ ಮಾತನಾಡಿದ್ದಾನೆ. "ಕಾರಿರುಳನ್ನು ಕಡಿದು ಹಾಡುಹಗಲು ಮಾಡುವ ಹಾಡು ಎಂತ ಹಾಡು?" ಎಂದು ಕೇಳುವ ಮಗಳಿಗೆ, ಹೆಣ್ಣು ಹೆಣ್ಣಾಗುವ ಪ್ರಕ್ರಿಯೆಯನ್ನು ವಿವರಿಸುವ ತಾಯಿ ಸಮಾಜ ಮತ್ತು ಇತಿಹಾಸಗಳೆರಡನ್ನೂ ಬಲ್ಲಳು. ಇಂಥ ಹಲವು ಕವಿತೆಗಳಲ್ಲಿ ಸಂವಹನಕ್ಕೆ ಅಡ್ಡಿಯಾಗಿರುವುದು ತಮ್ಮ ಅರ್ಥವನ್ನು ಸುಲಭವಾಗಿ ಬಿಟ್ಟುಕೊಡದ ವೈಯಕ್ತಿಕ ಪ್ರತಿಮೆಗಳು. ಉದಾಹರಣೆಗೆ "ಬೆಳ್ಳಿಮೀನಿನ ಹಡಿಗೆಯನ್ನೆ ಹೊತ್ತು ನಡೆದ ಮೊಸರ ಮುತ್ತಿನ ಗುದ್ದಲಿ" ಯಂತ ಸಾಲುಗಳನ್ನು ಹೆಸರಿಸಬಹುದು. ಆದರೆ ಇವುಗಳ ಸಂಗಡವೇ ಬಹಳ ಅರ್ಥವತ್ತಾದ ಸಾಲುಗಳು ಪ್ರತ್ಯಕ್ಷವಾಗುತ್ತವೆ. ತಾಯಿ ಹೀಗೆ ಹೇಳುತ್ತಾಳೆ:

"ನನಗೂ ಇಲ್ಲ ಮಗಳೆ ಆಸೆ
ಹಾಡನರಿಯದ ಹಾಡ ಹಾಡುತ್ತಲೇ ಇರುವೆ
ಬಿಚ್ಚಲಾಗದ ಗಂಟ ಬಿಚ್ಚುತ್ತಲೇ ಇರುವೆ
ಈರುಳ್ಳಿಯ ಪೊರೆಯ ಬಿಚ್ಚಿದ್ದೇ ಭವ
ಕಾಳಿನಲ್ಲೇ ಅಡಗಿದೆ ತೆನೆಯ ತೇವ
ಕಾಯಿಸಬೇಕು ರೊಟ್ಟಿಯಾಗಲು ಮತ್ತೆ ಭಾವ
ಆಗಲೇ ಪಡೆಯುವೆ ನೀ ಇತ್ಯರ್ಥತೆಯ ಜೀವ"

(ಆಯ್ದ ಕವಿತೆಗಳು, ಪುಟ ೧೨೧)

ಈ ಮಾತುಗಳು ಅನುಭವ ಮತ್ತು ಆಲೋಚನೆಗಳು ಪೀಳಿಗೆಯಿಂದ ಪೀಳಿಗೆಗೆ ರವಾನೆಯಾಗುವ ಬಗೆಯನ್ನೂ ಹೇಳುತ್ತವೆ. "ಕಡಲುಪ್ಪು ಕಾವ್ಯ" ಕೂಡ ಸಂಕೀರ್ಣವಾದ ರಚನೆ, ಕಾಲ, ಚರಿತ್ರೆ, ಮನುಷ್ಯ ಸ್ವಭಾವ, ಸಾಮಾಜಿಕತೆ ಇವೆಲ್ಲವನ್ನೂ ಒಪ್ಪಿಡಿಯಲ್ಲಿ ಕಟ್ಟಿಕೊಡ ಹೊರಟಾಗ ಅಮೂರ್ತವನ್ನು ಮೂರ್ತವಾಗಿಸುವ ಸಮಸ್ಯೆ ಎಡೆಬಿಡದೆ ಕಾಡುತ್ತದೆ. ಇಲ್ಲಿನದು ಸಫಲವಾಗದ ಮಹಾತ್ವಾಕಾಂಕ್ಷೆ. ಇಷ್ಟೆಲ್ಲವನ್ನೂ ಒಳಗೊಳ್ಳುವ ಪ್ರಯತ್ನ ನಡೆದಾಗ ಸೋಲು ಕೂಡ ಮುಂದೆ ಇಟ್ಟ ಹೆಜ್ಜೆಯಷ್ಟೆ.

"ಮನ ಹಿಡಿದಿಟ್ಟವ ಮಂಜಿಗೆ ಸೋತ
ದಂಡ ಹಿಡಿದವ ಇತಿಹಾಸಕೆ ಸೋತ
ಸ್ಪರ್ಧೆಗಿಳಿದವ ಅಲ್ಲೇ ಇದ್ದ
ಕಾರಣ ಹಿಡಿದವ ಪ್ರಕೃತಿ ಗೆದ್ದ
ಜ್ಞಾನದೊಂದಿಗೆ ವಿಜ್ಞಾನದ ಯುದ್ಧ" (ಆಯ್ದ ಕವಿತೆಗಳು, ಪುಟ ೧೨೮)

ಇಂಥ ಸಾಲುಗಳನ್ನು ತಳ್ಳಿ ಹಾಕಲು ಖಂಡಿತವಾಗಿಯೂ ಸಾಧ್ಯವಿಲ್ಲ. ಹಾಗೆಂದು ತರ್ಕದ ಚೌಕಟ್ಟಿನಲ್ಲಿ ವಿವರಿಸುವುದೂ ಕಷ್ಟವೇ? 'ಕಾರಣ' ಎನ್ನುವ ಪದಕ್ಕೆ ಕವಿ ನೀಡುವ ಅರ್ಥವೇನು ಎನ್ನುವುದು ಮುಖ್ಯ ಪ್ರಶ್ನೆಯಾಗುತ್ತದೆ. ಉತ್ತರ ಸರಳವಲ್ಲ. ಇವರ ಒಟ್ಟು ಕವಿತೆಯಲ್ಲಿಯೇ ಚಿತ್ರಗಳ ದುಂದುವ್ಯಯ ನಡೆಯುವುದೆಂದು ಆಗಾಗ ತೋರುತ್ತದೆ. ಅಥವಾ ತಾವು ಕೊಡುವ ಚಿತ್ರಗಳನ್ನು ಆಧರಿಸಬಲ್ಲ ದೃಢವಾದ ಅಸ್ಥಿಪಂಜರವನ್ನು ಕವಿ ರೂಪಿಸುವುದಿಲ್ಲ. ಹೀಗಾದಾಗ ವಿಚಾರಗಳ ಬಗ್ಗೆ ಗೌರವವಿರುವಾಗಲೂ ಕವಿತೆ ನೀಡುವ ಒಟ್ಟು ಅನುಭವವು ಸಂವಹನವಾಗುತ್ತಿಲ್ಲವೆಂಬ ಕೊರತೆ ಕಾಡುತ್ತದೆ. ಕವಿತೆಯ ಸಾಲುಗಳು ಮನಸ್ಸಿನಲ್ಲಿ ಉಳಿಯುವುದು ಕಷ್ಟವಾಗುತ್ತದೆ.

"ಮೂರನೆಯ ಕಣ್ಣು" ನಂತರ ಹೊರಬಂದ "ನಾದ–ನಿನಾದ"ದ ಬಗ್ಗೆ ಈಗಾಗಲೇ ಕೆಲವು ಮಾತುಗಳನ್ನು ಹೇಳಲಾಗಿದೆ. ಭಾವಗೀತೆಯ ಮೂಲಸೆಲೆಯು ದಲಿತ-ಬಂಡಾಯ ಸಂದರ್ಭದಲ್ಲಿ ಅಪ್ರಸ್ತುತವೆನಿಸಬಹುದೆನ್ನುವ ಕಾರಣದಿಂದ ಗುಪ್ತಗಾಮಿನಿಯಾಗಿಯೇ ಉಳಿಯಿತೆಂದು ಕವಿ ಹೇಳುತ್ತಾರೆ. ಆದರೂ ತಮ್ಮ ಇಂದಿನ ವೈಚಾರಿಕ ಹಾಗೂ ಭಾವನಾತ್ಮಕ ಆತಂಕಗಳ ಸೂಕ್ತ ಮಾಧ್ಯಮವಾಗಿ ಭಾವಗೀತೆಗಳು ಬರಬಹುದೆಂಬ ನಂಬಿಕೆ ಕವಿಗಿಲ್ಲ. ಪರಿಣಾಮವಾಗಿ ಅವರ ಇತ್ತೀಚಿನ ಕವಿತೆಗಳಲ್ಲಿ ಭಾವಗೀತೆಗಳ ಮರುಕಳಿಕೆಯೇನೂ ಇಲ್ಲ. ಕವಿತೆಯು ಒಂದು "ಪಬ್ಲಿಕ್ ಅಟರನ್ಸ್" (ಸಾರ್ವಜನಿಕ ಹೇಳಿಕೆ) ಎಂದುಕೊಳ್ಳುವುದಕ್ಕೂ ಅಂತರಂಗದ ವಿಷಾದ ಲಹರಿ ಎಂದು ತಿಳಿಯುವುದಕ್ಕೂ ವ್ಯತ್ಯಾಸವಿದೆ. ನಿಜವಾದ ಭಾವಗೀತೆಯು ಅಂತರಂಗಿಕ ನೆಲೆಗಳಿಂದ ಹೊರಟು ಸಾರ್ವಜನಿಕ ಆಯಾಮಗಳನ್ನು ಪಡೆದುಕೊಳ್ಳುತ್ತದೆ. "ಸಿಲಿಕಾನ್ ಸಿಟಿ ಮತ್ತು ಕೋಗಿಲೆ"ಯ ಕವಿತೆಗಳ ಮುಖ್ಯ ನೆಲೆಯು "ಭಾರತೀಯತೆ"ಯ ಹುಡುಕಾಟ ವಾಗಿರುವುದು ಬಹಳ ಕುತೂಹಲಕಾರಿಯಾದ ಸಂಗತಿ. ಭಾರತಾಂಬೆ, ನನ್ನಿಂಡಿಯಾ, ಕಾರ್ಗಿಲ್ ಸ್ಮೃತಿ ಮುಂತಾದ ಕವಿತೆಗಳಲ್ಲಿ ಹರಡಿರುವ ಈ ಭಾವನೆಗಳು, ಸಮಾಜವು ಬದಲಾಗಿದೆ ಎಂಬ

ತಿಳಿವಳಿಕೆಯಿಂದ ಬಂದುದಲ್ಲ. ಹಾಗೆ ನೋಡಿದರೆ ಹಳೆಯ ನೆನಪು ಮತ್ತು ಇಂದಿನ ಅನುಭವಗಳು ಜಾತಿಯು ಇನ್ನಷ್ಟು ಕ್ರೂರವೂ ಸೂಕ್ಷ್ಮವೂ ಆಗಿರುವ ವಾಸ್ತವವನ್ನೇ ಹೇಳುತ್ತವೆ. ಅಂಥ ಕವನಗಳೂ ಈ ಸಂಕಲನದಲ್ಲಿವೆ. ಜಾತಿ ಭೇದದ ಪಳೆಯುಳಿಕೆಗಳನ್ನು ಕವಿ "ಈಗೋ ಆಗೋ ಉದುರುವ ತರಗೆಲೆಗಳು" ಎಂದು ಕರೆದು ಆಶಾವಾದಿಯಾಗುತ್ತಾನೆ. ಒಟ್ಟು ದೇಶಕ್ಕೆ, ಭಾರತೀಯ ಜೀವನ ಕ್ರಮಕೆ' ಬಂದಿರುವ ಆಪತ್ತುಗಳನ್ನು ಎದುರಿಸಲೆಂದು, ಒಳಗಿರುವ ಭಿನ್ನಮತಗಳನ್ನು ತಾತ್ಕಾಲಿಕವಾಗಿ ಬದಿಗಿಡುವ ಈ ನಿಲುವು

"ಸೃಷ್ಟಿಯಲ್ಲಿ ಸೃಷ್ಟಿಯಾಗಿ ಬದುಕ ಬಾಳಿ ಮೆರೆಸಬೇಕು
ಹೊಸ ಬೀಜಕೆ ಹೊಸಗಾಳಿ ಬೆಳಕು ನೀರುಣಿಸಿ ಬೆಳೆಸಬೇಕು

ಬರಲಿ ಬರಲಿ ಮೊಳಕೆ ಮಂದಾಕಿನಿ ತುಂಬಿ ಬರಲಿ
ಮಾವು ಆಲಗಳೊಂದಿಗೆ ಬೇವು ಕೂಡಿ ಬರಲಿ
ಅಂತಿರಲಿ ಇಂತಿರಲಿ ಎಂತಾದರಿರಲಿ ನನ್ನುಂಡಿಯ ನನಗಿರಲಿ
ಎಳೆತರುವೆ ಭಗೀರಥನಾಗಿ ಗಂಗೆ ಹೊಂಗಿರಣಗಳ ಬಿಂದಲಿ"

(ಆಯ್ದ ಕವಿತೆಗಳು, ಪುಟ ೧೧)

ಎನ್ನುವಂತಹ ಸಾಲುಗಳಿಗೆ ಎಡೆ ಮಾಡಿಕೊಡುತ್ತದೆ. ಇಂಥ ವಿಷಾದ ಹಾಗೂ ಆಶಾ ಚಿಂತನೆಗಳು ಇಡಿಕಿರಿದಿರುವ ಈ ಸಂಕಲನದ ಕವಿಯು ಸಂತತನ ಹಾಗೂ ಸರಳೀಕರಣಗಳ ಬಗ್ಗೆ ಎಚ್ಚರವಹಿಸಬೇಕಾಗುತ್ತದೆ.ಕೆಲವು ಸಂದರ್ಭಗಳಲ್ಲಿ ಕೋಪ, ಅಸಹನೆ, ರೊಚ್ಚುಗಳಿಗೆ ತಮ್ಮದೇ ಆದ ಧಾರಣಾಶಕ್ತಿಯಿರುತ್ತದೆ. ಅದು ಇಲ್ಲದ ಮನಸ್ಸುಗಳನ್ನು ಶೋಷಕ ಸಮಾಜವೆ ಮಣಿಸುವ ಉಪಯೋಗಿಸಿಕೊಳ್ಳುವ ಅಪಾಯವು ಸದಾ ಇರುತ್ತದೆ. ನನ್ನ ಈ ಗಟ್ಟಿದನಿಯ ಆಲೋಚನೆಗಳ ಹಿಂದಿನ ಆತಂಕಗಳನ್ನು, ಸೂಕ್ಷ್ಮಸಂವೇದಿಯಾದ, ಭಾವನೆತುಂಬಿದ ಕವಿಯು ಗ್ರಹಿಸುವರೆಂಬ ನಂಬಿಕೆ ನನಗಿದೆ.

ಮಾಲಗತ್ತಿಯವರ ಕವಿತೆಗೆ ಸಂಪೂರ್ಣವಾಗಿ ತೆರೆದುಕೊಂಡು, ಅದರ ಹಲವು ನೆಲೆಗಳನ್ನು ಗ್ರಹಿಸಲು ನನಗೆ ಬಹಳ ಕಾಲವೇ ಬೇಕಾಯಿತು. ಇದು ಸ್ವಭಾವ ಸಹಜವಾದ ಆಲಸ್ಯಕ್ಕೆ ನಾನು ಕೊಡುತ್ತಿರುವ ನೆಪವಲ್ಲ. ಈಚಿನ ದಿನಗಳಲ್ಲಿ ನಾವು ಓದುತ್ತಿರುವ ಅನೇಕ ಕವಿತೆಗಳ ಏಕಮುಖತೆ ಮತ್ತು ಏಕತಾನತೆಗಳು ಇಲ್ಲಿ ಖಂಡಿತವಾಗಿಯೂ ಇಲ್ಲ. ಮೊದಲ ಸಂಕಲನದಿಂದ ಇಲ್ಲಿಯವರೆಗೆ ಹಳೆಯದನ್ನು ಉಳಿಸಿಕೊಂಡು, ಹೊಸದನ್ನು ಒಳಗೊಂಡು, ಪರಿಷ್ಕರಿಸಿಕೊಂಡು, ನೊಂದು ಮಾಗುತ್ತಿರುವ ಇವರ ಕವಿತೆಗಳು ನನಗೆ ಇಷ್ಟವಾಗಿದೆ. ಇವು ಸಮಕಾಲೀನ ಕಾವ್ಯ ಪರಿಸರದಲ್ಲಿ ವಿಶಿಷ್ಟವೂ ಆಗಿವೆಯೆಂದು ನನ್ನ ನಂಬಿಕೆ.

ಆಯ್ಕೆಯ ಕೆಲಸವು ಯಾವಾಗಲೂ ವ್ಯಕ್ತಿನಿಷ್ಠ. ಕವಿಯು ತೋರಿಸಿರುವ ವೈವಿಧ್ಯವನ್ನು ಉಳಿಸಿಕೊಂಡು, ಅವುಗಳಲ್ಲಿ ಪ್ರತಿಯೊಂದು ಮಾದರಿಯ ಅತ್ಯುತ್ತಮ ಕವಿತೆಗಳಿಗೆ ಪ್ರಾತಿನಿಧ್ಯ ಕೊಡುವುದು ನಾನು ಬಳಸಿರುವ ದಾರಿ. ಹಾಗೆಯೇ ಬುದ್ಧಿ-ಭಾವ-ಅನುಭವ ಮತ್ತು

ಆಕೃತಿ ವಿವರಗಳನ್ನು ಸಂಯೋಜಿಸಿ ಕೊಂಡಿರುವ ಕವಿತೆಗಳು ಹೆಚ್ಚಾಗಿ ಸೇರ್ಪಡೆಯಾಗಿವೆ. ದಲಿತ-ಬಂಡಾಯ ಕಾವ್ಯದ ಸಿದ್ಧ ಮಾದರಿಗಳ ಬಳಕೆಯ ಮೂಲಕ, ಪರಿಣಾಮಕಾರಿಯಾದರೂ ಅನನ್ಯವಾಗದ ಕವಿತೆಗಳನ್ನು ಅಷ್ಟಾಗಿ ಸೇರಿಸಿಲ್ಲ. ಈ ಕವಿತೆಗಳು ಓದುಗರಿಗೆ ಪ್ರಿಯವಾಗಿ, ಅವರ ಗಮನವು ಅರವಿಂದ ಮಾಲಗತ್ತಿಯವರ ಸಮಗ್ರಕಾವ್ಯ ಮತ್ತು ಬರಲಿರುವ ಬರವಣಿಗೆಯ ಕಡೆಗೆ ಹರಿಯಲೆನ್ನುವುದು ನನ್ನ ಆಶಯ. ಬಹುಮುಖಿ ಪ್ರತಿಭೆಯ ಈ ಲೇಖಕರು ಈ ಸಂಕಲನವನ್ನು ರೂಪಿಸಿಕೊಡುವ ಹೊಣೆಯನ್ನು ನನಗೆ ವಹಿಸಿ ಪ್ರೀತಿ ಗೌರವಗಳನ್ನು ತೋರಿಸಿದ್ದಾರೆ. ನಾನು ಈ ಕೆಲಸವನ್ನು ಬೇಸರ ಹುಟ್ಟಿಸುವಷ್ಟು ತಡ ಮಾಡಿದಾಗಲೂ ಅಪಾರ ತಾಳ್ಮೆಯಿಂದ ಕಾದಿದ್ದಾರೆ. ಈ ವಿಳಂಬಕ್ಕಾಗಿ ನಾನು ಅವರ ಕ್ಷಮೆ ಕೇಳುತ್ತೇನೆ. ಈ ನಿಧಾನಗತಿಯು ನನ್ನ ಬರವಣಿಗೆಯ ಸ್ವಭಾವವೇ ಹೊರತು ಅವರ ಕವಿತೆಯ ಬಗೆಗಿನ ಅನಾದರದ ದ್ಯೋತಕವಲ್ಲ. ಕನ್ನಡ ಪುಸ್ತಕ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷರಾದ ಡಾ. ಹೆಚ್. ಜೆ. ಲಕ್ಕಪ್ಪಗೌಡರ ಅಧಿಕಾರಾವಧಿಯಲ್ಲಿ ಒಪ್ಪಿಕೊಂಡ ಈ ಕೆಲಸವು, ನನ್ನ ಮಿತ್ರರೂ ಈಗಿನ ಅಧ್ಯಕ್ಷರೂ ಆದ ಪ್ರೊ. ಮಲ್ಲೇಪುರಂ ವೆಂಕಟೇಶ ಅವರ ಕಾಲದಲ್ಲಿ ಮುಗಿಯುತ್ತಿದೆ. ಇವರಿಬ್ಬರಿಗೆ ಹಾಗೂ ಪ್ರಾಧಿಕಾರದ ಸದಸ್ಯರಿಗೆ ನಾನು ಋಣಿಯಾಗಿದ್ದೇನೆ. ಕವಿಯ ವಾಸ್ತವ ಮತ್ತು ಸಾಧನೆಗಳನ್ನು ಪರಿಣಾಮಕಾರಿಯಾಗಿ ಹೇಳುವ ಮಾಲಗತ್ತಿಯವರ ಸಾಲುಗಳೊಂದಿಗೆ ಈ ಬರವಣಿಗೆಯನ್ನು ಮುಕ್ತಾಯ ಮಾಡುತ್ತೇನೆ:

> "ಕವಿ ನೆಲದ ಮೇಲಿರುವುದಿಲ್ಲ
> ಎಷ್ಟೋ ಬಾರಿ ನೆಲವೇ ಕವಿಯ ಮೇಲಿರುತ್ತದೆ
> ಕವಿ ಆಕಾಶದ ಮೇಲಿರುತ್ತಾನೆ
> ತನ್ನೊಂದಿಗೆ ತನ್ನ ಜಗತ್ತನ್ನೂ ಮೇಲಕೆತ್ತುತ್ತಾನೆ... ...
> ಕವಿ ಮತ್ತೆ ಗೋರಿಯಿಂದ ಮೇಲೇಳುತ್ತಾನೆ
> ತಾನೇ ದೇವರಾಗುತ್ತಾನೆ ಜನಾರಣ್ಯವೇ ಹೂಬನವಾಗಿ ಅರಳುತ್ತದೆ!
> (ಆಯ್ದ ಕವಿತೆಗಳು, ಪುಟ ೨೦)

೧೫-೧೧-೨೦೦೭ ಎಚ್. ಎಸ್. ರಾಘವೇಂದ್ರರಾವ್

## ಪರಿವಿಡಿ


ಪುಟ

**ಸಿಲಿಕಾನ್ ಸಿಟಿ ಮತ್ತು ಕೋಗಿಲೆ**

೧. ಕೋಟಿನೊಳಗಣ ಅಂಗಿ ೩
೨. ಜ್ಞಾನದ ಜೋಳಿಗೆಯಲ್ಲಿ ಹೊನ್ನ ಕಡೆಗೋಲು ೪
೩. ಬಾಡಿಗೆ ಮನೆಯ ಕೋಳಿಗಳ ಬದುಕು ೭
೪. ಎಂತಾದರೂ ಇರಲಿ ನನ್ನಿಂಡಿಯಾ ನನಗಿರಲಿ ೧೦
೫. ಭಾರತಾಂಬೆಯ ಉಡಿಯೊಳಗಿನ ಸಾವು ಸಂಕ್ರಾಂತಿ ೧೨
೬. ಗೋರಿಮಾಳ ರಂಗೋಲಿಯಲ್ಲಿ ಬೆಳಕುಕಂಡ ರವಿ ೧೪
೭. ದೇವರಿಗೆ ಟೋಪಿಹಾಕಲು ಹೋಗಿ ದೇವರಾದವರು ೧೬
೮. ಸ್ಮೃತಿ ಹರಿದ ಕಾರ್ಗಿಲ್ ೧೮
೯. ದೇವರಿಗೆ ಧಿಕ್ಕಾರ ಹೇಳುವ ಹೂಗಳು ೨೦
೧೦. ಈಗೋ ಆಗೋ ಉದುರುವ ತರಗೆಲೆಗಳು ೨೧
೧೧. ತಿರುತಿರುಗಿ ಬತ್ತಳಿಕೆ ಸೇರುವ ಬಾಣಗಳು ೨೩
೧೨. ಚಮ್ಮಾರ ಕವಿಯಾಗಲಾರ ೨೫
೧೩. ವರಕೊಡಲು ಬಂದವ ೨೭
೧೪. ಯುರೋ ೨೯
೧೫. ಈರುಳ್ಳಿ ಮತ್ತು ಪೊಕ್ರಾನ್ ೩೧
೧೬. ಕುಂಕುಮ ಕಾವ್ಯ ೩೩
೧೭. ಸಿಲಿಕಾನ್ ವ್ಯಾಲಿ ೪೧
೧೮. ಯವ್ವ ೪೪
೧೯. ಅಯ್ಯೋ... ಪೆಂಟಗಾನ್ ಪೆಂಟಗಾನ್ ೫೩

**ನಾದ ನಿನಾದ**

೨೦. ಕಡಲ ಕನ್ಯೆ ೫೯
೨೧. ಕೂಲಿಗಾರನ ಮೌನಗೀತೆ ೬೧
೨೨. ಪ್ರೀತಿ ಮಾತು ೬೩
೨೩. ಒಬ್ಬ ತಂದೆಯ ಹಾಡು ೬೪
೨೪. ಮುಳುಗದ ಸೂರ್ಯ ೬೫

೨೫. ಅಂಗಳ ೬೭
೨೬. ಮೊದಲ ಚುಂಬನ ೬೮
೨೮. ಅಮೃತಮತಿಯ ಪ್ರಳಾಪ ೭೦
೧೬. ಮಾತಂಗಿ ನ್ಯಾಯ ೭೨
೨೯. ಅಷ್ಟಾವಂಕನ ಹಾಡು ೭೪
೩೦. ಬದುಕು ೭೬
೩೧. ಮುದುಕನ ಬರಹೇಳು ೭೭
೩೨. ಬತ್ತಿದ ಶಾಲ್ಮಲೆ ೭೯
೩೩. ಗೋಲಿಬಾರ್ ೧೯೮೦ ೮೩
೩೪. ಹುಚ್ಚೆದ್ದು ಕುಣಿದಾವು ನವಿಲು ೮೫
೩೫. ಸಾವುಗಳ ಹಬ್ಬ ೮೬
೩೬. ನಾದ ನಿನಾದ ೮೮


ಮೂರನೆಯ ಕಣ್ಣು


೩೭. ಬೆಟ್ಟ ತೊಟ್ಟಿಲಭೂಮಿ ೯೧
೩೮. ಗಂಡಭೇರುಂಡ ೯೬
೩೯. ಜೀತಾವತಾರ ೧೦೧
೪೦. ವಿದ್ಯುತ್ ಪಂತಿಗಳು ೧೦೪
೪೧. ಸಾಫ್ಟ್‌ವೇರ್ ಮತ್ತು ಎಮ್ಮೆ ೧೦೯
೪೨. ಭೂಂಗಾ ಮತ್ತು ನೇಗಿಲು ೧೧೨
೪೩. ಪಂಡೋರಾಳ ಪೆಟ್ಟಿಗೆ ೧೧೪
೪೪. ಇಳಾಗಾನ ೧೧೬
೪೫. ಕಡಲುಪ್ಪು ಕಾವ್ಯ ೧೨೩
೪೬. ಸಪ್ತಮಾಸಗಳ ತೇರು ೧೩೦


ಕಪ್ಪು ಕಾವ್ಯ


೪೭. ಮಾಂಸದ ಕೋಟೆ ೧೪೧
೪೮. ದೇಶದ ಮಾನ ೧೪೩
೪೯. ದೇವಿಯ ಸುಪ್ರಭಾತ ೧೪೪
೫೦. ಗೆಳೆಯನ ಹಾಡು ೧೪೬
೫೧. ನನ್ನ ಜನ ೧೪೮
೫೨. ಹೇಳ್ತೀನಿ ಕೇಳಬಾರ ೧೫೦
೫೩. ಮುನಿಸು ೧೫೩
೫೪. ಸ್ಮಶಾನದಿಂದೊಂದು ಪತ್ರ ೧೫೫

## ಮೂಕನಿಗೆ ಬಾಯಿ ಬಂದಾಗ


| | | |
|---|---|---|
| ೫೫. | ಒಂದೇ ದನಿ | ೧೬೧ |
| ೫೬. | ಒಂದ ವಿಚಾರ | ೧೬೨ |
| ೫೭. | ಕುತ್ತು | ೧೬೩ |
| ೫೮. | ಓಕಳಿ | ೧೬೫ |
| ೫೯. | ಜೋಗತಿ ಕಲ್ಲು | ೧೬೭ |
| ೬೦. | ಮಂಗಳಾರತಿ | ೧೬೮ |
| ೬೧. | ಬಾಡಗಿ ಜನಿವಾರ | ೧೭೦ |
| ೬೨. | ಒಡ್ಲ ಕಿಚ್ಚು | ೧೭೨ |
| ೬೩. | ಮ್ಯಾಗಿನವ್ರು | ೧೭೫ |
| ೬೪. | ಪತ್ರಿಕೆ | ೧೭೮ |
| ೬೫. | ನರ್ತಿಸಲೆ ಶಾರದೆ | ೧೭೯ |

# ಸಿಲಿಕಾನ್‌ಸಿಟಿ ಮತ್ತು ಕೋಗಿಲೆ

# ಕೋಟಿನೊಳಗಣ ಅಂಗಿ

ಅದೇ ಹಳೆಯ ಸೈಕಲ್ಲಿನಲ್ಲಿ
ಅದೇ ನಾನೋದಿದ ಶಾಲೆಯಲ್ಲಿ
ಅದೇ ಪಾಠ ಮಾಡುತ್ತ
ಅದೇ ಹಳೆಯ ಕೋಟಿನಲ್ಲಿಯೇ ಇದ್ದಾರೆ.

ಅವರ ಕೈ ಹೊಡೆತ ತಿನ್ನುವ ಭಾಗ್ಯ ನನಗೆ ಬರಲಿಲ್ಲ
ಅವರ ಮಾತಿನ ಆ ಸುಂಕಿನಲ್ಲೂ
ಝಳಪಿಸುವ ಛಡಿಯಲ್ಲೂ ನನಗೆ ಮುನಿಸಿತ್ತು
'ನನ್ನ ಭವಿಷ್ಯತ್ತೇ ಅಡಗಿತ್ತು' ಅದರಲ್ಲೆಂದು ನಾನರಿತಿರಲಿಲ್ಲ.

'ಅರವಿಂದ ನನ್ನ ಶಿಷ್ಯ, ಜಾತಿಯಲ್ಲೇನಿದೆ ಮಣ್ಣು?
ನಾ ಬೆಳೆಸಿದ ಹುಡುಗ... ನನ್ನ ಗುರುತನದ ಕಾಣಿಕೆ'–
ಯೆಂದು ಬೀಗುವಲಿ ನಮನವಿದೆ
ತಮ್ಮ ಮಗನ ಹೆಸರಿಗೆ ಮಣ್ಣು ತೂರುತ್ತಾರೆ.

ಹಣೆಯಲಿ ಅದೆ ನಾಮ, ಅದೇ ಲಕ್ಷಣ, ಅದೇ ಭಾವ ಮುಖದಲಿ
ಅಂದು ಲೇವಡಿ ಮಾಡುತ್ತಿದ್ದರು
ಈಗಲೂ ನನಗನಿಸುತ್ತಿದೆ
ಅವರ ಕೋಟಿನೊಳಗೆ ಅದೇ ಹರಕು ಅಂಗಿಯೇ ಇದೆ
ನನ್ನ ಸ್ಕೂಟರ್ ಜೊತೆಗೆ ಅವರ ಸೈಕಲ್ ಓಡದು
ನಿಂತು ಮಾತನಾಡದೆ ಹೋದರೆ ಹೃದಯವೇ ಪಂಕ್ಚರಾಗುತ್ತದೆ.

ಈಗ, ನನ್ನ ಅಂಗಿ ಒಳಅಂಗಿ ಎರಡೂ ಹೊಸವು ನಿಜ
ಆದರೆ ನನ್ನೊಳ ಮನಸ್ಸು ಹರಿದು ಚಿಂದಿಯಾಗಿದೆ
ಕೋಟಿನೊಳಗಣ ಅಂಗಿಯಂತೆ!

ಹೇಗೆ ತಾನೆ ತೆರೆದು ತೋರಲಿ? ಯಾರಲ್ಲಿ ತೋರಲಿ?
ಎಷ್ಟು ತೋಡಿಕೊಂಡರೂ ತೀರದು
ನಾ ಹನುಮಂತನಾದರೂ
ರಾಮರಿಗಿಂತ ಲಕ್ಷ್ಮಣರ ವ್ಯಾಖ್ಯಾನವೇ ಹೆಚ್ಚು. ❐

# ಜ್ಞಾನದ ಜೋಳಿಗೆಯಲಿ ಹೊನ್ನ ಕಡೆಗೋಲು

-೧-

ಮೇಸ್ಟ್ರು ನಕ್ಷೆಯನ್ನು ತೋರಿಸಿ ಕಲಿಸುತ್ತಿದ್ದರು
ಈ ಗೋಳವೇ ಒಂದು ಪ್ರಪಂಚ
ಭಾರತವೆಂಬುದೊಂದು ದೇಶ, ಕರ್ನಾಟಕವೆಂಬುದೊಂದು ರಾಜ್ಯ
ವಿಜಾಪುರವೆಂಬುದೊಂದು ಜಿಲ್ಲೆ
ಮುದ್ದೇಬಿಹಾಳವೆಂಬುದೊಂದು ತಾಲ್ಲೂಕು
ಮುದ್ದೇನಳ್ಳಿ ಎಂಬುದೊಂದು ಗ್ರಾಮ
ಅಲ್ಲಿಯೇ ಹರಿಜನವೆಂಬುದೊಂದು ಕೇರಿ
ಮಾಲಗತ್ತಿಯೆಂಬುದೊಂದು ಮನೆ, ಆ ಏರಿಯಲಿ
ದೇಸಿಗರಿಗೆ ದೇಶಿಯರೆ ಪರಕೀಯರು ಅಸ್ಪೃಶ್ಯ!

ಇಂದು ನಾನು ಕಲಿಸುತ್ತಿದ್ದೇನೆ
ಪ್ರಪಂಚವೇ ಒಂದು ಗ್ರಾಮ
ಇಂಡಿಯಾ ಎಂಬುದೊಂದು ಹರಿಜನ ಕೇರಿ
ಈ ಭಾರತೀಯನೇ ಆ ಕೇರಿಯಲಿ ಅಸ್ಪೃಶ್ಯ!
ತನ್ನನ್ನು ತಾನೇ ಪರಕೀಯರಿಗೆ ಅಡವಿಟ್ಟುಕೊಂಡು
ಬಡ್ಡಿ ಕಟ್ಟಲಾಗದೆ ಜೀತದಾಳಾಗಿದ್ದಾನೆ!

-೨-

ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ, ಎಲ್ಲಿಂದಲೋ ಎಲ್ಲಿಗೆ
ಬಿಡಿಸದ ಗುರುತಿಸಲಾಗದ ಗೋಳದ ಮೇಲೆ ಜೇಡ ತಂತಿಯ ಜಾಲ
'ಓಂ ಗಜಾನನಾಯ ನಮಃ' ನಿನ್ನ ಮುಂದೆ ಜ್ಞಾನದ ಇಲಿ ಬಾಲ
ಹಾಕಿದ್ದಾನೆ ಗಣಪ ವಿಭೂತಿ ಬಳೆದು ಜನಿವಾರ!
ಅಕ್ಷರ ತೀಡುವ ಬಡವನಿಗೆ ಪೆನ್ನು ಕೊಳ್ಳುವುದು ಸಾಹಸ
ಬೆರಳಚ್ಚು ಕಲಿಯುವ ಕನಸಿಗನಿಗೆ ಶಾಕ್ ಹೊಡೆತದ ಸಾವು.

ತಿಪ್ಪೆಯಾಗಿದೆ ಇಂಡಿಯಾ
ಈಗಲ್ ಬ್ರ್ಯಾಂಡಿನ ಗಣಪತಿಗಳು ಬಂದು
ಕೆರೆಯ ನೀರಲಿ ಎಮ್ಮೆಯಂತೆ ಬಿದ್ದು
ನೀರುಕ್ಕಿಸಿ ಹರಿಸುತ್ತಿವೆ ಗಟಾರಿಗೆ-ಗಟಾರೂ ಸ್ವಚ್ಛ
ಹೊಸ ಗಣಪ ಬಂದರಲ್ಲವೆ ಬಯಲಿಗೆ
ದೇಶೀ ವಿದೇಶಿ ಸೇರಿ 'ಸಿದ್ಧಿವಿನಾಯಕ' ಕಥನ
ದೇಶೀ ನೀ ಒಕ್ಹಲ್ಲು ಕಳೆದುಕೊಂಡು-ಏಕದಂತನಾದಿಯೋ.

ಕಾಲ ತಿರುಮುರುವಾಗಿದೆ
ಮೈ ಮಣ್ಣಾದ ಈ ನಿಜ ಹಾರ್ಡ್‌ವೇರ್ ಬಡವ
ಸಾಫ್ಟ್‌ವೇರ್‌ನೊಂದಿಗೆ ಬಾಡಿಗೆ ಕುಸ್ತಿ
ಹೊಟ್ಟೆಗೆ ಹಿಟ್ಟಿಲ್ಲದೆ ನಿತ್ರಾಣವಾಗಿ ಮಣ್ಣು ಮುಕ್ಕುವಮಾತು
ಕನ್ನಡಕ್ಕೆ ಒಗ್ಗದೆ ಇಂಗ್ಲೀಷಿಗೆ ಬಗ್ಗಿ ಸಂಸ್ಕೃತಕ್ಕೆ ಜಗ್ಗದೆ ಸೋತ
ಈ 'ವಿಗಣಪ' ಸಂಸ್ಕೃತದ ಮುತ್ತಾತ
ಹಸಿದೊಡಲಿಗೆ ಬೆನ್ನ ಬೇತಾಳ
ಲೋ ಕನ್ನಡಿಗ ಬೇತಾಳನನು ಪಳಗಿಸಿ ಕರಗಿಸೋ.

-೩-

ಖಾಸಗಿ ಸರಕಾರಿಯ ನಡುವೆ ಇಲಿ ಬಾಲಕೆ ಹೆದರಿವೆ ಪ್ಯಾಂಥರ್‌ಗಳು
ವಿನಾಯಕ ದೇಗುಲದ ಬಾಗಿಲಿಗೆ ಬೋರ್ಡು ಹಾಕಿದ್ದಾರೆ
'ಪ್ರವೇಶ ನಿಷೇಧಿಸಿದೆ'
ಹಳೆ ಅಸ್ಪೃಶ್ಯತೆ ಬಾಯ್ ಬಾಯ್
ನವ ಅಸ್ಪೃಶ್ಯತೆ ಹಾಯ್ ಹಾಯ್
ಮಿಶ್ರ ಆರ್ಥಿಕ ನೀತಿಯೇ ಉದಾರವೋ?
ಉದಾರೀಕರಣದ ನೀತಿಯೇ ಉದಾರವೋ?
ಇಂಡಿಯಾ ಉದ್ಧಾರ ಯಾರದೋ?

-೪-

ಕಂಡಿದ್ದಾರೆ ಗೆರೆಮಿರಿವ ಚಿನ್ನದದಿರು
ಕಲಿತಿದ್ದಾರೆ ಸುಟ್ಟು ಸೋಸುವ ಅಪರಂಜಿ ವಿದ್ಯೆಗಳ
ಹಿಡಿದು ಬಡಿದು ಇಷ್ಟದೇವತಾ ವಿಗ್ರಹಕ್ಕೊಗ್ಗಿಸುವ
ಅಸಲು ಕಸುಬಲಿ ಪಳಗಿ
ಮಂತ್ರದಂಡವಾಡಿಸುತ್ತಿದ್ದಾರೆ ಗುರುಕುಲದಲ್ಲಿ.

ಹಗಲಲಿ ನಕ್ಷತ್ರ ಎಣಿಸಿ, ಗಾಳಿಯಲಿ ಲೆಕ್ಕ ಹಾಕಿ
ಅರಗಿನರಮನೆ ಕಟ್ಟಿ ಕಾಯುತ್ತಿದ್ದಾರೆ
ಜೋಳಿಗೆಯಲ್ಲೆ ದಕ್ಷಿಣೆಯ ಪಾತ್ರೆ
ಯಾರೂ ಮಾಡಬಹುದು ಕಾಶಿಯಾತ್ರೆ?
ಪರದೇಸಿಗೆ ಮಜ್ಜಿಗೆ ಕೊಟ್ಟು ಬೆಣ್ಣೆ ಕೇಳಿದರೆ
ದೇಶಿಗ ಮಜ್ಜಿಗೆ ಪಡೆದು ಗೋವು ಕೊಡುವ ಚತುರ!

ಒಳಗೊಳಗೇ ಹೆದರಿಕೆ
ಮಜ್ಜಿಗೆ ವಯ್ದು ಮೋಡ ಕೊಡುವವ ಸಿಕ್ಕರೆ?
ಹುಲ್ಲು ಹಾಲಾಗಿಸುವೆವು ಮೋಡ ತೋರಿಸಿದರೆ
ತೋರಿಸಬೇಕಿದೆ; ನೀ ಚಾಪೆಯ ಅಡಿಯಲಿ ನುಸುಳಿದರೆ
ನಾ ರಂಗೋಲಿ ಅಡಿಯಲಿ ನುಸುಳ ಬಲ್ಲೆನೆಂಬುದ
ಸರೀಕರೊಂದಿಗೆ ಬದುಕು ಇಲ್ಲದಿರೆ ಕಟ್ಟಿಟಂತೆ ಸಾವಿನ ಬಿಕ್ಕು
ಸದಾ ಹಾಕಬೇಕಿದೆ ಜೋಳಿಗೆಯಲಿ ದೇಸಿಕಡೆಗೋಲು ಕಡೆಯಲು.

ಭುವಿತುಂಬ ಬಿಲ ಕೊರೆದ ಇಲಿ ಹುಲಿಯ ಕಥೆಯಾಗಬೇಕಿದೆ
ಜ್ಞಾನಕ್ಕೆ ಜ್ಞಾನವೇ ಸವಾಲು, ಸವಾಲಿಗೆ ಸವಾಲೇ ಜವಾಬು
ಗೊತ್ತು ಇದ್ದದ್ದೇ 'ಹಕ್ಕುಗಳು ಲೇಖಕರದ್ದು'
ಘೋಷಿಸಿಬಿಡು 'ಭವತಿ ಭಿಕ್ಷಾಂದೇಹಿ'
ನಮ್ಮದು ಜೋಳಿಗೆಯ ಬದುಕು
ಇಲಿಬಾಲ ಸಿದ್ಧಿವಿನಾಯಕನ ಸರಕು.

ಆಲದ ಬೇರನರಿ, ಮಂಜಿನ ಪರದೆಯ ಹರಿ
ಜೋಳಿಗೆದಾರರ ಕರಿ, ಭಿನ್ನ ಪತಾಕೆಗಳ ಮರಿ
ಕತ್ತಲಾಳದ ಹೆಜ್ಜೆ ತೋರಿ, ಹುಲಿ ನಡವ ಮುರಿ
ದಾಯಾದಿ ಕದನ ತೊರಿ, ನಿನ್ನದೇ ದಾರಿ ನೀ ತೆರಿ

ಜ್ಞಾನ ದಾಸೋಹಿಗಳು ನಾವು
ಕೊಡುಗೈ ದಾಸಿಗಳು ನಾವು
ಕರ್ಣ ಧರ್ಮರಾಯರ ನಡಿಗೆ ನಮ್ಮದು
ಕೊಡುವವರ ಕಂಡರೆ, ಈಗಲ್ಲಿನ ಧ್ವನಿಯನ್ನೂ
ಮೂರೇ ಹೆಜ್ಜೆಯಲಿ ಅಳೆದು ಬಿಡುವವರು
ಬಲಿ ಚಕ್ರವರ್ತಿಗಳ ನೋವಿದೆ
ವಿಷಕಂಠನಾಗು ಇಂಡಿಯಾ ವಿಷಕಂಠನಾಗು! □

# ಬಾಡಿಗೆ ಮನೆಯ ಕೋಳಿಗಳ ಬದುಕು

-೧-

ಯಾರ ಎದೆಯೇರದೆ
ಪಡಸಾಲೆಯ ಗೂಟಕ್ಕೆ ಜೋತಾಡುತ್ತಿತ್ತು
ಸೆಕೆಂಡ್ ಸೇಲ್ಸಿನ ಪರದೇಸಿ ಲಿಂಗು.
ಸುಣ್ಣ ಕಾಚದ ಡಬ್ಬಿ
ಸಂದೂಕು ಮುಡುಪಿನ ಗುಳ್ಳಿ
ಕಳ್ಳ ಸಂತೆಯ ಬುಳ್ಳಿ
ಕಾಂತಿಯೇ ಇಲ್ಲದ ಗುಂಡುಗಡಿಗೆಯ ಕಾಂತ!

-೨-

ಮರಿ ಮಾಡಬಹುದಾಗಿದ್ದ ಕೋಳಿ
ಸೂರ್ಯ ಕಿರಣದ ಸ್ಪರ್ಶಕ್ಕೆ ಅರಳುವಂತೆ ಕುದಿಯುತ್ತಿತ್ತು
ದಾರಿಹೋಕರ ಮೂಗು ಕಣ್ಣುಗಳೂ
ಒಳಮುಚ್ಚುಗಡಂತೆ ಹೊರಳು-ಅರಳು
ಮನೆಯ ಹೊಟ್ಟೆಗಳಲಿ ಇಲಿಗಳ ದೌಡು
ಬೆಕ್ಕು ಹಿಡದಾಗ ಒದ್ದಾಡುವ ಮನಗಳು
ಕಾಯುವುದಕ್ಕೂ ಕಾಯಬೇಕು ಕಾಯ
ಊಟಕ್ಕೂ ಬೇಕು ಕಾಯ!

-೩-

ತೇಲುತ್ತಿದ್ದವು ತಟ್ಟೆಗಡಲಲಿ ಕಾಯಿ ಮೂಳೆ
ಇನ್ನೇನು ಬಾಯಿಗೆ ತುತ್ತಿಡಬೇಕು
ದೂರದಿ ಕಾಳಿಕಾದೇವಿಯ ದನಿ ಕೇಳುತ್ತಿದ್ದಂತೆ
ಲೋಟ ತಟ್ಟೆ ರೊಟ್ಟಿ ಬಟ್ಟೆ ಎಲ್ಲ ಮಂಗಮಾಯ
ಒಳಗೆ ಕಾಲಿಟ್ಟಳು ಮನೆ ಬಾಡಿಗೆ ಕೊಟ್ಟ ದೇವತೆ.

ಮೂರು ಮಕ್ಕಳು, ತಾಯಿ, ಅತ್ತೆ, ಮನೆಯಜಮಾನ
ಮಂಗಗಳ ಕಥೆಯಂತೆ ಉಪವಾಸ
ಮನಸ್ಸಿನ ಗೋಳ ಹೊಟ್ಟೆಯ ತಾಳ ಕಣ್ಣು ಬಾಳ್
ಎಲ್ಲ ಹಾವ ಭಾವಗಳ ಮೇಳ, ಮನೆ ರಂಗಶಾಲೆ.

-೪-

ಸಂದೇಹದಿಂದಲೇ ಈ ದಲಿತನಿಗೆ ದೇವನ ಪ್ರಶ್ನೆ
ಮನೆ ಬಾಡಿಗೆ ಕೊಡುವಾಗ, ಸಿಕ್ಕ ಉತ್ತರಕ್ಕೆ ಸಂತೃಪ್ತನಾಗಿ
ನಾವು ಪಕ್ಕಾ ಸಸ್ಯಹಾರಿಯೇ, ಹೊಸ ಮನೆ ನೋಡಿ.....
ನಾವು ಜಾತಿ ಭೇದ ಏನೂ ಮಾಡಲ್ಲ......

ನಿಮ್ಮ ಹೆಸರೇನೋ ನಮ್ಮವರ ಹಾಗಿದೆ
ನೀವು ಕಪ್ಪು, ನಿಮ್ಮ ಮಕ್ಕಳು ಹೆಂಡತಿ ಬೆಳ್ಳಗೆ....
ಆದ್ರೆ ಮಕ್ಕಳ ಮುಖ ಮಾತ್ರ ನಿಮ್ಮ ಹಾಗೆ
ಎಂದಾಗ; ಬದುಕಿದೆಯೆಂದು ನಿಟ್ಟುಸಿರು ಬಿಟ್ಟಿದೆ.

ಮನೆಗೆ ಬಂದ ದೇವತೆ:
'ಊಟ ಆಯಿತೋ? ಅಡಿಗೆ ಏನು?
ಕೈ ತೊಳೆದ ಮೇಲೆ ಮಗ ಊರಿಂದ ಬಂದ ನೋಡಿ
ಅದಕ್ಕೆ ಹಿ ಹಿ ಹಿ ಹಿ ಸ್ವಲ್ಪ ಪಲ್ಯಾ ಕೇಳೋಣಾಂತ....'
ದೇವತೆ ಅಡಿಗೆ ಮನೆಗೆ ನುಗ್ಗಿದಳು
ಗುಂಡು ಗಡಿಗೆಯ ಬಂಡವಾಳ ಹೊರ ಬೀಳುವ ಕಾಲ!

ಬಾಯಿ ಬತ್ತಿದ ಮೇಲೆ ಉಗುಳು ನುಂಗುವುದು ಹೇಗೆ?
ನಿನ್ನೆಯ ತೊವೆಯ ದಾನದೊಂದಿಗೆ
ಅಂತೂ ನಾಟಕ ಮುಗಿಯಿತು.
ಮಗಳು ಶಪಿಸುತ್ತ ಬಾಗಿಲು ಗಟ್ಟಿಯಾಗಿ ಭದ್ರಪಡಿಸಿದಳು
ಮಂಚದಡಿಗೆ ಮರೆಯಾದ
ಬಡಿಸಿಟ್ಟ-ಆರಿ ತಣ್ಣಗಾದ ತಟ್ಟೆಗಳು ಹೊರಬಂದವು
ಗಂಟಲಲ್ಲಿ ತುತ್ತಿಳಿದಿರಲಿಲ್ಲ

'ಅಯ್ಯೋ.....ಮಾತಲ್ಲಿ ತೊವೆ ಬಟ್ಲೇ ಮರ್ತಬಿಟ್ಟೆ'
ಎಂದು ದೇವತೆ ನಡುಮನೆಯಲಿ ಪ್ರತ್ಯಕ್ಷವಾಗಬೇಕೆ?
ಬಾಗಿಲು ಹಾಕಿದ್ದು?

ಆ ಕ್ಷಣದಿಂದ ಜೇನ ಹುಟ್ಟಿಗೆ ಕಲ್ಲೆಸೆದಂತೆ
ಗಲ್ಲಿ ತುಂಬ ಹುಳು 'ಜೇಂ' ಗುಟ್ಟುತ್ತ ಹಾರಾಡತೊಡಗಿದವು!
ಗುಂಡುಗಡಿಗೆ, ಒಡೆದ ಮಣ್ಣಿನ ಗಡಿಗೆಯಾಯ್ತು.
ಕಲಿತವನ ಬಾಳು ಕಲಿಯದವನಿಗಿಂತ ಗೋಳು
ಸ್ವಾಭಿಮಾನವಿಲ್ಲದ ಆಳು ವಿದ್ಯೆಕಲಿತೂ ಹಾಳು.

□

## ನನ್ನಿಂಡಿಯಾ ನನಗಿರಲಿ....

ಬರಲಿ ಬರಲಿ ಮೃತ್ಯುಗಳ ವೈತರಣಿ ದುಮ್ಮಿಕ್ಕಿ ಹರಿದು ಬರಲಿ
ಎಷ್ಟು ಮರಮುಟ್ಟುಗಳ ತುಂಡಾಗಿ ಬೀಳುವರೋ ಬೀಳಲಿ
ಅಂತಿರಲಿ ಇಂತಿರಲಿ ಎಂತಾದರಿರಲಿ ನನ್ನಿಂಡಿಯಾ ನನಗಿರಲಿ
ಎಳೆತರುವೆ ಭಗೀರಥನಾಗಿ ಗಂಗೆ ಹೊಂಗಿರಣಗಳ ಬಿಂದಲಿ
ಅಂತಿರಲಿ ಇಂತಿರಲಿ....

ಮತಧರ್ಮಗಳು ಮದದಿಸೊಕ್ಕಿರಲಿ ಜಾತಿ ಸರ್ಪಗಳಿರಲಿ
ವರ್ಣವ್ಯಾಘ್ರಗಳ ತಾಂಡವನೃತ್ಯ ಸದಾ ನಡೆಯುತಿರಲಿ
ನಾಲಿಗೆ ಕತ್ತರಿಸಲಿ ಹೆಬ್ಬೆರಳ ಕೀಳಲಿ ಕಾದಸೀಸ ಹುಯ್ಯಲಿ
ವೇದ ಸ್ಮೃತಿಗಳ ಬೆಂಕಿಯಲಿ ಹಟ್ಟಿಗಳ ಜೀವ ಬೇಯುತಿರಲಿ
ಅಂತಿರಲಿ ಇಂತಿರಲಿ....

ಮುಟ್ಟಿಸಿಕೊಳ್ಳದಿರಲಿ ಬಹಿಷ್ಕರಿಸಲಿ ಮಲ ತಿನ್ನಿಸಲಿ
ಸತ್ತುದನೆಳೆಯಲು ಕರೆಯಲಿ ಸರಪಳಿಯಲೇ ಜೀತ ಹೂತಿರಲಿ
ಪಾಪ ಪುಣ್ಯಗಳ ಸಂತೆ ಇರಲಿ ಸ್ವರ್ಗ ನರಕಗಳ ಕಂತೆ ಇರಲಿ
ಹೊಟ್ಟೆಗಿಲ್ಲದವರ ಬಟ್ಟೆ ಕಳೆದು ಬಾವುಟವ ಮಾಡಿ ಹಾರಿಸುತಿರಲಿ
ಅಧಿತಿರಲಿ ಇಂತಿರಲಿ....

ನೋಂಬು ಸುಂತಿಯ ಕಂತೆಯಿರಲಿ ಕ್ರಾಸಿಗೂ ಸಿಸ್ಟರ್‌ಗಳ ಚಿಂತೆಯಿರಲಿ
ಹೊನ್ನಮಂದಿರದಿ ಚಪ್ಪಲಿ ತೊಳೆಯಲಿ ಭಂತೆಗಳೂ ನಮ್ಮವರೆ ಬರಲಿ
ಗಂಜಳ ಕುಡಿಯಲಿ ಮರಕೆ ಸುತ್ತಲಿ ನೊಸಲಿಗೆ ಬಡಿದುಕೊಳ್ಳಲಿ
ಆ ನಾಮ ಈ ದಾರಗಳೊಂದಿಗೆ ಜಾಗತೀಕರಣದ ಓ ನಾಮವೂ ಬರಲಿ
ಅಂತಿರಲಿ ಇಂತಿರಲಿ....

ನಮ್ಮ ಹೆತ್ತ ಧರೆಯಿದು ನಮ್ಮ ಪೊರೆವ ತಾಯ್ ತೊಟ್ಟಿಲಿದು
ಆದ್ಯ ಆದಿಮರ ಇಳೆ ಇದು ಇದಕಲ್ಲದೆ ಪ್ರೀತಿ ಕಾಯದ ಮೇಲೆ ಸಲ್ಲದು

ಈ ಮೃತ್ತಿಕೆಯ ಸ್ವಾತಂತ್ರ್ಯ ಅದು ನನ್ನದು ನಮ್ಮದು ನಮ್ಮಯ್ಯಗಳದು
ಈ ದೇಶದ ಉಳಿವು ನಮ್ಮುಳಿವು ಈ ಧರಿತ್ರಿಯ ಅಳಿವು ನಮ್ಮಳಿವು
ಬರಲಿ ಬರಲಿ ಬರಲಿ....

ಅಯ್ಯೋ ಈ ಇಳೆಯ ಸಾವುಗಳು ಬರಿ ಅನ್ನ ನೀರ ಸೂರಿನ ಸಾವುಗಳಲ್ಲ
ಸೂರ್ಯನ ದಾಹದ ಸಾವುಗಳು ಕೋವಿಗೂ ಎದೆಕೊಡುವ ನವಿದ ಹುಲಿಗಳಿಲ್ಲ
ತೊಳೆಯಲಾಗದಯ್ಯೋ ಬೆವರಿನ ಮೈ ಬೆವರಿನಿಂದ
ಸುರಿಸಬೇಕಿದೆ ಮಳೆ ಹೊಸ ಬೆಳಗಿನ ಹಾದಿಯಿಂದ
ತೊಳೆಯಲಾಗದಯ್ಯೋ....

ನಡೆದಿಹ ದೋಣಿಯಲಿ ಏಸೊಂದು ತೂತುಗಳಿರಲು ಒಳಧ್ವಜಗಳ ಮಾತೇಕೆ?
ಕೆದಕುವಾ ನಾಳೆ ಎಲೆ ಅಡಿಕೆಯೊಂದಿಗೆ, ಉಳಿಸೋ ಮುಳುಗೀತೊ ದೋಣಿ ತಡವೇಕೆ?
ಮಹಾರೋಗದಿ ಮುಕ್ತಗೊಳಿಸಿ, ಬೆಟ್ಟಕೆ ಬಟ್ಟೆಯನು ತೊಡಿಸಿ ನಡೆಸುವಾಸೆಯೆನಗೆ
ಸೂರ್ಯಚಂದ್ರರಿಗೆ ಗಲ್ಲಿಸುತ ಬೆಳಗ ಎದೆ ಹಾಲ್ ಕುಡಿಸುವಾಸೆ ಧರಣಿಗೆ

ಹೆರೆಯುವುದು ವಜ್ರ ಕರಗುವುದು ಕಬ್ಬಿಣ ನಿಲ್ಲಲಾರದು ನೀರು
ಭೇದ ತೋರದು ಕಿರಣ-ಮರಣ, ಬರುವುದೆಲ್ಲರ ಕಣ್ಣಲೂ ನೀರು
ಸೃಷ್ಟಿಯಲಿ ಸೃಷ್ಟಿಯಾಗಿಬದುಕ ಬಾಳಿ ಉತ್ತುಂಗದಿ ಮೆರೆಸಬೇಕು
ಹೊಸ ಬೀಜಕೆ ಹೊಸಗಾಳಿ ಬೆಳಕು ನೀರುಣಿಸಿ ಬೆಳೆಸಬೇಕು

ಬರಲಿ ಬರಲಿ ಮೊಳಕೆ ಮಂದಾಕಿನಿ ತುಂಬಿ ಬರಲಿ
ಮಾವು ಆಲಗಳೊಂದಿಗೆ ಬೇವು ಕೂಡಿ ಬರಲಿ
ಅಂತಿರಲಿ ಇಂತಿರಲಿ ಎಂತಾದರಿರಲಿ ನನ್ನಿಂಡಿಯಾ ನನಗಿರಲಿ
ಎಳೆತರುವೆ ಭಗೀರಥನಾಗಿ ಗಂಗೆ ಹೊಂಗಿರಣಗಳ ಬಿಂದಲಿ.

# ಭಾರತಾಂಬೆಯ ಉಡಿಯೊಳಗಿನ ಸಾವು ಸಂಕ್ರಾಂತಿ

ಈ ಕನಸು ಕನಸಾಗಿರಲಯ್ಯೋ ತಂದೆ
ನನಸಾಗದೆ ಹೊಸಕಿ ಹೋಗಲಿ ಈ ಕ್ಷಣ
ಹಸಿಯಾಗಿ ಕಾಡದಿರಲಿ ಮೊಟ್ಟೆ ಮರಿಯಾಗದಿರಲಿ
ಬಂಜೆಯಾದರೂ ಸರಿ ಹಯನಾಗದಿರಲಿ ಕುರುವಿಗೆ

ಗಣಕದೊಳಗಿನ ಕಸ ನಾನೋ ನನ್ನೊಳಗಿನ ಕಸ ಗಣಕವೋ
ಕಸ ಗಣಕದೊಳಗೋ ನನ್ನೊಳಗೋ, ನಾವಿಬ್ಬರೂ ದೇಶದೊಳಗಿನ ಕಸವೋ?

'ಐ ಲವ್ ಯು'
ಎನ್ನುತ್ತಲೇ ಬರಿಲಿವ 'ಲವ್‌ಬಗ್ಸ್'
ಒಳಗೆ ಗರ್ದಿಗಮ್ಮತ್ತಿನ ಕುಂಟದ ಕುಣಿತ
ಹೊರಗೆ ಗಡ್ಡ ಬೆಳೆಸಿದ ನಿರುದ್ಯೋಗಿ ಆಲದ ಮರ.

ಗಣಕ ನಮ್ಮ ನುಂಗುವ ಮುನ್ನ
ನಾವೇನುಂಗಿ ಗಣ(ನಾಯ)ಕರಾಗಬೇಕು
ಕಾಯಿಸಿ ಕರಗಿಸಿ ದೇಸಿ ಅಚ್ಚ ಹಾಕಬೇಕು
ಮತ್ತೇರಿದರೆ ಭಗೀರಥನನೇ ನುಂಗೀತು ಎಚ್ಚರ
ಗಣಕದ ಜೇಬಿನಲ್ಲೇ ಇದೆ ದೊಡ್ಡಣ್ಣನ ಟೋಪಿ
ಪಾರಾಗು ಪಾರಾಗು ಇಂಡಿಯಾ

ಪಾರಂಗತನಾಗಿ ಪಾರಾಗು, ನೀ ಸ್ವಯಂ ಆಗು
ಗಾಳಿಯಲಿ ಕೂಡಿಸಿ ಕಳೆದು ಭಾಗಿಸಿ ಗುಣಿಸಿ
ಬೆಳೆಸುವ ಸುಳಿಗಾಳಿ ತಂತು
ಗಾಳಿಯನೇ ಕಲ್ಲಿಯಲಿ ತುಂಬಿ ಮಾರಾಟ ಮಾಡುವ ಬಲ
ವಿದೇಶಿ ವಾತದ ಮೈಯಲಿ ಪಾಲುದಾರರು
ಎಲ್ಲ ಶೂನ್ಯದಲ್ಲಿ ಶೂನ್ಯದ ಲೆಕ್ಕ
ಅನುತ್ಪಾದಕ ಸಂಕುಲ ಚೊಕ್ಕ

ಸ್ವಾಮಿ : ಬೇಕು ನಮಗೆ ನೆಹರುನ ಲೆಕ್ಕ
ಚಿಲ್ಲರೆಗೆ ಮರುಳಾದರೆ ನೀನೆ ಬೊಕ್ಕ

ನೆಟ್ ಜೇಡ ಜಾಲ
ಗೊತ್ತಿಲ್ಲ ಯಾವ ಕ್ಷಣ ಕತ್ತರಿಸಿದಿಲಿಬಾಲ
ನಿನ್ನ ಮಂಪರಿನಲೆ ಕರೆಯುತ್ತಿದೆ

> 'ಬಾ ನೊಣವೆ ಬಾ ನೊಣವೆ ಬಾ ನನ್ನ ಮನೆಗೆ
> ಬಾನೊಳಗೆ ಹಾರಿ ಬಲು ದಣಿವಾಯ್ತು ನಿನಗೆ
> ನೀನೊಮ್ಮೆ ಬಾ ನನ್ನ ಹೊಸಮನೆಯ ನೋಡು
> ಈ ನೂಲಿನಾ ಚಾಪೆಯಲಿ ನೀ ಬಂದು ಕೂಡು..'

ಬೂಟಿನ ಸದ್ದಿಲ್ಲ ಲಾಟಿಯ ಮಂತ್ರವಿಲ್ಲ
ಬಾಯಿನಟ್‌ನ ಇರಿತವಿಲ್ಲ ಗುಂಡಿನ ಸಿಡಿತವಿಲ್ಲ
ಗಾಯವಿಲ್ಲ ರಕ್ತವಿಲ್ಲ ಎಲ್ಲಿ ನೋಡಿದರಲ್ಲೆಲ್ಲ
ಹೆಲ್ಪ್ ವಿಂಟೋ, ಫಾಯಿಲ್.....
ಮದ್ದುಗುಂಡಿನ ಫಾಂಟ್ಸ್ ಸೈನ್ಯದುಗ್ರಾಣ
'ಕ್ಲಿಕ್'ನಲ್ಲಿಯೇ ಅಡಗಿದೆ ಸ್ಫೋಟ!

ಎಲ್ಲರ ಮನೆಯುಡಿಯಲೂ ಕವಾಯತ್ತಿನ ಸಂಗೀತ ಸೈನಿಕರು
ಅರಿತೋ ಅರಿಯದೇಯೋ ಸಾವಿನಸಿರಿಯನ್ನು
ಉಡಿಯಲಿ ಕಟ್ಟಿಕೊಂಡು ಬದುಕುವ ಬದುಕು!
'ಖುಲ್‌ಜಾ ಸಿಮ್ ಸಿಮ್' ಪ್ರವೇಶಿಸಬಹುದು
ಅಭಿಮನ್ಯುವಿನಂತೆ ಚಕ್ರವ್ಯೂಹ ಭೇದಿಸುತ್ತ
ಹೊರಬರಲು ಇಲ್ಲಿ 'ಡೋರ್' ಇಲ್ಲ!

ಮನುಜಮತವೇ ನೀನೊಂದು ಧರ್ಮವಾಗು
ವಿಶ್ವವೇ ಒಂದು ಕುಟುಂಬವಾಗು
ಮನುಜನೇ ನೀನು ಪಂಚಭೂತವಾಗು
ಬದುಕು ಬದುಕಿಸು ಬದುಕಬಿಡು.

□

# ಗೋರಿಮಾಳ ರಂಗೋಲಿಯಲಿ ಬೆಳಗ ಕಂಡ....

ಕಾಮನ ಬಿಲ್ಲಿನ ಬಣ್ಣದ ಲೋಕದಲಿ
ರೆಕ್ಕೆ ಕಟ್ಟಿ ಹಾರಿದವು ಗೋರಿಮಾಳ ಲಂಗ-ದಾವಣಿ
ಗಗನ ಕುಸುಮಕ್ಕೆ ಮುತ್ತಿ ಇಬ್ಬನಿಯ ಹಾದಿ ಮೂಡಿದವು
ಊರಿಗೂರೇ ರಂಗೋಲಿ ಬರೆದಂತೆ
ದಿನವೂ ಮನೆ ಅಂಗಳಕೆ ಸಗಣಿ ಸಾರಿಸಿ
ಎದೆ ಅಂಗಳದಿ ಚಿತ್ರಶಾಲೆಯನೆ ಬಿಡಿಸಿ
ದರ್ಗಾದ ನವಿಲು ಗರಿಗೆದರಿ ಕುಣಿದಂತೆ ತೇಲಾಟ
ಗುರು ನಂದಕ್ಕಳನ್ನೆ ನಂದಿಸಿದ್ದಳು ನಾಲ್ಕುಗೋಡೆ ನಡುವೆ
ಪೆನ್ನಿನ ಮೊನೆಯಲಿ ಮನಸ್ಸಿನ ಮಾಲೆ
ಅಕ್ಕಿ ಚುಕ್ಕೆಯ ನಕ್ಷೆ ಪುಸ್ತಕಗಳ ತುಂಬ
ಹಾಸಿ ಹೊದ್ದು ಸುಖಿಸಿದವು ಕುರಾನಿನ ಶ್ಲೋಕಗಳು
ಗೋರಿಮಾಳ ಎದೆಯ ತಲ್ಲಣಕೆ ಅತ್ತು ಮುಖ ಬಿರಿದಂತೆ ಅಂಗಳ.

ಎಣಿಸಿರಲಿಲ್ಲ ರಜಾಕನೂ ಕೂಡ
ರಂಗೋಲಿ ಮಾರುವ ಹೆಣ್ಣಿಗೆ ಬಿಟ್ಟ ನಕಲಿಯ ಬಾಣ
ಜಿದ್ದಿನಲ್ಲೇ ಹದ್ದು ಮೀರಿದ ತಿರುಗುಬಾಣ!
'ಪಕ್ಕದ ಮನೆಯ ನಂದಕ್ಕಳಿಗೆ ಬಿಡಿಕಾಸು ಬಿಟ್ಟಿಲ್ಲ
ನೀ ಕೊಳ್ಳುವುದಾದರೆ ಬಿಡುವೆ'
'ಸರಿ ಬುಟ್ಟಿಯೇ ಸುರಿ' ಎಂದು ಲುಂಗಿ ಒಡ್ಡಿದಾಗ
ರಂಗೋಲಿಯ ಬುಟ್ಟಿಯೇ ಲುಂಗಿಯಲ್ಲಿತ್ತು!
ಮಾತು ಎತ್ತಲಾಗದೆ ಸೋತ
ಕ್ಷಣ ಭೂಕಂಪವಾದಂತೆ ಮೈಯಲ್ಲಿ ನಡುಕ

ತೋರಗೊಡದೆ ಹೊತ್ತು ತಂದ ಮನೆಗೆ.
ಗೋರಿಮಾಳ ಎದೆಯಲಿ ಮಲಗಿದ್ದ ನವಿಲುಗಳು ಗರಿಗದರಿ ನಿಂತವು
ಗೋರಿಮಾಳ ರಂಗೋಲಿಯಲಿ ರವಿ ಬೆಳಗ ಕಂಡ
ಅರಳಿದ ರಜಾಕ ಕಲೆಗೆ ಮಗಳ ಬಲೆಗೆ.

ಎದುರು ಮನೆಯ ಹುಸೇನಿ
ಬಿದ್ದ ಇಟ್ಟಿಗೆಯ ತುಂಡನ್ನೆತ್ತಿ ಹೊರಟಾಗ
ಅಂಗಳದ ರಂಗೋಲಿ ಗೆರೆಗಳು ಹಾವಾಗಿ ಹರಿದವು ಎದೆ ಮೇಲೆ
ಸನ್ನೆಯಲಿ ಒಳ ಕರೆದು ಚೋಟಿದ ಬುಚ್ಚಿದ ಶಿವಿದ

'ಮಸೀದಿಯ ಕಡೆಗೆ ತಲೆ ಹಾಕಿ ಮಲಗಲಾರೆ
ಮಸೀದಿಯೇ ಮನೆಗೆ ಬಂದರೂ ನಮಾಜು ಮಾಡಲಾರೆ
ಕೂಲಿ ಹೊಟ್ಟೆಗೆ ಹಿಟ್ಟು ಕೊಟ್ಟರೆ ಸಾಲದು
ಸುಂತಿಯಾದರೆ ಸಾಲದು ಸಂತೆಯಲಿರುವುದ ಕಲಿ'

ಹುಸೇನಸಾಬನ ಎದೆಯ ಗಾಯಗಳು ಮಾತನಾಡುತ್ತಿದ್ದವು
ಸಾಕ್ಷಿ ಹೇಳುತ್ತಿದ್ದವು ನಂದಕ್ಕನ ಕಣ್ಣೀರು
ರಜಾಕನ ಮಡದಿ ತಂಗಮ್ಮ, ತಸ್ಲೀಮಾ ಆದದ್ದೂ
ಹಚ್ಚಿ ಹೊಸ್ತಿಲು ಸುಟ್ಟು ಅಂಗಳ ರಕ್ತ ಇಂಗಿದ್ದು
ಆ ರಕ್ತದಂಗಳದಲ್ಲಿ ನಿಂತಂತಾಗಿ ಭುವಿಯೇ ತಿರುಗತೊಡಗಿತು.

ಆ ಕ್ಷಣ ರಜಾಕ 'ರಜಾಕಸಾಬ್'ನಾದ
ನೀರು ತುಂಬಿದ ಬಕೇಟ್ ತಂದ
ಗೋರಿಮಾ ಗೋರಿಯಾದಳು ಅಂಗಳದ ರಂಗೋಲಿಯಂತೆ
ಬುಟ್ಟಿಯೊಳಗಿನ ಬಿಳಿ ರಂಗೋಲಿ
ಬೆನ್ನು ಕಾಯಿಸುವ ಮರಳಾಗಿ ಕಪ್ಪಾಯಿತು.

ರವಿ ಸೂರ್ಯನಾಗುವ ಮುನ್ನವೆ ಮುಳುಗಿದ
ಕಸಿಯಲಾಗಲಿಲ್ಲ ಎದೆನವಿಲ ರಂಗೋಲಿ ರೇಖೆ. □

# ದೇವರಿಗೆ ಟೋಪಿಹಾಕಲು ಹೋಗಿ ದೇವರಾದವರು

ಸ್ವಾಮಿ ತೆಗೆದುಕೊಳ್ಳಿ ಈ ಮೀಸಲಾತಿ
ನಮಗಿಲ್ಲ ಎನ್ನುವವರಿಗೆ ಕೊಟ್ಟುಬಿಡಿ
ನಮ್ಮನ್ನು ಕೃತಾರ್ಥರನ್ನಾಗಿ ಮಾಡಿ
ಈ ಜೀವ ಜಂಜಾಟದಿ ಬಿಡುಗಡೆ ಮಾಡಿ
ಸ್ವಾಮಿ ತೆಗೆದುಕೊಳ್ಳಿ ....

ಅವರೋ ಜಾತಿಗಳ ಕದಿಯುತ್ತಿದ್ದಾರೆ
ಇವರೋ ಜಾತಿಗಳ ಕಾಯುತ್ತಿದ್ದಾರೆ
ಅಯ್ಯೋ ಮನೋಮಲ ಜಾತಿಗಳೇ
ನೀವು ಬಂಗಾರದ ಮೊಟ್ಟೆ ಇಡುವ ಕೋಳಿಗಳಾದಿರೆ?

ಅವ ಹೆಬ್ಬೆರಳ ಕಳೆದುಕೊಂಡ
ಇವ ದಡದ ಚರ್ಮದಿ ಚಪ್ಪಲಿ ಹೊಲೆದು ಕೊಟ್ಟ
ಶರೀರ ಸಹಿತ ಸ್ವರ್ಗ ಸೇರುವೆನೆಂದು ರುಂಡವನೆ ಕಳೆದುಕೊಂಡನವ
'ಭೀಮ' ಹತ್ತು ಬೆರಳ ಕೂಡಿಸಿ ನೀರ ಕುಡಿದ
ಕೋಳಿಗಳ ವಂಶವನೇ ನಿರ್ವಂಶ ಮಾಡುವೆನೆಂಬ ಹಠ
ಕೆಲವರಿಗೆ ಬಿರಯಾನಿಯಾಗುತ್ತಿದೆ ಕೆಲವರಿಗೆ ತಂದೂರಿ
ಹತ್ತು ಬೆರಳು ಎರಡು ಮುಷ್ಟಿಯಾಗಿ
ಹತ್ತು ತಗರುಗಳಾಗಿ ಟಕ್ಕರಿಸಲಿವೆ ನಾಳೆ!

ಮೀಸಲಾತಿಯವರೆಂದರೆ ಮೂಗ ಮುಚ್ಚುವವರು
ಪೂಜಾರಿ ತೀರ್ಥಕ್ಕೆ ಸರಕಾರಿ ಕಛೇರಿಗಳ ಮುಂದೆ ಬಕಧ್ಯಾನ
ಬಿಕ್ಕುತ್ತಿದ್ದಾರೆ ಧರ್ಮಾಧಿಕಾರಿಗಳು
ಓ! ಸೀಮೆ ಎಣ್ಣೆ ಸಾಲಿನಂತೆ ನೂಕು ನುಗ್ಗಲು
ದೇವರಿಗೂ ಟೋಪಿ ಹಾಕಲು!
ಕೋಳಿಯೇ ನಿನ್ನ ಮಹಿಮೆ ಅಪಾರ.

ಬಹಿರಂಗವಾಗಿ ಹರಾಜು ಮಾಡಿ ಸ್ವಾಮಿ ಕಳ್ಳತನವೇಕೆ?
ಪರಂಪರಾಗತ ಕ್ಷುದ್ರ ಕೋಳಿಗಳ ಆಸ್ತಿಯೂ ತೆಗೆದುಕೊಳ್ಳಿ
ತಲೆಯ ಮೇಲೆ ಮಲಹೊತ್ತು ಸಾಗಿಸುವ
ಸತ್ತ ದನ ಹೊತ್ತು ತರುವ, ಹೆಣದ ಮೇಲಿನ ಬಟ್ಟೆ ತೊಡುವ
ಊರ ಕಸಗೂಡಿಸುವ, ನೀರು ಎತ್ತಿ ಹಾಕಿಸಿಕೊಳ್ಳುವ
ಜಿಹ್ವೆ ಲಾಳಿಗಳ ಕತ್ತರಿಸಿಕೊಂಡಿರುವ, ಇತಿ ಇತಿ ಎಲ್ಲವೂ ತೆಗೆದುಕೊಳ್ಳಿ

ದಯವಿಟ್ಟು ಕ್ಷಮಿಸಿ ಸ್ವಾಮಿ
ಆ ಕೆಲಸಗಳ ಮಾಡಿಸಿ ಪಾಪದ ಭಾರ ಹೊರುವ ಸಾಮರ್ಥ್ಯ ನಮ್ಮಲಿಲ್ಲ....
ಎಂದು ಮಾತು ಮುಗಿಸುವ ಮುನ್ನ ಆತ ಮಂಗಮಾಯವಾಗಿದ್ದ
ಹುಸಿ ನಕ್ಕು ಅಡಿ ಮುಂದಿಡಲು ಹವಣಿಸಿ ಕೀಳಲೊಲ್ಲದು ಕಾಲು
ಅಡಿಗೆ ನೋಡಿದರೆ ದೀರ್ಘದಂಡ ನಮನ ಹಾಕಿಹನಯ್ಯೋ!

ಹೇ ಕರುಣಾಮಯಿ 'ಅಸ್ಪೃಶ್ಯ'ನಲ್ಲ ನೀನೇ 'ದೇವರು'
ಕಣ್ಣು ತೆರೆಸಿ ಒಂದೇ ಕ್ಷಣದಲಿ ಪಾವನ ಗೈದೆ
ಏಳು ಜನ್ಮವೇಕೆ? ಸಾರ್ಥಕ ಈ ನರಜ..
ಬೇಡೆನಗೆ ಕೋಳಿ, ಮನುಷ್ಯನಾಗಿಸಿದ್ದೆ ಸಾಕು ನೀನೆನಗೆ
ಇನ್ನು ನೀನೆನ್ನ ಹರಸು!

ಅಯ್ಯೋ 'ದೇವರು' ನಾನಲ್ಲ ನೀನು! ನನ್ನ ಕಣ್ಣು ತೆರೆಸಿದೆ
ಎಂದು ಬಾಗುತಿರೆ ಅಡಿಗೆ ಬರಿ ಧರೆ
ಎಲ್ಲಿ ಎಲ್ಲಿ ಹೋದನೋ?
ಆ ಜನಜಂಗುಳಿಯಲಿ ಎಲ್ಲಿ ಮಾಯವಾದನೋ!

❑

## ಸ್ಮೃತಿಹರಿದ ಕಾರ್ಗಿಲ್

ಲೋ ಸಾರ್ವಜನಿಕ,
ತೆರೆ ಕಣ್, ತೆರೆ ಎದೆ ಕವಾಟುಗಳು
ಅನಾಥ ನೀನಾಗುವುದಲ್ಲ-ಪರಕೀಯ ನೀನಾಗುವುದಲ್ಲ
ನಿಂತ ನೆಲ, ಕುಡಿವ ಜಲ, ನೀನುಸಿರುವ ಗಾಳಿ
ವಿಕಲಾಂಗವಾಗುವ ಕಾಲ, ತೆರೆ ಕಣ್ ತೆರೆ
ತಡಮಾಡಿದರೆ ಮುಚ್ಚಿದ ಕವಾಟುಗಳಲ್ಲೆ ಹೆಣವಾಗುವಿ.

ತೊಡಲು ಸಾವಿನ ಮಾಲೆ
ಕೊಡಲು ಮೃತ್ಯುವಿನ ದಂಡ
ನಡೆದಿಹರು ನೋಡದೋ ಹಿಮಶಿಖರಗಳನೇರಿ
ಗಡಿಮೀರಿಬಂದ ಗಡಿಗಳ ಗಡಿಪಾರು ಮಾಡಲು
ದಣಗಳ ಮೇಲೆ ಬೂಟಿನ ಹೆಜ್ಜೆ ಮೂಡಿಸಿ
ಕಣದಲಿ ಹೆಣವಾಗಿ ಬದ್ಧಿಹರು
ಎದೆಯಂಗಿಯ ಹರಿದು ನೀಡಿ ನಿಂತಿರು ಟ್ಯಾಂಕರಿಗೆ
ಬಲ ತೋಪಿಗಿದೆಯೊ ಗಂಡೆದೆಗಿದೆಯೊ ನಿರ್ಣಯಿಸು!

ಲೋ ಸಾರ್ವಜನಿಕ,
ಕಫನ್ ಗೀತೆಯ ಹಾಡುತ ವೀರಮರಣವನಪ್ಪಿಹರು
ಜನ್ಮಭೂಮಿಗೆ ಆಹುತಿ; ಜನ್ಮ ಸಾರ್ಥಕದ ಆರತಿ
ಜೀವ ಕೊಡುವೆವು; ಇಂಚು ಭೂಮಿ ಕೊಡಲಾರೆವು
ಚಾಮುಂಡಿಯ ಕೊರಳಿಗೆ ರುಂಡ ಮಾಲೆಯ ತೊಡಿಸುತ
ಭಾರತಾಂಬೆಯ ಪಾದದಲಿ ಹೂವಾಗಿ ಸೂಸುತಿಹರು
ನೀನ್ಯಾವ ಅಮಲಿನಲ್ಲಿರುವೆಯೋ ಸಾರ್ವಜನಿಕ
ತೆರೆ ಕಣ್ ತೆರೆ, ಬೆರೆ ಮಾತಾಡು, ಮುರಿ ಮೌನ.

ಯೋಧರಲಿ ಅನಾಥಪ್ರಜ್ಞೆ
ಸಾಯುವುದಕ್ಕಾಗೆ ಸಂಬಳ ಪಡೆವವರು ಎಂದು
ಹೆಪ್ಪುಗಟ್ಟಿದ ಹಿಮದಲೂ ಯೋಧರಿಗೆ ವಿದ್ಯುತ್ ವಾಹಕ
ಕೊಡು ನಿನ್ನ ಎಣ್ಣೆ ಫುಲ್‌ಥ್ರೊ ಹೊಡೆಯಲು.

ದುಃಖ ಕಡಲಂತೆ ಉಮ್ಮಳಿಸಿದರೂ ಶಿಲುಬೆಯ ಹಿಡಿದು
ಎನಗಿನ್ನೊಬ್ಬ ಮಗನಿಲ್ಲ ರಣರಂಗಕೆ ಕಳುಹಿಸುತ್ತಿದ್ದೆ
ಮಡದಿ ತನ್ನ ತಾಳಿಯ ಕಿತ್ತು ದಾನಗೈಯುತಿಹಳೋ
ತಾನು ವಿಧವೆ ಎಂಬುದ ಮರೆತು
ತಾಯಿ 'ದುವಾ' ಬೇಡುತ ಹೇಡಿಯಲ್ಲ ಎನ್ನ ಮಗ
ರಣರಂಗದಿ ಓಡಿದರೆ ಕತ್ತರಿಸಿಕೊಳ್ಳುವೆದೆಹಾಲಕಂಭಗಳ
ತಂಗಿ ಉಪವಾಸ ಹರಕೆ ಮಕ್ಕಳು ಚುಕ್ಕೆ ಎಣಿಸುತಿಹರೋ.

ಸತ್ತವ ಮುಸ್ಲಿಮನಲ್ಲ ಭಾರತೀಯ
ಸತ್ತವ ಹಿಂದೂ ಅಲ್ಲ ಭಾರತೀಯ
ಸತ್ತವ ಸಿಖ್, ಇಸಾಯಿ, ಕ್ರೈಸ್ತ ಬೌದ್ಧನಲ್ಲ
ಭಾರತೀಯ ಭಾರತೀಯ ಬರಿ ಭಾರತೀಯ.

ಲೋ ಸಾರ್ವಜನಿಕ ನೀನೆಲ್ಲಿ ಕಳೆದುಹೋಗಿರುವೆ?
ನೀ ತಿನ್ನುವ ಅನ್ನ ನಿನಗೆ ಕಹಿ ಎನಿಸದೇನೋ?
ನೀ ಕುಡಿಯೋ ನೀರು ನಿನಗೆ ಅಮೃತವೆನಿಸುವದೇನೋ?
ನೀನುಸಿರುವ ಗಾಳಿ ಭಾರವೆನಿಸದೇನೋ?
ಇದು ಯೋಧನದಲ್ಲ ಕುಟುಂಬದ ಶೋಕಗೀತೆ.
ದೇಶದ ರಕ್ಷಣೆ ಯೋಧರಿಗೆ ಕೊಟ್ಟ ಗುತ್ತಿಗೆಯಲ್ಲ
ಸಾರ್ವಜನಿಕ ಏಳು; ಬೆಸೆ ತನುವಿಗೆ ತನು-ಮನಕೆ ಮನ
ಕೊಡು ಹೆಗಲು ನಿನ್ನದೆಲ್ಲವ ಕೊಟ್ಟು ಪುನೀತನಾಗು.

ಇದೇ ಪರಿಭಾಷೆಯ ಪಾಡು
ವೈರಿ ದೇಶದ ಹಾಡು
ಯುದ್ಧವಿಲ್ಲದ ನಾಡು ಬುದ್ಧ ನಾಡು
ಬುದ್ಧನಿಲ್ಲದ ನಾಡು ಯುದ್ಧ ನಾಡು.

□

## ದೇವರಿಗೆ ಧಿಕ್ಕಾರಹೇಳುವ ಹೂಗಳು

ಕವಿ ನೆಲದ ಮೇಲಿರುವುದಿಲ್ಲ
ಎಷ್ಟೋ ಬಾರಿ ನೆಲವೇ ಕವಿಯ ಮೇಲಿರುತ್ತದೆ.

ಕವಿ ಆಕಾಶದ ಮೇಲಿರುತ್ತಾನೆ
ತನ್ನೊಂದಿಗೆ ತನ್ನ ಜಗತ್ತನ್ನೂ ಮೇಲಕೆತ್ತುತ್ತಾನೆ

ಕವಿ ಅಧೋಮುಖಿಯಾಗಿ ನೆಲಕ್ಕೆ ಬೀಳುತ್ತಾನೆ
ಆತನ ಕವಿತೆಗಳು ನೆಲ ಮುಟ್ಟುವ ಮುನ್ನವೆ ಊರ್ಧ್ವಮುಖಿಯಾಗುತ್ತವೆ

ಗೋರಿಯಾದ ಕವಿಯ ಹೆಣಕೆ ಜೀವ ಬರುತ್ತದೆ
ಕವಿ ಮೇಲೇಳಲಿಲ್ಲ, ಆತನ ಕವಿತೆಗಳು ಇಳೆ ಮೇಲೆ ಹೂವಾಗಿ ಅರಳಿರುತ್ತವೆ

ಹೂಗಳು ಈಗಲೂ ಎಲ್ಲ ಕಡೆಗೂ ಅಲುಗಾಡುತ್ತವೆ
ಕ್ಷಣ ಕ್ಷಣಕೂ ಕೃತಜ್ಞತೆಯನು ಹೇಳುತ್ತ ಸಮಾಜ ಕವಿಗೆ ವಂದಿಸುತ್ತವೆ

ಕವಿಯ ಕತ್ತು ಕೊಯ್ದವರೇ ಹೂ ಕೊಯ್ಯುತ್ತಾರೆ
ಹಸಿದವರ ಹೊಟ್ಟೆಗೆ ಕೊಳ್ಳಿ ಇಡಲು, ದೇವರಿಗೆ ಅರ್ಪಿಸಿ ಬೇಡಿಕೊಳ್ಳುತ್ತಾರೆ

ಹೂಗಳು ದೇವರಿಗೆ ಧಿಕ್ಕಾರ ಹೇಳುತ್ತವೆ
ಅನುಕ್ಷಣವೂ ಬಣ್ಣ ಬದಲಾಯಿಸುವ ಹೂಗಳು ಜಯಕಾರ ಹೇಳುತ್ತವೆ

ಕವಿ ಮತ್ತೆ ಗೋರಿಯಿಂದ ಮೇಲೇಳುತ್ತಾನೆ
ತಾನೇ ದೇವರಾಗುತ್ತಾನೆ ಜನಾರಣ್ಯವೇ ಹೂಬನವಾಗಿ ಅರಳುತ್ತದೆ!

□

# ಈಗೋ ಆಗೋ ಉದುರುವ ತರಗೆಲೆಗಳು

ಮೆಲುಧ್ವನಿಯಲಿ 'ಆತ' ಹೇಳಿದ
ಇದು ನನ್ನ ಮನೆಯಲ್ಲ
ನನ್ನ ಸ್ವಂತ ಮನೆ ಮಾಡಿದಾಗ ನಿನಗೆ ಊಟಕ್ಕೆ ಕರೆಯುತ್ತೇನೆ.
ಎಂದಿನಂತೆ ತಂದು ಕೊಟ್ಟ ಚಹ ಹೀರುತ್ತಿದ್ದೆ
ಆತನಜ್ಜಿ ಬಂದವಳೆ 'ಏ ಭಾಡ್ಯಾ ಏಳು' ಎಂದಳು
ನಾನು ಹೆದರಿದೆ
ಸೋಪಾದ ಮೇಲೆ ಸೂಜಿ ಇಟ್ಟಿದ್ದೆ ಚುಚ್ಚಲಿಲ್ಲಾ? ಎಂದಳು
ಅಜ್ಜಿ ನಿಮ್ಮ ಮಾತೇ ಸೂಜಿಗಿಂತ ಚೂಪು.

ಹಾಳಾಗಿ ಹೋಗ್ಲಿ ರಿಜರ್‌ವೇಶನ್ ಅಂತೆ
ನಮ್ಮ ಹುಡುಗ ಅಪ್ಲಿಕೇಶನ್ ಹಾಕಿದ್ದ
ಯಾವುದೋ ಗ್ರೂಪಿಗೆ ರಿಜರ್ವ್ ಆಗಬೇಕಾ? ಹಾಳಾದದ್ದು ಸರಕಾರ
ಆ ಅಂಬೇಡ್ಕರ್ ನಮ್ಮ ತಲೆ ಮೇಲೆ ಚಪ್ಪಡಿ ಇಟ್ಟು ಹೋದ
ಅಂದ್ಹಾಂಗೆ ನಿಮ್ಮ ಜಾತಿ ಯಾವುದು?

ಸೂಜಿ ನನ್ನ ಮೆದುಳಲ್ಲೇ ಮುರಿದಂತಾಯಿತು
ಕಪ್ಪು ಬಸಿ ಕಂಪನಕ್ಕೆ ಸಂಗೀತ ಹೇಳತೊಡಗಿದವು
ಅಜ್ಜಿಯ ಕಣ್ಣರಳಿ ಮುಖ ಸಿಂಡರಿಸಿತು.

ಆತ ನೀರಾಗಿದ್ದ, ಮುಖವೂ ಬಾಡಿತ್ತು
ಅಸಹಾಯಕನಾಗಿ
'ಅಜ್ಜಿ ನೀ ಯಾವಾಗ ಹೋಗ್ತಿ ಮೇಲೆ' ಎಂದ
ಅಟ್ಟದ ಮೇಲೆ ತಾನೇ, ಈಗಲೇ ಹೊರಟೆ!

ನಾನೇ ಹೊಸ್ತಿಲ ದಾಟಿ ಹೊರಬಂದು
ನನ್ ಮನೆಯಲ್ಲೂ ಒಬ್ಬ ಅಜ್ಜಿ ಇದ್ದಾಳೆ ನಿನಗೆ ಗೊತ್ತಲ್ಲ
ನೀನು ಬಂದರೆ ಅವಳ ಮುಖ ಅರಳುತ್ತೆ
'ಅವನು' ಬಂದರೆ –

'ಮನೆಯಲಿ ಕೆಂಜಗ ಎಳ್ತಾವೆ
ಅವನಿಗೆ ಯಾಕ ಕರಕೊಂಡು ಬರ್‍ತಿ' – ಅಂದಿದ್ದಳು
ಆವಾಗ ನಾನೂ ಹೇಳಿದ್ದೆ
'ಬೇ ಮುದುಕಿ ನೀ ಯಾವಾಗ ಸಾಯತಿ ?'
ಆತ ಸಮಾಧಾನದಿಂದ ನಕ್ಕ.

'ಅವನೂ' ಆ 'ಇವನಿಗೆ' ಹೇಳುತ್ತಿದ್ದನಂತೆ
ನನ್ನ ಮನೆಯಲ್ಲೂ ಒಬ್ಬ ಮುದುಕ ಇದ್ದಾನೊ....
ಉದುರುವ ಎಲೆಗಳು ಗಾಳಿಯಿಲ್ಲದೆ ಅಲುಗಾಡ್ತಾವೆ
ಅನಂತರವೇ ತಾನೆ ಹೊಸ ಚಿಗುರು!

# ತಿರುತಿರುಗಿ ಬತ್ತಳಿಕೆ ಸೇರುವ ಬಾಣಗಳು

ವಿಶಾಲವಾದ ಸರಕಾರಿ ಬಂಗಲೆ
ಹಿತ್ತಲದಿ ಬಾಳೆಬನ ಮುಂದೆ ಮಾವಿನ ಮರ
ಸುತ್ತೆಲ್ಲ ಹೂ ಬಳ್ಳಿ ಹುಲ್ಲಿನ ಮೆತ್ತೆ
ಗೇಟಿನ ಬಳಿ ಸದಾ ಸೋರುವ ನಲ್ಲಿ.

ದೊಗಲಂ ಪೊಗಲಂ ಬಟ್ಟೆಯ ಬೆವರು ತುಂಬಿದ
ಎಣ್ಣೆಗೆಂಪಿನ ಮುಖ ಹೆದರುವ ಕಣ್ಣು ಸಂದೇಹದ ಹೆಜ್ಜೆಗಳು
ನಡುಗುವ ಕೈಯಲ್ಲಿ ಗೇಟು ತೆಗೆದ: ಆ ಹುಡುಗ
'ನೀರು....ನೀರು....' ಸನ್ನೆ ಮಾಡಿದ
ಎಷ್ಟು ತಿರುವಿದರು ಹನಿ ಉದುರಲಿಲ್ಲ ಅಂದು
ಮತ್ತೆ ನನ್ನ ಮುಖ ನೋಡಿ ಸನ್ನೆ ಮಾಡತೊಡಗಿದ
ಪಕ್ಕದ ಮನೆಯವರು ನಾಯಿ ಬಿಟ್ಟಿದ್ದರು.

ಆತ ಹುಡುಗನಲ್ಲ ಅಲ್ಲಿ ನಾನೇ ನಿಂತಂತಾಗಿತ್ತು!
ಮೆಲ್ಲನೆ ನನ್ನೆದೆಯಲಿ ಬುಡ್ಡಿ ಚಿಮಣಿಯು ಹತ್ತಿ ಉರಿಯತೊಡಗಿತು
ನನ್ನ ನೋಟ ನನ್ನ ದನಿ ನನಗೆ ಎದುರು ನಿಂತವು-ಅಂಗಲಾಚಿದವು
ಭೂತದ ನೃತ್ಯ ಆರಂಭವಾಯಿತು.

ಆತ ನೀರು ಎತ್ತಿ ಹಾಕಲು ಹೇಳಿದ
ನೀರಿನ ಗ್ಲಾಸೇ ಕೈಗಿತ್ತೆ
ಅಷ್ಟರಲ್ಲಿ ನನ್ನ ಯು.ಕೆ.ಜಿ.ಯ ಮಗ ಬಂದು
'ಯಾರಪ್ಪಾಜಿ ಇವರು' ಎಂದ.

ಆ ಬುಡ್ಡಿ ದೀಪ ಇನ್ನಷ್ಟು ಶುಭ್ರವಾಗಿ ಉರಿಯತೊಡಗಿತು
ತೋಪಿನಲ್ಲಿ ಮಾವು ಕದ್ದು, ಹತ್ತಿ-ಹುಣಸೆ-ಕದ್ದು
ಬೆನ್ನ ಬಾಸಾಳವೆತ್ತಿಸಿಕೊಂಡಿದ್ದೆ 'ದಮ್ಮಯ್ಯ' ಹಾಕಿ ಹೊರಳಾಡಿದ್ದೆ.

ಆ ಹುಡುಗ ಮಾವಿನಕಾಯಿ ತೋರಿಸಿ
ಇಲ್ಲಿಯದಲ್ಲ ಅಲ್ಲಿಯದೆಂದ-ಸುಮ್ಮನಿದ್ದರೂ ಹೆದರಿದ
ರಮಿಸಿ ನೀರು ಹಣಿಸಿದೆ-ಕುಡಿದ.

ಮಗ : ಅವರ‍್ಯಾಕೆ ಇಲ್ಲಿ ಬಂದು ನೀರು ಕೇಳ್ತಾರೆ?
ನೀನು ಶಾಲೆಗೆ ಹೋಗ್ತಿಯಾ, ನೀರು ಕುಡಿಯೋಕೆ
ಅಲ್ಲಿಂದ ಮನೆಗೆ ಬರ‍್ತಿಯಾ? - 'ಇಲ್ಲ'
ಹಾಗೇನೆ ಇದು – ಅವ್ರ ಮನೆ ದೂರ.
ಮಾವಿನ ಕಾಯಿ ಅವರನ್ನು ಕಾಲು ಕಿತ್ತಲು ಬಿಡಲಿಲ್ಲ.

ನನ್ನ ಮಗನ ಪ್ರಶ್ನೆ ಆ ಕುರುಡು ದೀಪದ ಬೆಳಕಿಗೆ
ಅವನನ್ನು ಕರೆದು ತಾ ಎಂದಿತು;
ನಾನು ಚಿಕ್ಕವನಾಗಿದ್ದಾಗ :
ದನದ ಸಗಣಿ ಹಿಡಿಯೋಕೆ, ಕೋಲಿ, ಕಾಯ್‌ಕುಳ್ಳಾಯೋಕೆ
ಕಟ್ಟಿಗೆ ಆರಿಸೋದಕ್ಕೆ ಹೋದಾಗ ಹೀಗೆ ನೀರು ಕೇಳತಿದ್ವಿ.
ನೀರು ಹಾಕುವವರು ಹೆಣ್ಣು ಕೊಡುವವರ ಹಾಗೆ
ಯಾವ ಊರು? ಮನೆ ಎಲ್ಲಿ? ಯಾವ ಜಾತಿ?.......
'ಹರಿಜನರ ಕೇರಿಯಲ್ಲಿ' ಅಂದಾಗ ಮುಖ ಹರಳೆಣ್ಣೆ ಕುಡ್ದ ಹಾಗೆ
ತಂಬಿಗೆ ಕೆಳಗಿಡಲು ಹೇಳುತ್ತಿದ್ದರು...
'ನೀರು ಎತ್ತಿ ಹಾಕುತ್ತಿದ್ದರು'
ಎತ್ತಿ ಹಾಕುವುದು ಅಂದ್ರೆ ಗೊತ್ತಾ?

'ಹೀಗೆ ಬೊಗಸೆ ಒಡ್ಡು, ನಾನು ಎತ್ತಿಹಾಕಿ ತೋರ‍್ಸತ್ತೇನೆ
ಮುಖ ಮೇಲೆ ಮಾಡ ಬೇಡ, ಮೂಗಲ್ಲಿ ಗಂಗೆ ಹೋಗ್ತಾಳೆ
ಒಮ್ಮೆಗೆ 'ಗುಟಕ್' ಮಾಡಬೇಡ ನೆತ್ತಿಗೇರುತ್ತೆ..... ನೀರು ಹಣಿಸಿದೆ
ಆತ ಸರಾಗವಾಗಿ ಕುಡುದು ಹೇಳಿದ
ನೀರು ಎತ್ತಿಹಾಕುವುದು ಅಂದ್ರೆ ಇದೇನಾ ಅಪ್ಪಾಜಿ?
ಪಕ್ಕದ ಮನೆಗೆ ಆಟಕ್ಕೆ ಹೋದಾಗಲೆಲ್ಲ ಅವರು ಹೀಗೆ ನೀರ ಹಾಕೋದು

ಒಂದು ಕ್ಷಣ ಕಲ್ಲಿನಂತೆ ನಿಂತುಬಿಟ್ಟೆ!
ಮಾವಿನಕಾಯಿಗಾಗಿ ಕಾಯುತ್ತಿದ್ದ ಮುಖ ಕಂಡವು
ನೀವು ಗ್ಲಾಸಲ್ಲಿ ನೀರು ಕೊಡಬಾರ‍್ದು ಅಪ್ಪಾಜಿ
ಪಕ್ಕದ ಮನೆಯವರು ಹಾಕಿದ ಹಾಗೆ ಹಾಕಬೇಕು – ಎಂದ
ಹಳೆಯ ಕಥೆ ಕೇಳಿ ಗೇಟಿನಲ್ಲಿ ನಿಂತ ಮಕ್ಕಳು ಮಂಗಮಾಯ.

ಆ ಕುರುಡು ದೀಪ ನೆಲಕ್ಕೆ ಬಿದ್ದು ಎಣ್ಣೆ ಚೆಲ್ಲಿ
ಬುಗ್ಗನೆ ಉರಿಹತ್ತಿದಂತಾಯಿತು, ಹೇಗೆ ನಂದಿಸಲಿ?

□

## ಚಮ್ಮಾರ ಕವಿಯಾಗಲಾರ

ಬಾಪು; ನೀವೆಷ್ಟೇ ಜನ್ಮವೆತ್ತಿ ಚರ್ಮದ ಕೆಲಸ ಮಾಡಿ
ಅಂಗಡಿಯೇ ತೆರೆದರೂ 'ಚಮ್ಮಾರ' ಎನಿಸಿಕೊಳ್ಳಲಾರಿರಿ
ಹೇರಿರುವ ಆ ಡಿಗ್ರಿ ಭಾರ ಕಡಿಮೆಯಾಗದೆನಗೆ
ಈ ವೃತ್ತಿಯನ್ನು ಕೈಗೆತ್ತಿಕೊಂಡು ಮತ್ತಷ್ಟು ಹಗುರಾಗಿ
ನೀವು ಮೇಲಕ್ಕೇರುತ್ತೀರಿ ದೇಶ ಭಕ್ತರೊಂದಿಗೆ ರಾಷ್ಟ್ರಧ್ವಜದ ಹಾಗೆ
ನಾನು ನಾಚಿ ಕುಸಿಯುತ್ತ ಹೋಗುತ್ತೇನೆ ಧ್ವಜದ ದಾರದ ಹಾಗೆ.

ಬಾಪು; ನಾನಷ್ಟಟ ಸಮಾಜವಾದಿ
ನನ್ನೆದುರಿಗೆ ಬಂದು ಯಾವುದನ್ನೆಣಿಸದೆ ಎಲ್ಲರೂ ಬಾಗುವವರೆ
ಚಪ್ಪಲಿಯ ರಿಪೇರಿಗಾಗಿ
ಚಪ್ಪಲಿಯ ಆಳತೆಯಿಂದ ಯಾರೂ ಹೊರಗುಳಿದಿಲ್ಲ
ಎಲ್ಲರೂ ಜೋಡುಗಳೇ, ಬಿಚ್ಚಿದಾಗ ಮಾತ್ರ ದ್ವೈತ

ಬಾಪು; ರಸ್ತೆಬದಿಗೆ ಬೀಳಲಾರವು ನಿಮ್ಮ ಚಪ್ಪಲಿ ಅನಾಥವಾಗಿ
ತೊಗಲಚೀಲದ ಮನುಜರೂ ಅನಾಥ ಚಪ್ಪಲಿಯೇ ತರತರ
ನಾ ವೈದ್ಯ, ಮನ ಹಿಡಿದು ಹೊಲಿಗೆ ಹಾಕಬಲ್ಲೆ
ಉಳಿ ಕೊಡತಿ ಅಡಿಗೊಂಟಕೆಲ್ಲರೂ ಸಿಕ್ಕಲೇಬೇಕು
ಮೇಲೆ ಹೊಳೆವ ಪಾಲಿಷ್!
ಕೆಲವೊಮ್ಮೆ ಹೆದರಿಸುತ್ತದೆ ನರ ತೊಗಲು ಮರದ ಮೇಲೆ ಕುಳಿತು
ಬೆಳಗು ನನ್ನೆದುರಿಗೆ ಬಂದು, ನಾನೇ ಎದುರಾದೆನೆಂದುಗಿಯುತ್ತದೆ
ತರ್ಕವಿಲ್ಲದ ಬದುಕ ನೀಗಿ ವ್ಯಭಿಚಾರಿಯೂ ಗಳಿಸುತ್ತಾಳೆ
'ಮಾ ನಿಷಾಧ' ಹೇಳಲು ಹೋಗಿ ನಡಗುತ್ತಿದ್ದೇನೆ ಬಾಪು
ನಿಧಾನವಾಗಿ ಬಾಪು ನನ್ನ ಬೆನ್ನ ಸವರುತ್ತ:
'ಅರವಿಂದ ನೀನು ಚಮ್ಮಾರನಲ್ಲ-ಕವಿ' ಎಂದರು.
ಕವಿತನವೇ ಕಸುಬಾಗಿ ಅದೂ ಜಾತಿಯಾಗುತ್ತದೆ ಬಾಪು
ಭಾಷೆಗೂ ಚೂಪಾದ ಹಲ್ಲುಗಳಿವೆ!
ಆಗ ನಾನು 'ಚಮ್ಮಾರ ಕವಿ'ಯೆಂದು ಚಿತ್ರಿತವಾಗುತ್ತೇನೆ

ಧಿಕ್ಕಾರವಿರಲಿ ಕವಿಗೂ ಕವಿತನಕ್ಕೂ
ಮೊಳಕೆಯೊಡೆಯದ ಅನ್ನವಾಗದ ನೆರಳು ನೀರು ಬಟ್ಟೆಯಾಗದ
'ಬಂಜೆ ಕಾವ್ಯ' ಯಾರಿಗೆ ಬೇಕು?

ಬೆಂಕಿ ಎಲ್ಲರನ್ನೂ ಸುಡುತ್ತದೆ ಬಾಪು
ಕೆಲವರು ಆ ಬೆಂಕಿಯನ್ನೆ ಪೆಟ್ಟಿಗೆಯಲ್ಲಿಟ್ಟು ಜೇಬಿಗೇರಿಸಿದ್ದಾರೆ!
ಸಮಯ ಬಂದಾಗ ತೆಗೆಯುತ್ತಾರೆ
ಇನ್ನು ಕೆಲವರು ಮರದೊಳಗಣ ಕಿಚ್ಚಿನಂತೆ ಜೊತೆಗೇ ಇದ್ದಾರೆ.

ನೀವು ನಿಮ್ಮನ್ನು ಗೆಲ್ಲಬಹುದು ಬಾಪು
ನಾನು ನನ್ನನೇ ಗೆಲ್ಲಬಹುದು
ಆದರೆ
ಸೇರಿಸಲಾಗದು ನಿಮ್ಮ ಚಪ್ಪಲಿಯಲಿ
ನನ್ನ ಕಾಲು ಅಂತೆ ನಿಮ್ಮದು
ನನ್ನಳತೆಗೆ ಬಾರವು ನಿಮ್ಮ ಚಪ್ಪಲಿ
ಅಂತೆಯೇ ನನ್ನವು ನಿಮಗೆ
ನಾನು ನಿಮ್ಮ ಗೆಲ್ಲಲಾರೆ
ನೀವು ನನ್ನನೂ ಗೆಲ್ಲಲಾರಿರಿ!

□

# ವರಕೊಡಲು ಬಂದವ

ಯಾರೋ 'ನಮಸ್ಕಾರ' ಎಂದರು
ಮೊಗವೆತ್ತದೆ ಕೈಮಾಡಿ ಕುರ್ಚಿಯ ತೋರಿದೆ,
ಬಂದವ ಕುಳಿತುಕೊಳ್ಳದೇ ನಿಂತೇ ಇದ್ದ,
ಮೊಗವೆತ್ತಿ ಮಸುಕಲಿ ನೋಡಿ ಎಡಗೈಯಿಂದ ಕುರ್ಚಿ ತೋರಿಸಿದೆ
ಮುಳುಗಡೆ ಮಾಡಿದ ಪೆನ್ನು ಬಿಳಿಕಾಗದಕ್ಕಂಟಿದ್ದ ಕೈ ಕಿತ್ತದೆ
ಆತ ಮತ್ತೂ ನಿಂತೇ ಇದ್ದ! ಬರೆಯುವುದ ನಿಲ್ಲಿಸಿ ಹೇಳಿದೆ
'ಎರಡೇ ನಿಮಿಷ ಮುಗ್ಸಿಬಿಡ್ತೇನೆ' ಕುಳಿತುಕೊಳ್ಳಿ'.

ಮೌನ ಮುರಿದ ಆತ, 'ನಾನು ದೇವರೂ' ಎಂದ
ನಾನೂ ಪಕ್ಕಾ ಮೈಸೂರಿನವನಂತೆ 'ಕುಳಿತುಕೊಳ್ಳಿ ದೇವರು' ಎಂದೆ
ಮತ್ತೂ ಆತ 'ನಾನು ದೇವರು' ಎಂದಾಗ
ಆತನ ದನಿ ಬದಲಾಗಿತ್ತು. ಅದೇ ದನಿಯಲಿ ನಾನೂ
'ಆಯ್ತು ಕುಳಿತುಕೊಳ್ಳಿ' ಎಂದೇ, ಆತ ಮತ್ತೂ ನಿಂತೇ ಇದ್ದ
ದನಿ ಬದಲಾಯಿಸಿ 'ನಾನು ನಿಜವಾದ ದೇವರು' ಎಂದ!
'ಸರಿ ಏನಾಗಬೇಕಿತ್ತು?' ಎಂದಾಗ ಹೇಳಿದ
'ನಿನ್ನ ತಪಸ್ಸಿಗೆ ಮೆಚ್ಚಿದ್ದೇನೆ ಬೇಡಿದ ವರ ಕೊಟ್ಟು ಹೋಗುವೆ.

ಆತನ ಬಟ್ಟೆ ಕ್ಯಾಲೆಂಡರಿನ ದೇವರಂತೆಯೂ ಇರಲಿಲ್ಲಾ!
ನನ್ನ ಹಾಗೆಯೂ ಇರಲಿಲ್ಲಾ, ಫುಲ್‌ಸೂಟ್ ಧರಿಸಿದ್ದ
ಕೈಯಲ್ಲಿ ಲೆದರ್ ಬ್ಯಾಗ್, ಎಣ್ಣೆ ಹಚ್ಚಿದ ತಲೆ, ಹೊಳೆವ ಕಪ್ಪು ಬೂಟು
ಕೊರಳಿಗೆ ಚಿತ್ತಾರದ ಟೈ, ಮೇಲು ಮುಖ ಮಾಡಿ ಬಾಚಿದ ಸ್ಟೈಲು
ಪಕ್ಕಾ ಇಪ್ಪತ್ತೊಂದನೆಯ ಶತಮಾನದ ಉದಾರೀಕರಣದ ಪ್ರತಿನಿಧಿ
ಒಮ್ಮೆ ದಿಟ್ಟಿಸಿ 'ಬರಿತಾ ಇದ್ದೇನೆ ತಲೆ ತಿನ್ನಬೇಡಿ' ಎಂದೆ
ದೇವರು ನಿಧಾನವಾಗಿ ಕುರ್ಚಿ ಎಳೆದುಕೊಳ್ಳತೊಡಗಿದ.

'ತಗೋ ಬೇಡಿ ಕುರ್ಚೀನ' ಎಂದೆ
ದೇವರು ಮುಗುಳ್ನಗುತ್ತಾ ಕುಳಿತುಕೊಳ್ಳಲು ಮುಂದಾದ

‘ಅದು ನಿಮಗೋಸ್ಕರ ಇರುವುದಲ್ಲ’ ಎಂದೆ, ಕುಳಿತೇ ಬಿಟ್ಟ.
‘ಆಯ್ತು ಕೊಡುವದೇನಿದೆ ಕೊಟ್ಟು ಹೋಗಿ’ ಎಂದೆ
ಏನು ಬೇಕು ಅಂತಾನೂ ಕೇಳಲಿಲ್ಲ,
ಹೋಗಲಿ, ಒಂದು ಲೋಟ ನೀರೂ ಕೊಡಲಿಲ್ಲ?
ಮುಟ್ಟಿಸಿಕೊಳ್ಳದವನಲಿ ನೀರು ಕೇಳುವ ನೀನು, ನನಗೇನು ಕೊಡಬಲ್ಲೆ?
ಗೊತ್ತಿಲ್ಲವೇ? ‘ತೇನವಿನಾ ತೃಣಮಪಿ ನ ಚಲತಿ’
ನಾ ಕೊಟ್ಟ ನೀರು ನನಗೆ ಕೊಡಲು ಇಷ್ಟು ಸೊಕ್ಕೋ?
ಸೊಕ್ಕಲ್ಲ ಅದು ನೀ ಕಲಿಸಿದ ಪಾಠ!
ನನಗೆ ಗೊತ್ತು ನಿನ್ನ ಕರುಣೆಯಿಲ್ಲದೆ ಹುಲ್ಲುಕಡ್ಡಿಯೂ ಅಲುಗದು
ನನ್ನ ಜನಗಳಿಗೆ ಬೆಂಡಿಗೇರಿ ದತ್ತೂರುಗಳಲ್ಲಿ ಹೇಲು ತಿನ್ನಿಸಿ
ಉಚ್ಚೆ ಕುಡಿಸಿದ್ದು ನಿನ್ನ ಕರುಣೆಯೇ
ಬಹಿಷ್ಕಾರ ಹಾಕಿದ್ದು, ಹೆಣ್ಣು ಬೆತ್ತಲೆ ಮಾಡಿ ಮೆರವಣಿಗೆ ತೆಗೆಸಿದ್ದು....
ಇತಿ ಇತಿ ಎಲ್ಲವೂ ನಿನ್ನ ಕರುಣೆಯಿಂದಲೆ.

ದಯವಿಟ್ಟು ಜಾಗ ಖಾಲಿ ಮಾಡಿ
ದೇವರ ಮುಖ ಹೇಲು ತಿಂದಂತೆ ಆಯಿತು!
ಸಮಜಾಯಿಸಿಕೊಂಡು ಮುಂದಾದ
‘ಅದೇನೂ ಬೇಡ ಮೊದಲು ಇಲ್ಲಿಂದ ಹೊರಡಿ’ ಎಂದೆ
‘ನಾನು ಬಂದದ್ದು ವರ ಕೊಡೋದಕ್ಕೆ’ ಎಂದ
‘ನಿನ್ನಲ್ಲಿ ಏನಿದೆ ಕೊಡೋದಕ್ಕೆ? ಬಟ್ಟೆ ಇಲ್ಲದವರು
ನಿನ್ನ ಬಟ್ಟೆ ಕಳಚಿಕೊಂಡರೆ ನೀನು ಮರಳಿ ಹೋಗುವುದು ಕಷ್ಟವಾದೀತು....
ದಯವಿಟ್ಟು ಹೊರಡಿ’ ಎಂದು ನಮಸ್ಕರಿಸಿದೆ
ಆತ ಕುಳಿತೆ ಇದ್ದ! ನನ್ನ ಮಡದಿ ಕಸಗುಡಿಸುತ್ತಿದ್ದಳು
ನಾನು ‘ಧರಣಿ’ ಎಂದು ಕೂಗಿದೆ
ದೇವರು ಘಟ್ಟನೆ ಮಾಯವಾದ
ಮತ್ತೆ ನಾನು ನನ್ನ ಕಾಯಕದಲಿ ಮುಂದಾದೆ.

## ಯುರೋ

ದೇಶೀ ದಿಗ್ದಿಗಂತ ಅನಂತ
ಇದ್ದ ವಲಸೆ ನೆಲವೆಲ್ಲ ಬಂಗಾರ
ಎಲ್ಲಿದ್ದರೂ ಸರಿ ಯಾರ ಮಗಳಾಗಿದ್ದರೂ ಸರಿ
ಸದಾ ಹಸಿರುಟ್ಟ ಮಣ್ಣುಮಗಳ ಮೌಲ್ಯ

ಪ್ರಿಯ ಡಾಲರ್, ತೆಗೆದುಕೊ ಸರಿಸುವೆ
ನಿನಗಾಗಿ ಎರಡು ಹನಿ ಕಣ್ಣೀರು
ನನಗೆ ಗೊತ್ತು ಒಳಗೆ ಸೇಡಿನ ಹೊಗೆ
ಹೊರಗೆ ಹುಸಿ ನಗೆಯ ಬಗೆ

ಹನ್ನೊಂದು ಕರೆನ್ಸಿ ನೋಟುಗಳ ಕಣ್ಣೀರು
ಹನ್ನೊಂದು ಹೊಳೆಯಾಗಿ ಹರಿದು ಒಂದಾಗಿವೆ
ಹುಣ್ಣಿನ ಮೇಲೆ ಬರೆ ಎಳೆಯಬಹುದು
ಗೋರಿಯ ಮೇಲೊಂದು ಹೂ ಅರಳಿಸಿ

ನಡೆಯಲಿದೆ ಮಾರುಕಟ್ಟೆಯಲಿ ಟಗರು ಕಾಳಗ
ಅಳೆಯಬಹುದಾನೆ ಉದ್ದಗಲ ಭಾರ ಕೆಲ ಇರುವೆಗಳೇ
ದಂಡಯಾತ್ರೆಯಲಿ ಆಗಲೂಬಹುದು ಒಪ್ಪಂದ
ದೊಡ್ಡಣ್ಣನ ಬಲ ಅಳೆಯುವುದಷ್ಟು ಸುಲಭ?

ರಾತ್ರಿಯಲಿ ಕರಿಬೆಕ್ಕ ಓಡಿಸಿ ಹಗಲಲಿ ಬಿಳಿಬೆಕ್ಕು ಹಿಡಿವ ತತ್ವ
ಗೊತ್ತಿದ್ದದ್ದೇ ಸಿದ್ಧ ಅಸ್ತ್ರ, ಬೆಲ್ಲವಿಟ್ಟು ನೊಣ ಕರೆವ ತಂತ್ರ
ಟೊಂಕ ಕಟ್ಟುವ ಮುನ್ನ ಕೀಲು ಬಿಚ್ಚದಂತೆ ಮಾಡು ತಾಲೀಮು
ಜೇಡನ ಬಲೆಯ ಭೀತಿ ನುಗ್ಗುವುದು ಅನಿವಾರ್ಯದ ನೀತಿ.

ಕಾಯಬೇಕು ನೋಡಬೇಕು ಏಕಮುಖಿ ಪ್ರವಾಹದಲಿ
ಯುರೋ ರಾಜ್ಯದ ಸಾಮ್ರಾಟನಾರು ಮುಖಿ ಯಾರದು?

ಬಹುತ್ವಕೆ ಏಕತ್ವದ ಪ್ರಶ್ನೆ, ಏಕತ್ವಕೆ ಬಹುತ್ವದ ಪ್ರಶ್ನೆ
ಬೇಕು ಬಹುತ್ವದಲ್ಲಿ ಏಕತ್ವ, ತೃತೀಯ ಜಗತ್ತಿನ ನಾಮಕೆ

ಪ್ರಪಂಚಕೆ ಪಂಚಾಂಗ ಬರೆದ ಪಿತಾಮಹನೇ
ನಿನಗಿದೋ ನನ್ನ ಕೋಟಿ ಕೋಟಿ ಸಮಾಜ ನಮನ
ಬೇಕು ಪ್ರಪಂಚಕ್ಕೊಂದೇ ಮನುಜ ಧರ್ಮ
ಒಂದೇ ನೋಟು ಅನಂತಾನಂತ ನೋಟ!

## ಈರುಳ್ಳಿ ಮತ್ತು ಪೊಕ್ರಾನ್

ಮಾರುಕಟ್ಟೆಯಲಿ ದ್ರೌಪದಿಯ ಸೀರೆ ಸೆಳೆದಂತೆ
ಈರುಳ್ಳಿಯ ಪೊರೆ ಉಚ್ಚುತ್ತಿದ್ದಾರೆ
ಪ್ರಪಂಚದ ರಾಜ ದರ್ಬಾರಿನಲಿ
ಅಯ್ಯೋ, ಬತ್ತಲಾಗುತ್ತಿದೆ ಇಂಡಿಯಾ
ಸೀರೆ ಬಿಚ್ಚಿದರೂ ಲಂಗ ಉಚ್ಚಿದರೂ
'Q' ಹೋಗಿ 'A' ಆದರೂ ಬಿಡರು
ತಮ್ಮ ಮರ್ಯಾದೆಗೆ ಹೆದರದ ನಾಯಕರು

ನಿನ್ನೆ, ಈರುಳ್ಳಿ ಕೊಳ್ಳದಿದ್ದರೂ ಕಣ್ಣಲಿ ನೀರು
ಇಂದು, ತುಪ್ಪದ ಬೆಲೆ ಕೊಟ್ಟರೂ ಉಪ್ಪು ಸಿಗದು
ನಾಳೆ ಗಾಳಿಯ ಸರದಿ
ಈರುಳ್ಳಿಯಲಿ ಸ್ಫೋಟವಾದ ಪೊಕ್ರಾನ್
ಮರಳನು ಉಪ್ಪಾಗಿ ಪರಿವರ್ತಿಸಬಹುದೇ
ಬುದ್ಧನಕ್ಕ, ಬುದ್ಧ ವಿರುದ್ಧ ಯುದ್ಧ ಕಂಡು.

ಕಾಳ ಸಂತೆಯಲಿ ಇಂಡಿಯಾನ್ ಪಳಗಿದ್ದಾನೆ
ದೇಶದ್ರೋಹಿ ಪಕ್ಕದ ಮೆಯಲ್ಲಿದ್ದರೂ ಗುರುತಿಸಲಾಗದೋ
ನೀರಲಿ ಉಪ್ಪು ಕರಗಿದಂತೆ ಕರಗಿದ್ದಾನೆ
ಅದಕೆ ಆಯೋಡಿನ್ ಆಗಿ ಸೇರಿದ್ದಾನೆಂದು
ದೇಶಿಪರದೇಶಿಗನೇ ಬೋಧಿಸುತ್ತಿದ್ದಾನೆ
ನಮ್ಮ ಜೇಬಿಗೆ ಕೈ ಹಾಕುತ್ತ.

ದೆಹಲಿಯ ದರ್ಬಾರಿಗೆ ಈರುಳ್ಳಿಯ ಹೆದರಿಕೆ
ಸುದ್ದಿ ಪತ್ರಿಕೆ ತುಂಬ ಪೊಕ್ರಾನ್ ಮಾತು
ಗೋದಾಮು ಖಾಲಿ ಆದಂತೆ ಖಾಲಿ ಆಗುತ್ತವೆ ಕುರ್ಚಿ
ಗಾಳಿಯಲಿ ಉಪ್ಪು, ಈರುಳ್ಳಿಯಲಿ ದ್ರವಸೇರಿಸಬಹುದು
ರಾಜಕಾರಣದ ಪವಾಡ ಮಾತಿನಂತೆ

ಇತ್ತೀಚೆಗೆ ಕುರ್ಚಿಯ ಮೂಗಿನ ಹೊಳ್ಳೆಗಳು
ಅಗತ್ಯಕ್ಕಿಂತ ಹೆಚ್ಚು ಹಿಗ್ಗುತ್ತಿವೆ
ವಿದೇಶಿ ಸೆಂಟಿನ ವಾಸನೆಗೆ
ಸಾಲ ಮಾಡಿ ತುಪ್ಪ ಮೂಸುವ ಹೆಗ್ಗಣಗಳು

ಗೋದಾಮು ಬರಿದಾದರೂ ಘೋಷಣೆ
ಗೋದಾಮು ತುಂಬಿ ಚೀಲ ಹೊರಬಿದ್ದಿವೆ
ಮುಂದಿನ ಬಾಗಿಲಿಗೇ ದೊಡ್ಡ ಬೀಗ
ಹೊರಗೆ ಕಲ್ಲು ಬಡಿದು ಸಾರಿಸಿದರೆ ಗುದ್ದು ಹೋದೀತೆ?

## ಕುಂಕುಮ ಕಾವ್ಯ

ಆಲದ ಮರಕೊಮ್ಮೆ ಕಳ್ಳಿಯ ಗಿಡಕೊಮ್ಮೆ
ಹೊಳೆ ಹಳ್ಳ ಗಂಗೆಯರು ಗುಂಡುಕಲ್ಲು ಲಿಂಗುಗಳು
ಸುತ್ತಿ ಸಣ್ಣಾಗಿ ಮುಳುಗಿ ಹಣ್ಣಾಗಿ ಉರುಳಿ ಬೆಂಡಾಗಿ
ಚೇಳು ನುಂಗಿ ಹುಲಿ ಹೆತ್ತು
ಸೂಜಿಯಲಿ ದಾರ ಪೋಣಿಸುತ್ತ ದಾರವಾದವಳು.

ಪಗಡಿಯ ಕೌದಿಯಲ್ಲಿ ದೀಪಗಳು ಬೆಳಗಿ
ಮನೆ ಹೊರಗೆ ಒಳಗೆ
ಕೇರಿ ಆಚೆಗೆ ಊರಾಚೆಗೆ ಮಾಡು ಮಾಡಲಿ ದೀಪಾವಳಿ
ನರೆತ ಕೂದಲಿಗೆ ಕೋಲು ಆಧಾರ
ಕನಕವಡಿ ಗೂಡು ಬಿಡುವ ಹೊತ್ತು
ನೂಲು ನೆಯ್ದ ಚಿತ್ತ
ಬೆನ್ನ ಹಿಂದೆ ಚಿತ್ರ
ಹರಕೆ ಹಾದಿಯ ಬಣ್ಣ, ಕಣ್ಣ ಮುಂದೆ.

ಧರೆಯಿಂದಲೇ ಎದ್ದ ಹಸಿರ ಕಟ್ಟಿಗೆಯ ಹೊರೆ
ಧರೆಗೆ ಬಿದ್ದಿತು ಬಾಡಿ ಬರಲಿಹುದೇ ಹುಳುಗಳತೊರೆ
ಗುರುತಿಸಲಾಗದ ಕಸರು ಹೆಸರಿಸಲಾಗದ ಉಸುರು
ಅಂತರಾಳದಲಿ ದ್ವಂದ್ವ ಅರ್ಥವಾಗದ ದಗ್ದ
ಗಂಡೋ ಹೆಣ್ಣೊ ಹೆಸರಿಸಲಾಗದ ಹೆಜ್ಜೆ
ಅರ್ಧನಾರೀಶ್ವರಿಯೂ ವರ್ಜ್ಯ

ಜೋತಾಡುತ್ತಿದೆ ಗೊಟಕ್ಕೆ ಕುಲಾಯಿ
ರಾಶಿಯಾದ ಹೊಲದಮುಖ ಸುಟ್ಟ ಬದನೆಕಾಯಿ
ಕುದಿಸಿದ ಕುರಿ ಮಿದಿಳು ಮನಸ್ಸು
ಅಡಿಕೆಯಷ್ಟೇ ನರೆಗೂದಲಿನ ತುರುಬು
ನಾಯಿಯಂತೆ ಜೋತಾಡುವ ಮೊಲೆಗಳು

ಬರದಿಂದ ಬಿರುಕು ಬಿಟ್ಟು ಸುಕ್ಕುಗಟ್ಟಿದ ಮುಖ
ಅದರಲೇ ಉಕ್ಕಿ ಬರುವುದು ಜೀವನಾನುಭವದ ಸುಖ
ಎಂಬಲ ಗಡಿಗೆ ನಿತ್ಯ ವಿನೂತನ!

ಮೋಡ ಕಟ್ಟುತ್ತವೆ ಮಳೆ ಬಂದಂತೆ
ದನದ ಸೆಗಣಿಯಲಿ ನೆಲ್ಲಕ್ಕಿ ಸಾರಿಸಿದಂತೆ
ಸಂಗ್ರಹಾಲಯದಲ್ಲಿ ಪುರಾತನ ವಸ್ತುವಾಗುವ ಬಯಕೆ
ಸಾವಿಗೆ ಸವಾಲಾಗದೆ ಮಣ್ಣಾಗುವ ಮುನ್ನ ಅರಗಿನರಮನೆಯ ಬಯಕೆ
ಕಟ್ಟುತ್ತವೆ ಲ್ಯಾವಿಯ ದಾರ ಬಿಗಿಯಾಗಿ ಒಂದೊಂದೆ ಪದಕ.

ಪ್ರಿಯದರ್ಶಿನಿಯ ಶವ ಚಿತೆ ಏರುವ ಹೊತ್ತು
ಕಪ್ಪು ಬೂಟಿನ ಸದ್ದು, ಬಂದೂಕುಗಳ ಸಾಲು
ವರ್ಣಧ್ವಜದ ಹಾರಾಟ ಅರ್ಧದಲ್ಲೇ
ಟಿ. ವಿ. ರೇಡಿಯೋಗಳ ಪುಂಗಿನಾದ

'ನನ್ನ ಚಟ್ಟದ ದಿನ ಹೀಂಗಿರಬೇಕು
ತೋಪು ತೂಪಾಕಿ ಗುಂಡ್ಹಾರ್ಸಬೇಕು ಮಗನೇ'

ಮೋಡ ಕಟ್ಟಿ ಮಳೆ ಬಾರದೆ ಹೋದರೂ
ರಂಡಿಹುಣ್ಣಿಮೆ ಮರೆತು ಭರತ ಹುಣ್ಣಿಮೆಗೆ ಮೀಸಲು ಹಿಡಿಯುವುದು:
'ನಾ ಸತ್ತಾಗ ಪ್ರಿಜ್‌ನ್ಯಾಗಿಡು ನನಗ
ನೆಪ್ಪಾದಾಗ ತಗತಗದು ನೋಡು ಹೊರಗ'
ಸತ್ತರೂ ಪತ್ರಿಕೆಯಲಿ ಅಚ್ಚಾಗದ ಜೀವಕ್ಕೆ
ಬೆ
ಟ್ಟ
ದಾ
ಸೆ
ಕಿರಿದಾಸೆ ಅವಳಿಗೆ
ಹಿಮಾಲಯವೇ ಕುಟ್ಟಿ ಪುಡಿಮಾಡುವ
ಸಮುದ್ರದ ನೀರನೇ ಕುಡಿದು ಬರಿದು ಮಾಡುವ
ನೀಗದ ಸ್ಪರ್ಧೆ ನನಗೆ.

ನನ್ನವ್ವಗೂ ಪ್ರಿಯದರ್ಶಿನಿಗೂ
ಆಡು ಐರಾವತದಷ್ಟೇ ಅಂತರ ಹೆಸರಿಗೆ

ಸಿಂಧೂರವನ್ನಳಿಸಿಕೊಂಡ ದೇಶದೊಡಲ ಅವ್ವೆಯರು
ಅಕ್ಕರದಲಿ ಸಿಕ್ಕ ಪೊನ್ನಾಂಬರಕೆ ಅಕ್ಕರದ ಸಂಮ್ಮಾನ
ಮಣ್ಣಲೇ ಸಿಕ್ಕ ಕಪ್ಪೊನ್ನಿಗೆ ಮಣ್ಮ ಸಂಮ್ಮಾನ

ದಿನ ಭಯದ ಗೋರಿ
ಭೂಗೋಳ ಬೆಂಕಿಯುಂಡೆಯ ಮೇಲೆ
ಆಸೆ ಪೆಟ್ರೋಲಿನೋಕುಳಿಯಾಟ
ಗೋರಿ ಸೇರದ ಪಯಣ
ಮರಣವಾಗುವ ಮುನ್ನವೇ ಹಗಣ
ಮಾರಿಗೆ ಬಲಿ ಏರಿದಂತೆ ಚರಣ
ಹರಣ ಹಾರಿದಾಗಲೇ ಮರಣ.

ಏಸೊಂದು ಮುಖ ಸಾವಿಗೆ
ದೀಪದ ನೆರಳಲೇ ಅಡಗಿರುವ ನೋವಿಗೆ
ದ್ವೀಪ ಮಾಡುವುದು ಸಾವು
ಹೋದಾಗಲೊಮ್ಮೆ ಬಂದಾಗಲೊಮ್ಮೆ ಕೊರೆತದ ನಗುವು
ಏಸು ಬಾರಿ ಬೇಡಿದ್ದು ದೇವಗೆ
ಕಾಯ ಕಪ್ಪುರದೊಂದಿಗೆ ದೀವಿಗೆ
ಹೊತ್ತದ್ದೇ ಹೊತ್ತದ್ದು ಹರಕೆ ಆಗರದ ಚೆಲುವು
ಬೇಡಿದ್ದು ಬರಿ ನಾಲಿಗೆಯಲೇ ಸಾವು.

ಸಾಯಲೀಕೆ ಸಾಯಳು
ಸಾವನಳಿಸಿ ಉಳಿದು ಬರುವಳು
ಸ್ಮಶಾನ ಸಂತೆಯಲೂ
ಮಕ್ಕಳ ಹೇಸಿಕೆ ಅಂಗೈಯಲಿ ಬಳಿದು
ಕನ್ನಡಿಯ ಮಾಡಿದವಳು
ತಾನೇ ಮಗುವಾಗಿ ಈಜುವಳು
ಹರಿದ ರಗಟೆಯಲಿ ಹಳದಿ ಚೆಂಬಳಕಲಿ
ಚಿಂತೆಗೆರೆಗಳು ಬೆವೆತು ಗಾಳಿಬೀಸುತ್ತ ಸರಿದಾಗ ಹಿಂದು ಮುಂದು
ಬಿರುದು ಅರಳು ಮರುಳಿನದು
ಹೇಸಿಕೆಯನೇ ಬಾಯೊಳಗಿಟ್ಟುಕೊಂಬ ಹಸುಕುಂಕುಮೆ
ವಾಸನೆಗೂ ಹೇಸಿಕೊಂಬುವ ಕನ್ನೆಕುಂಕುಮೆ
ಸುಗಂಧ ಪರಿಮಳವೆಂದುಕೊಂಬುವ ಮುಪ್ಪುಕುಂಕುಮೆ

ಬಣ್ಣ ತಿಳಿಯದ ದೇವರೊಂದು
ಬಣ್ಣವಾಗಿಸಿದ ದೇವರೊಂದು
ಗಾಣ ತಿರುಗಿದಾಗಲೇ ಎಣ್ಣೆ
ಮೇಣವುರಿದಾಗಲೇ ಬೆಳಕು.

ಈಗ
ಗೂಟಕ್ಕೆ ಜೋತಾಡುವ ಕುಲಾಯಿ
ಸುಟ್ಟು ಸೊರಗಿದ ರಾಶಿ ಬದನೆಕಾಯಿ
ನೆರೆತಕೂದಲಿನ ತುರುಬು ಅಡಿಕೆ
ಈಗೋ ಆಗೋ ಎನುವ ಸೀಳು ಮಡಿಕೆ
ಮನಸು ಕುದಿಸಿದ ಮಿದಿಳು
ಜೋತಾಡುವ ನಾಯಿ ಮೊಲೆಗಳು
ನಿತ್ಯ ನೂತನದ ಅಡಿಗೆಗೆ
ದಿನವೂ ಹೊಸತಾಗುವ ಹಳೆಯ ಎಂಬಲದ ಗಡಿಗೆ.

ಕಾಡಜೇನುಂಡು ಬೆಳೆದ ಕರಡಿಗೆ
ಪ್ರೀತಿಸಲಾರರು ಯಾರು?
ಮಧುತುಂಬಿ ಚಿಲ್ಲುವ ಹುಟ್ಟಿನ ಗಡಿಗೆ
ಬಗೆದು ನೋಡಲಾರರು ಯಾರು?
ಅಡಕಲೇರಿದ ಗಡಿಗೆಯಲೇ ಗಡಿಬಿಡಿ
ಮಣ್ಣಿನ ಮಡಿಕೆಯ ಮೇಲೆ
ಕಂಚು ತಾಮ್ರ ಹಿತ್ತಾಳೆಯ ಗಡಿಗೆ
ಮನೆಯ ಮೂಲೆಯಲೋ
ಬಡಿಗೆಯಿಂದ ಹಿಡಿದು ಭರ್ಜಿ ಹಾರೆ
ಅವುಗಳಿಗೂ ಕಾದಿದೆ ಕಟ್ಟೆಟ್ಟ ಬುತ್ತಿ
ಮರೆಸಿದೆ ಹುಳಿಯುಪ್ಪಿನ ಹೊಳವು
ಅವ್ವೆಗೆ ವಾರದ ಸಂತೆಯ ಬುಲಾವೆಂಬ ಥಳಪು.

ಸದಾ ಬಗಲಲ್ಲಿ ಗಂಟು
ಕೈಯಲ್ಲಿ ಚೊಂಬು ತಾಟು
ನಡುಬೀದಿಯಲ್ಲೇ ಬಿಚ್ಚುವ ಹಂಬಲ ಹರದಾರಿ
ತನ್ನ ಚಿಂತೆ ತನಗಿಲ್ಲ
ಯಾರ ಪಕ್ಷಕ್ಕೂ ಸಲ್ಲ

ಭೂದೇವಿಗೆ ತಂಗಲು ಸ್ಥಳವಿಲ್ಲ
ಎಲ್ಲವನೂ ಎಲ್ಲರನೂ ಪ್ರೀತಿಸುತ್ತಲೇ ದ್ವೇಷಿಸುವ ಸೊಲ್ಲ.

ಕೌದಿಯಾಗದೆ ಉಳಿದ ಚಿಂದಿಗಳು ಬಗಲ ಗಂಟಲ್ಲಿ
ಮಾಸದ ಬಣ್ಣ, ಆಕಾರವಿರದ ಆಕಾರ
ದಿಬ್ಬಣದಿ ಅವ್ವೆ ತೊಟ್ಟ ಸೀರೆ
ಅಪ್ಪ ಅಪರೂಪಕೆ ನಿಲುಗಚ್ಚೆ ಹಾಕಿ ತೊಡುವ ಧೋತಿ
ಮಗನಿಗೆ ಸೂಲದಹಲ್ಲು ಬಂದಾಗ ಅಣ್ಣತಂದ ಮಖಮಲ್ಲದಂಗಿ
ಮಗಳ ಮದುವೆಯಲಿ, ಅಳಿಯನ ಅರಿಸಿಣದಿ ಉಳಿದ ಹಳದಿ
ಅವರ ಕ್ವಾಟಿಯ ರುಮಾಲು
ಒಂದೇ ಎರಡೇ ಬೆಳೆದ ಇರುವೆಗಳ ಸಾಲು
ಹರಿದು ಹೋದಂತೆ ನೀರು
ಅಣೆಕಟ್ಟೆಗೆ ಹರಿದು ಬರಲಿ ಮತ್ತೆ ಹೊಸ ತಿಳಿನೀರು
ಮೊಮ್ಮಗಳ ಹೊಸಂಗಿಯ ಚಿಂದಿ
ಕಟ್ಟಿಡುವ ಬಯಕೆ ಮತ್ತದರ ಹಿಂದೆ.

ಬದುಕೇ ಮತ್ತೊಮ್ಮೆ ಉಣಬೇಕೆಂಬ ಬಯಕೆ
ಕೋಳಿಯ ಬಾಯಿ, ತಿಂದಂತೆಲ್ಲ ಹೊರಗೆ
ಕಳ್ಳು ಪಚ್ಚಿ ಕರ್ಚಿ ನಾಲಿಗೆ ಕಿವಿ ಪುಪ್ಪುಸ ಪಾಳಿ ಚಾಕಣ
ರುಚಿ ಬಾರದು ಯಾವುದರಲ್ಲಡಗಿದೆ ಜಿಹ್ವೆಯ ಲಾಲಾರಸ
ಹಿಂಡಲಾಗದು ಪ್ಲಾಟಿನಚೂರು, ಹೀರಲಾಗದು ಮೂಳೆ
ಬೋನದಲಿ ಹುಳಿ, ಕಟ್ಟಿನಾಂಬ್ರದಲಿ ಕಾರ, ಯಾವುದೂ ಇಲ್ಲ
ಮಸಿಯ ಗೋಡೆಯ ಮೇಲೆ ಇದ್ದಲಿಯ ಬರಹ
ನುಸಿ ಹೋದರೂ ಹಲ್ಲಿಗೆ ಬೇಟೆ ಸಿಗದಂತೆ
ಜೀವ ಭಾವಗಳೆರಡು ದೇಹದಲಿದ್ದು
ದೇಹ ಭೌತಗಳೆರಡು ಭೂಮಿಯ ಮೇಲಿದ್ದು
ಇದ್ದೂ ಇಲ್ಲದಂತೆ ಗೈರು ಹಾಜರಿ
ಎಲ್ಲ ಕನಸೆಂಬ ಕನ್ನಡಿಯ ಮಾದರಿ.

ಮೂರು ಸುರುಳಿಯ ಉರುಳು
ಗಾಳಿಗೆ ಹಾರುವ ಬೆಂಡು ಸರಳು
ಮೂಡುವುದು ನೀರ ಮೇಲೆ ನೆರಳು
ಗಾಳಿ ನಿಂತು ನೆಲಕೆ ಬಿದ್ದಾಗಲೇ ಹೊರಳು
ನೀರಬದಿಯಲೇ ಇದ್ದಂತೆ ಮರಳು
ಆಗಬಹುದೇ ಮತ್ತೆ ಮಣ್ಣ ಅರಳು.

ಮೋಡದಷ್ಟೇ ದಟ್ಟ ಕಪ್ಪು ಕೇಶರಾಶಿ
ಅದೇ ರಕ್ಕಸಿಯ ಬಲ
ರಾಜಕುಮಾರಿಯ ಛಲ
ಎಲ್ಲವೂ ಕಳೆದಿರುಳಿನ ಒಡೆದ ಕನ್ನಡಿ
ತಣ್ಣಗಾಗುತ್ತಿದ್ದ ಕನ್ನಡಿಯಲೂ ಚಂದ್ರ
ನಂಗುತ್ತಲಿದ್ದವು ಉಬ್ಬು ತಗ್ಗು
ಶೂನ್ಯವಾಗುತ್ತಿತ್ತು ನೆಲ.

ಲಾಕಿಯ ನಡುವೆ ಮೈಯಾರಿದ ಹರಿಗೆಮನೆ
ಮತ್ತದೇ ಬೆಳಗಿನ ಗಾನ
ಇರುಳ ತೆರೆಯಲಿ ಹರಡುವುದು ಮೌನ
ಗುಳದಾಳಿ ನೆಲಕಿಳಿವ ಹತ್ತಿರದ ನಿಶಾನೆ
ನಡುಕಡಲಲಿ ಬಿದ್ದಾಗ ದಡಹಿಡಿಯಲು ಕೈ ಚಾಚುವ ಹಂಬಲ
ಯಾವ ಕೈ ಬರುವವು ರಕ್ಷಣೆಗೆ
ನಾ ಮುಳುಗುವ ಮುನ್ನವೇ ತಾ ಮುಳುಗಿ ಹೋದ.

ಬೆಕ್ಕು ಕಣ್ಣಂತೆ ಹಸಿರ ತುಂಬುವ
ಮಿಣುಕು ಬೆಳಕಿನ ರೆಕ್ಕೆ ಜೀವ
ಸಾಲು ದೀವಟಿಗೆಯ ಮೆರವಣಿಗೆ
ಮಬ್ಬುಗಣ್ಣಲಿ ಬೊಂಬೆಗಳ ಜಿಗಿದಾಟ
ಹಲಿಗೆ ದುಡಿ ದಮ್ಮಡಿ ತೆಂಬರೆ ಬಡಿತ
ಹೌದು ಅದೇ ದನಿ ಅದೇ ನಡಿಗೆ
ಅದೇ ಕೈಗಳ ಚಲನವಲನ.

ದಶರಥನ ಕಂದ
ರಾವಣನ ಕೊಂದ
ಸೀತೆಯನು ತಂದ!
ಬಂದ ಎನಕಂದ
ಕತ್ತಲನೇ ಕೊಂದ
ಬೆಳಕ ರಾಶಿಯ ತಂದ;
ಎಂದ್ಹಾಡಿದಂತೆ ಬೆಳಗು ಬೀಸುವಕಲ್ಲು.

ನಿನ್ನೆ ದಿನವೇ ಆತ ಸತ್ತಿದ್ದಾನೆ
ಆತನ ಕೈಢಮರು ಒಡೆದಿದೆ ನೆಲಕೆ ಬಿದ್ದು

ಬೆಂಕಿ ಬೆವರು ಉಪ್ಪು ನೀರಾಗಿ ಹರಿದು
ಬಹುಸಂತಾನದ ಕಲ್ಲು ಮರ ದೇವತೆಗಳೆದ್ದು
ತೇಲಿದವು ಕಪ್ಪು ಕಡಲಲಿ.

ಎನ್ನೆದೆಯ ಅಂಗಳದಿ ಈಜಿ ಬಂದನು ಕಂದ
ಕನಸ ರಾಶಿಯ ನಡುವೆ ಶಕುನ ಹುಸಿಯೆಂದ
ಕೈಗೆ ಕೈ ನೀಡುತಿರೆ
ಹಿಡಿಹಿಡಿದು ಜಾರುತಿರೆ
ಸ್ಪರ್ಶ ಸ್ಪರ್ಶದಿ ಉರುಳಿದ ಹೊತ್ತು
ಆಯ್ದುಕೊಳ್ಳುವ ಮುನ್ನವೇ ಒಡೆದ ಮುತ್ತು
ಅವ್ವ ಎತ್ತಿ ಆಡಿಸಿದ ಕಂದ
ಹೊತ್ತು ವಯ್ಯಲು ಬಂದ
ಎತ್ತಬಲ್ಲನೇ ತಾಯಿಯ
ಜೀವ ಸಂಕುಲದ ಮಾಯೆಯ.

ದೇಹಾತ್ಮವೆಲ್ಲ ಸುಟ್ಟು
ಕುಳ್ಳಗ್ಗಿಯ ಬೆಂಕಿ ಬೂದಿಯಾಗಿ
ಹೊಗೆ ಸ್ವರ್ಗದೋಲೆ
ಮಡಿಕೆ ದುಂಡಗೆ ನೋಡು ದ್ಯಾವಾಪೃಥ್ವಿ.

ಸಾವಿನಲ್ಲೂ ಸಂರಂಭ
ಹಲಿಗೆಯ ನಾದಕ್ಕೂ ಹೆಜ್ಜೆ
ಹೆಜ್ಜೆ ಹೆಜ್ಜೆಗೂ ಮಿಡಿತ ಕಡಿತ ಬಡಿತ
ಮಾರ್ಗದರ್ಶನದ ಶೋಧಕ್ಕೆ
ಕಾಂಚಾಣ ಅಡಗಿಸಿ ಆತ್ಮದ ಹುಡುಕಾಟ
ಪಥ ಅಗಸಕ್ಕೇರಿದಂತೆ ಕೆಳಕ್ಕೆ ಬಿದ್ದ ಸವಕಲುನಾಣ್ಯ
ಸಿಂಧೂರ ನೊಸಲಿಗೆ
ಗೂಟಕ್ಕೆ ಬಡಿದ ಹೆಣ
ಊದಿ ಹಾರುತ್ತಿದ್ದರೂ ಒಡೆದು ವಸರುತ್ತಿದ್ದರೂ
ಗಂಧ ಗಂಧಕ ಊದುಕಡ್ಡಿಯ ಪರಿಮಳ.

ಹಾದಿ ಬೀದಿಯ ತುಳಿದು
ವಿಮಾನಕೆ ಹೆಗಲು ಕೊಡಲು ಪೊರೆ ಬಿಚ್ಚಿದಂತೆ ವೇಷ
ನೀರಿಲ್ಲದಿದ್ದರೂ ಹಾಡಿ ಅಳುವವರಿಗೊಂದು ಅವಕಾಶ

ಎಲೆಗಳಲೇ ರಾಜರಾಣಿಯರ ಬಿಚ್ಚು ಸಂದೇಶ
ಕತ್ತಲು ಹಗಲಾಗಿಸಲು ಭಕ್ತಿಯ ಸುವರ್ಣ ಪ್ರವೇಶ.

ವಿಸರ್ಜನೆಗೆ ನೂರಾರುದಾರಿ
ಕಾಲು ನೋವಿನ ನೆಪ ಬೀದಿ
ಸತ್ತ ಶಾಂತಿಗೆ ಎತ್ತುವ ಆರತಿಯೋ, ಮಂಗಳಾರತಿಯೋ
ಅತ್ತು ಸತ್ತಬಾಯಿಗೆ ಮತ್ತೆ ತುಪ್ಪ ಸುರಿಯುವ ಮಾರ್ಗ
ಎಲ್ಲ ಕತ್ತಲೊಳಗಿನ ಹುಡುಕಾಟ
ಅರಿತರೂ ಅರ್ಥೈಸಲು ತಿಣುಕಾಟ
ಮತ್ತೆ ಹುಟ್ಟುವುದಕ್ಕೆ ಮುಪ್ಪು
ಗೊಬ್ಬರವಾಗುವುದು ಸೊಪ್ಪು
ಬಾಡು ಕಡಿದು ಡೊಳ್ಳು ಬಿಗಿದು
ಬಾರಕೋಲು ಮಿಣಿಹಗ್ಗ ಜೀವ ಪಡೆದು
ಫಸಲಿದ್ದರೆ ಫಡುಮನೆಗೆ ದಂಟು ಹಿತ್ತಲಿಗೆ
ಹೊಟ್ಟು ಗೋದಲಿಗೆ, ಚಿಪ್ಪಾಟಿ ಒಲೆ ಪುಟುವಿಗೆ.

ಸಾಯುವತನಕ ಟೊಳ್ಳಾದ ಬದುಕು
ಸತ್ತನಂತರ ಊದುಕಡ್ಡಿಯ ಬೆಳಕು
ಹೊರಲಾಗದ ಮಣಭಾರಕ್ಕೂ
ಬಿತ್ತರಿಸಲಾಗದ ಕರಿಮುಖಕ್ಕೊ
ದಕ್ಕುವುದು ಧನ್ಯತೆಯ ಇಮ್ಮು
ಅಬ್ಬಬ್ಬಾ ಇದು ನಮ್ಮೆದೆಯ ಹಮ್ಮು.

ಸಾವು ಎಳೆಯುವುದು ಸಂದಿಗೆ ಆಸೆ ಜಗ್ಗುವುದು ಬಯಲಿಗೆ
ಬಯಕೆ ತೋರಣ ಬಾಗಿಲಿಗೆ, ಉರುಳು ತೋರಣ ಕೊರಳಿಗೆ
ಹೋಗುವಳೇ ಮಣ್ಣಲಿ ಮಣ್ಣಾಗಿ
ನಿಲುವಳೇ ಜಗಲಿ ಮೇಲಿನ ದೇವರಾಗಿ
ಹುಟ್ಟುವಳೇ ಮಗನ ಹೊಟ್ಟೆಯಲಿ ಮೊಮ್ಮಗಳಾಗಿ
ಬರುವಳೋ ಬರದೆ ಹೋಗುವಳೋ ಮಾಗಿ.

ಮೂಡುವಳು ಬೆಳ್ಳಿ ಚುಕ್ಕೆ ಮೂಡುವ ಮುನ್ನ
ಮೂಡಲಿಂದ ಕುಂಕುಮೆ
ಜೀವವಿಲ್ಲದ ಜೀವಕೆ ಜೀವ ತುಂಬುವಳು ಸಾವ ಮುನ್ನ
ಜೀವಸಂಕುಲದ ಭೂರಮೆ.

❑

# ಸಿಲಿಕಾನ್ ವ್ಯಾಲಿ

೧

ಒಳ್ಳೆಯ ದೇವರೆ ಬೀಳುತಿರೆ ಎದ್ದೆದ್ದು
ಕಳ್ಳಿ ದೇವರು ಬೀಗುತಿದೆ ತಾನೇ ದೇವರೆಂದು
ರಾಜ್ಯಧಾನಿಯ ಕೀಲುಕೀಲಿಗೂ ಸಿಲಿಕಾನ್ ಶಿಷ್ಯರ ದಂಡು
ನಾವೆ ಗುರುವೆಂದು ಗೀಳಿಡುವ ಗಿಳಿಪಾಠದ ಹಿಂಡು
ಪ್ರತಿಭಾಪಲಾಯನದಿ ಸೋತು ತವರು ಸೇರಿದ ಗಂಡು.

ಗುಲಗಂಜಿ ತೂಕ ಸಿಲಿಕಾನ್ ಹುಟ್ಟಿಸಿದ ಸಿಟಿ
ಜಪಿಸುತ್ತಿದೆ ಕ್ಯೂ ನಿಂತು ಭೂಪಟದಲಿ ಸಂಖ್ಯೆ
ತಿಮ್ಮಪ್ಪನ ಮುಡಿ-ಮರಳು ಗರ್ಭಗುಡಿಯ ಮೊಳಕೆ
ಆದಲು ಬದಲು ಕಂಚಿಕದಲು ಇವರು ಬಿಟ್ಟವರ್‍ಯಾರು?
ಪರದೇಶಿ ಮಾಲು ದೇಶಿ ಸೀಲು-ಮೋಗಲಿ ಹರದಾರಿ
ಯಾರದೋ ಗಂಟಿಗೆ ಯಾರದೊ ಯಾಜಮಾನ್ಯ.

ಉದುರುತ್ತವೆ ವಸಂತ ಋತುವಿನಲ್ಲೇ
ವೀಸಾಗಳು ಮಾಮರದ ಚಿಗುರೆಲೆಯಂತೆ ಕಂಗೊಳಿಸಿ
"೦" ಯನ್ನೆ ಆಗೆದು ತೆಗೆದ ಆಯೋಧ್ಯ ಶೋಧಕ
ಇಂದು ಹಿಂದುಮುಂದು ಅಂಕಿ ಹಚ್ಚಲಾಗದ ತ್ರಿಶಂಕು
ಇಲ್ಲಿ ಉಂಡು ಅಲ್ಲಿ ನೀರುಗಿಯಲು ಬಿಕರಿಯಾದ
ಬಿಲಿಯನ್ ಅಂಕಿಗೆ ಸೋತು ಸ್ತಬ್ಧ.

ಅಲ್ಲಿಂದಲೆ ಆರಂಭ ದೇಶಿ ಸಂಖ್ಯೆ!
ಭಾರತೀಯ ಲೆಕ್ಕಕ್ಕೆ ಧಾರಾಳಿ ಅಂಕಕ್ಕೆ ಕೃಪಣ.

೨

ಅದೃಶ್ಯ ಲೋಕದ ಜೇಡಜಾಲದ ದರ್ಬಾರಲಿ
ದಾರವಿಲ್ಲದೆ ಕಟ್ಟುಕೊಯ್ಯುವ ಚಕ್ರವ್ಯೂಹ

ಸಂಧಾನವಿಲ್ಲದ ಯುದ್ಧ ರಕ್ತಪಾತವಿಲ್ಲದ ಸೋಲು
ಆದರೂ ಬೀಳುತ್ತವೆ ಮಾರುಕಟ್ಟೆಯಲಿ ಜೀವಂತ ಹೆಣಗಳು
ಉಕ್ಕಿನ ಕೋಟೆಯ ಸಾಮ್ರಾಜ್ಯದ ದೊರೆ
ಮೈಕ್ರೋಸಾಫ್ಟ್ ಸ್ವೆಟರ್ ಹಾಕಿಯೂ ನಡುಗಿದ ಗದಗದ
ನೆಟ್‌ಸ್ಕೇಪ್ ಜಾವ ನೇವಿಗೇಟರ್ ಚಳಿಗೆ
ಸಾಮ್ರಾಜ್ಯವೆ ಇಬ್ಭಾಗವಾಗುವ ಕಾಲ
ರಾಜಧಾನಿಯೇ ನೀನಾವ ಇಲಿಬಾಲ?

ಕೈಯಾಗ ಕೊಟ್ಟು ಖಾಲಿ ತಾಲಿ
ಕರದಾರ ಸಿಲಿಕಾನ್‌ನ ವ್ಯಾಲಿ!

೩

ಅಲ್ಲಿ ಮಂತ್ರಸಮುದ್ರ ಆದರೆ ಕುಡಿಯಲು ನೀರಿಲ್ಲ
ಕುಡಿವ ನೀರಿಗಿಲ್ಲಿ ಬಿಸಲೇರಿ ಬಯಕೆ
ಒಂದೇ ಗುಟುಕಲಿ ಕಡಲನೆ ಕುಡಿವ ದಾಹ
ನಕ್ಷತ್ರಗಳನ್ನೆಲ್ಲ ತಂದು ಚಿಗಿಸುವಾಸೆ ಹಸಿದ ಹೊಟ್ಟೆಗಳ ಮೇಲೆ
ಸಾಲಕೆ ಸಂಭ್ರಮಿಸಿ ದೇಶ ಅಡವಿಟ್ಟು ಕೀಲು ಮುರಿಸಿಕೊಳ್ಳುವಾಸೆ
ತಿರುಕರ ಸಾಮ್ರಾಜ್ಯದ ಡೊಳ್ಳುಹೊಟ್ಟೆ ಅರಸರು
ಖಾಲಿಗಡಿಗೆಯಲಿ ಬಿರುಗೈಯಾಡಿಸುವ ಕಾಲಜ್ಞಾನಿಗಳು
ಕನ್ನಡಿಯ ನೆರಳಲಿ ಗಂಗೆಯನೆ ಎಳೆತರುವ ಭಗೀರಥ ಯತ್ನ.
ಭರತ ಸಾಲದ ಬಂಡ್ವಾಳಗಾರ ಬಡ್ಡಿರಹಿತ ಜೀತಗಾರ
ದೇಶಿ ಭಾಷೆ ಹೊಸಕಿದೆ ನಿವೃತ್ತಿ ನೌಕರನಿಗೆ
ನಿರುದ್ಯೋಗಿ ಬೆಕ್ಕಿನ ಸಂತಾನ ಬಯಲಿಗೆ
ಹಗಲು ಹನ್ನೆರಡು ತಾಸು ದೊಡ್ಡಣ್ಣನ ದಡ್ಡಿಯಲಿ
ರಾತ್ರಿ ಹನ್ನೆರಡು ತಾಸು ಕಾರ್ಡ್‌ಬೋರ್ಡಿನ ಸಿಟಿಯಲಿ
ಆಂಗ್ಲ ಭಾಷೆಗೆ ಬಂಡ್ವಾಳ 'ಚೀಪ್‌ಲೇಬರ್' ಬಿರುದು
ದೇಶಿ ಭಾಷೆಯ ಬೆವರು ಡಾಲರಿಗೆ ಪಾವರು!

೪

ಎಂಥ ಕ್ರಾಂತಿ ಅದು!
ರಾಮರಾಜ್ಯದಲಿ ಹನ್ನೆರಡು ವರ್ಷಕೊಮ್ಮೆ ಉದುರುವ ಮಾವು
ಲವಕುಶರಿಂದು ಉದುರಿಸಿ ಬಿಡುತ್ತಿದ್ದಾರೆ ಮೂರೆ ದಿನಗಳಲಿ!

ಅವಸರದ ಡಾಟಾ ಮಾಡಿದ್ದೆ ಅಧಿಕ ಟಾಟಾ
ವಂಶವಾಹಿ ಒಂದು ಕಣ ಬೀಳುವುದು ದೇಶದ ಹೆಣ
ಪ್ರವಾಹದಲಿ ತೇಲಿಹೋಗುವವು ಸಾರ್ವಜನಿಕರ ತಲೆಗಳು
ತಂದೆ ಮಕ್ಕಳ ಯುದ್ಧ ಕಿಲುಬು ಕಾಸಿನ ಕೀಲುಕುದುರೆಗೆ.

ನಗರದ ನಾಡಿಗೆ ಸಂಜೀವಿನಿ
ಹಾಡಿಯ ಮಾಡಿಗೆ ಹಮಾಲಿ ಪೆಟ್ಟಿಗೆ
ಇದು ಮುಟ್ಟಲು ಹೆದರುವುದು ರೈತನ ನೊಗ
ಚಮ್ಮಾರನ ಉಳಿ ಕಮ್ಮಾರನ ತಿದಿ ಕುಂಬಾರನ ತಿಗರಿ
ನೇಕಾರನ ಪಾರುಮಣೆ ತುಲಾಭಾರಕೆ ಯಾವುದೂ ಸಾಲದು
ಎಷ್ಟು ಭಾರ ಈ ಕುಲಗಂಜಿ ತೂಕದ ಸಿಲಿಕಾನ್-ಇಂಡಿಯಾಕ್ಕೆ!
ಪೂರ್ವಿಕರಿಗೂ ಪಡ್ಡೆಹೈದರಿಗೂ ಇರುವಷ್ಟೇ ಅಂತರ

ಗಡಿಯೊಳಗಿನ ಗಸ್ತಿಗೆ ಬಾಬಾ ಇರಲಿ
ಗಡಿಯಾಚೆಯ ಶಿಸ್ತಿಗೆ ತಾತಾ ಕಾಯಲಿ.

ಸಾಧನೆ ಮರೀಚಿಕೆ!
ಹಿಟ್ಟಿಲ್ಲದ ಹೊಟ್ಟೆಗೆ ಡೊಳ್ಳು ಹೊಟ್ಟೆಯ ಕಾಣಿಕೆ
ಗುಡಿಸಲ ತುಂಬ ಇಲಿ ಬಿಲ ಜಗಲಿ ಮೇಲೆ ಗಣ(ನಾಯ)ಕ
ತೂಕಡಿಸುತ್ತಿವೆ ಮಹಲಲಿ ಕಣ್ಣುಮುಚ್ಚಾಲೆಯ ವಿದ್ಯುತ್ತಿನಾಟದಲಿ
ನಗಾರಿ ಹೊಟ್ಟೆಯಲ್ಲಿ ಕಳ್ಳಸಂತೆಯ ಸುಳ್ಳು ಸಂಗತಿಯ ಕಣಿವೆಗಳು
ಅರಿಯದಂತೆ ಗೆದ್ದಲು ತಿನ್ನುತ್ತಿವೆ ಮಿದುಳು.

೫

ತಿಪ್ಪೆಯಲ್ಲಿರುವುದೆಲ್ಲ ಗೊಬ್ಬರವಲ್ಲ
ತಲೆಯುರುಳಿದರು ಪಾಲಿಥಿನ್ ಕರಗುವುದಿಲ್ಲ
ಸಿಕ್ಕಲುಬಹುದು ಕೆಲವೊಮ್ಮೆ ಹೊನ್ನಿನದಿರು
ತೆಗೆದರುಂಟು ಅದರಲ್ಲಿ ಕದಿರು
ಇಲ್ಲದಿರೆ ಮರಳು ತಿರುಪತಿಗಿತ್ತ ಮಂಡೆಮುಡಿ.

ಸಿಲಿಕಾನ್ ವ್ಯಾಲಿ ಭೋಗ್ಯ
ಹೋಬಳಿಗೆ ತಾಲಿ ಭಾಗ್ಯ.

□

# ಯವ್ವ

೧

ಮನದ ಮೊಟ್ಟೆಯ ಮ್ಯಾಲಿ ಗಿಣಿಕುಂತು ಕೇಳ್ಯಾವು
ಯಾರಿಗೆ ಯಾರು ಸಂತಾನ?
ಯಾರಿಗೆ ಯಾರು ತಾಯಿ?
ನನಗೆ ನೀ ತಾಯೊ, ನಿನಗೆ ನಾ ತಾಯೋ?
ನಿನಗೆ ನೀನೇ ತಾಯೊ, ನನಗೆ ನಾನೇ ತಾಯೋ?
ನಿನ್ನಷ್ಟೇ ನಾನೂ ನೂತನ ನನ್ನಷ್ಟೇ ನೀನೂ ಪುರಾತನ!

ನೀ ಹೆತ್ತವಳು ನೀ ಹೊತ್ತವಳು
ನೀ ಸಾಯಹೊಡೆವವಳು ಮತ್ತೆ ಪಡೆವವಳು
ಮೈತುಂಬ ತಾಯ್‌ತನ ನಿನಗೆ
ಮೈಯೇ ಮಾಯಿತನ ನಿನಗೆ
ಚಂಡಿ ಚಾಮುಂಡಿ ನಾ
ಕಾಳಿ ಮಹಾಂಕಾಳಿ ನೀ
ರಕ್ತಬೀಜಾಸುರರ ಪಿಂಡಾಣುವಿನಲೆ ನೆಕ್ಕಿದೆ
ತಾಯ್‌ತನದಿ ತಾಯ್‌ತನವನಿಕ್ಕಿದೆ.

ತನ್ನ ತತ್ತಿಯ ತಾ ನೊಣೆವ ತಾಯಿ
ಮೊಟ್ಟೆ ಮರಿಮಾಡಿ ಗುಟುಕಿಕ್ಕಿ ಬೆಳೆಸೋಡಿಸುವ ತಾಯಿ
ಹೆರವರ ಗೂಡಲಿ ಮೊಟ್ಟೆಯನಿಕ್ಕಿ ಹಾರುವ ಕಳ್ಳ ತಾಯಿ
ಹೊತ್ತು ಹೆತ್ತು ನೊಲೆಯುಣಿಸಿ ಮತ್ತದಕ್ಕೆ ಮೈನೆರೆವ ತಾಯಿ
ಹೆರುವ ಆಸೆಗೆ ಸಾವ ಕರೆದು ಹೆರುತಲೆ ಸುಖಿಸಾವನಪ್ಪುವ ತಾಯಿ
ಮುದಿಕಾಲಕೆ ನೀ ಸಾಕಬೇಕೆನುವ ನರತಾಯಿ
ಇದೆಲ್ಲವೂ ನೀನಾದೊಡೆ ತಾಯ್
ಇಲ್ಲದಿರ್ದೊಡೆ ನಾನೇ ತಾಯ್!

ಕವಡಿಯ ಕೊಳ್ಳಾಗ, ಭಂಡಾರ ಮೈ ಮ್ಯಾಗ
ಗೆಜ್ಜೆಲ್ಲಾ ಕಾಲಾಗ, ಜಗ ನೋಡು ತಲಿ ಮ್ಯಾಗ
ಹಗಲ ಕತ್ತಲ ಮಾಡಿ, ಅಮವಾಸ್ಯೆ ಹುಣ್ಣಿಮೆ ಮಾಡಿ
ಬರಡು ಹೈನಾಗಿಸಿ, ಕೊರಡು ಹಸಿರಾಗಿಸಿ
ಕುಣದಾಳೆ ಕುಣಿಸ್ಯಾಳೆ ಮೈಮನವಾಗ
ಕಾಮಾಲೆ ಎಳದಾಳೆ ಸೆಳದಾಳೆ ಕಣ್ಣಾಗ.

ಈ ಧರತಿ ಮಾಡ್ಯಾಳು ಭರತಿ
ಹಕ್ಕಿ-ಪಕ್ಕಿ ಇಲಿ-ಹುಲಿ, ಕ್ರಿಮಿ-ಕೀಟ
ರೇವತಿ ಸಂತತಿ ಅದರಾಗೆಲ್ಲಿಂದ ಬಂತೋ ದೇವತಿ
ಈ ಪತಿತ ತ್ರಿಶಂಕು ಸರತಿ
ಸೋಲಿಲ್ಲ ಗೆಲುವಿಲ್ಲ ಬರಿ ಭರತಿ
ನನ ಮುಂದೆ ನೀನು ನಿನ ಹಿಂದೆ ನಾನು
ನನ ಹಿಂದೆ ನೀನು ನಿನ ಮುಂದೆ ನಾನು
ಮರಳಿ ನೋಡಿದರೆ; ಬರಿ ಗೋಳ!
ನನ ಹಿಂದೂ ನಾನೇ, ನನ ಮುಂದೂ ನಾನೇ!!

೨

ಮನದ ಮೊಟ್ಟೆಯ ಮ್ಯಾಲಿ ಗಿಣ ಕುಂತು ಕೇಳ್ಯಾವು
ಯಾರಿಗೆ ಯಾರು ಸಂತಾನ? ಯಾರಿಗೆ ಯಾರು ತಾಯಿ?

ಬೆದೆಬಿದ್ದ ಎಮ್ಮೆಗೆ ತೇವದ ಚಿಂತೆ
ಬಿದ್ದೆದ್ದು ದೇವಿಯ ಕೋಣ ಹುಡುಕಿದ್ದು ಯಾರ್‍ಯಾರು?
ಎಮ್ಮೆ ಕೋಣಕೂ ಪೌಲೆ-ಗಾವುಂಡರ ಜಾತಿ
ಊರೂರು ತಿರುಗಿ ನೋಡಕ್ಕ ಸೊರಗಿ
ದಿಂಡರಕಿ ಉರುಳು ದೇವರ ಮುಂದೆ
ಕೃತಕ ಗರ್ಭದ ಸೂಜಿಯ ಮಾವ
ಕುಂಡದೊಳಗಿನ 'ಬೋನ್‌ಸಾಯಿ' ಜೀವ

ಹೌಹೌದು, ಹೌಹೌದು,
ಈದಾಗ ಮಕ್ಕಳ ಬಾಯಿಯ ಹೊಲೆದು
ತಿರುಗಿ ಮಣ್ಣಿನ ಗಡಿಗ್ಯಾಗ ಮೀಸಲು ಹಿಡಿದು
ತಾಯಿ ಗದ್ಯಾನೆಲ್ಲ ನಿನ್ನ ಪಾದಕ್ಕ ಕಡದು
ಉಧೋ ಉಧೋ ಉಧೋ ಉಧೋ

ತನ್ನತಾ ಕಳಕೊಂಡು ಜಾತ್ರಿಯ ಮಾಡ್ತಾಳು
ಅವಳ ರಂಡಿ ಹುಣ್ಣಿಮೆಗೆ ಗಿಂಪದ್ದಾಲು ಎರದಾಳು
ಮಕ್ಕಳ ಬಾಯಿಗೆ ಮಣ್‌ಹಾಕಿ ಹೊಲದಾಳು
ಹುಟ್ಟಿದ ಮಣಕಕ್ಕ ಕೆಚ್ಚಲವ ಬೇಡ್ತಾಳು
ಕುಂಕುಮ ಕಳದಾಗ ಮುಳ್ಳುಬಾಗಿಲಕ ಬಡದು ಮರೆತಾಳು

ಮಣ್ಣು ಹೆಣ್ಣಾಗಿ, ಮಳೆಯು ಗಂಡಾಗಿ
ಉಸುರ್ತಾವು ಜೀವ ದೇಶಕೋಶ ಛಪ್ಪನ್ನೈವತ್ತಾರಾಗಿ
ಗಿಡ ಬಳ್ಳಿ ಮರ ತೂಗಿ, ಅಕ್ಕಿ ಗೋದಿ ಜೋಳ ರಾಗಿ
ಮೀನಕ್ಕ ಮೀನ ನುಂಗಿ, ನನ್ನನ್ನೇ ನಾ ನುಂಗಿ.

೩

ಮನದ ಮೊಟ್ಟೆಯ ಮ್ಯಾಲಿ ಗಿಣಿಕುಂತು ಕೇಳ್ತಾವು
ಯಾರಿಗೆ ಯಾರು ಸಂತಾನ? ಯಾರಿಗೆ ಯಾರು ತಾಯಿ?

ಅಮ್ಮನ ಮ್ಯಾಲಿ ಮುನಿಸು, ನನ್ನ ಮ್ಯಾಲಿ ಮನಸು
ತವರು ಮನಿ ಬಂಧನದ ಕನಸು ಬಯಲಾಗ
ಹ್ಯಾಗಿದ್ದಿ ನೀನು ಶತಶತಮಾನ ಬಂಧನದಾಗ
ನನ್ನ ಬಂಧನದೊಳಗಿಟ್ಟು ನಿನ್ನ ಬಿಡಿಸಲು ಹೋಗಿ
ಹಣ್ಣಿಗೆ ಕಲ್‌ಬದ್ದು ನೆಲದಲ್ಲಿ ಮಣ್ಣಾಗಿ
ಕಣ್ಣಾನ ನೀರು ಬಾಯಾಗ ಇಳದೋಗಿ
ಬಾಣಕ್ಕ ಬಿದ್ದಾಂಗ ಬಿಕ್ಕಿ ಬಿಕ್ಕಿ ಅತ್ತಳು

'ಶಿವ ಶಿವ ಅಂದಾರ ಶಿವಯಾರಿಗೊಳ್ಳ್ಯಾಂವ
ಶಿವ ನನ್ನ ಪಾಲಿಗೆ ದುಸಮಾನ-
ಶಿವ ನನ್ನ ಪಾಲಿಗೆ ಮಸುಮಾನನಾದರ-ನನ್ನ
ಶಿವದೇನೊಯ್ದನೋ ಬಿಸಿಲಿಗೆ'

ಎಂದು ಪಾಡಿ ಚಟಕಿಯ ಮುರದಾಳೋ ಬಯಲಾಗ
ಬೆನ್ನೊಡ್ಡಿ ಬದುಕ್ಯಾಳೋ ನಿಗಿನಿಗಿ ಬಿಸಲಾಗ.

ಬಂಧನದಿ ಹೊರ ಬಂದಿ ನನಗಾಗಿ ಏನು ತಂದಿ?
ನಿನಗೆ ನೀ ತಂದಿ ಮರುಜನ್ಮ ಹೆರವರಿಗೆ ಏನುತಂದಿ?

ಕೆಚ್ಚಲಕ ಹುಣ್ಣಾಗಿ ಮೈಯೆಲ್ಲ ಹಣ್ಣಾಗಿ
ಹರಕಿಯ ಮ್ಯಾಲಹರಕಿ ಸರತಿಯ ಬೆಳದಂಗ
ನೀರಿನ ಮ್ಯಾಲಿ ಶಾಸ್ತ್ರವ ಬರೆದಂಗ
ನನ್ನ ನಿನ್ನ ಬದುಕು ಒಂದಾಗಿ ಹೋದಾಂಗ
ನನ ಹಿಂದೂ ನಾನೆ, ನನ್ನ ಮುಂದು ನಾನೇ
ಬರಿ ಗೋಳ ಗೋಳೆ ಗೋಳು.

೪

ಮನದ ಮೊಟ್ಟೆಯ ಮ್ಯಾಲ ಗಿಣಿ ಕುಂತು ಕೇಳ್ಯಾವ್ರ
ಯಾರಿಗೆ ಯಾರು ಸಂತಾನ? ಯಾರಿಗೆ ಯಾರ ತಾಯಿ?

ಜೊನ್ನ ಕುಡಿದವರು ಹೆಬ್ಬೆರಳ, ಹಾಲ ಕುಡಿದವರು ತೋರ್ಬೆರಳ
ರಕ್ತ ಕುಡಿದವರು ನಡುಬೆರಳ, ನೋವ್ವ ಕುಡಿದವರು ನಿಡುಬೆರಳ
ಕೀವು ಕುಡಿದವರು ಕಿರುಬೆರಳ, ಕರುಳ ಬಳ್ಳಿ ಹರದು ನಿರಾಳ
ನಿನ್ನುಡಿಯೊಳಗಿನ ಅನುಭವದಾಗರದ ಹಾಡು ಅದೆಷ್ಟು ಕರಾಳ
ನಿನ್ನುಡಿಯಾಗ ಹುಟ್ಟುತಲಿ ಕಟ್ಟೆಟ್ಟ ಹಳಸಿದ ಬುತ್ತಿ
ಕೆಲಸ ಮೇಲೋಗರ ಮಾಡಿ ಕಣ್ಣು ಮುಚ್ಚಾಲೆ ಯುಗಾದಿಯಲಿ
ಶುಭ್ರ ಸ್ವಚ್ಛ ಧುಮುಕುವ ನೀರು ಹರಿವನಕ
ನಿಂತಾಗ ಮತ್ತದೆ ಹಳೆಯರಾಗದ ಹಾಡು

೫

ಮನದ ಮೊಟ್ಟೆಯ ಮ್ಯಾಲಿ ಗಿಣಿ ಕುಂತು ಕೇಳ್ಯಾವು
ಯಾರಿಗೆ ಯಾರು ಸಂತಾನ? ಯಾರಿಗೆ ಯಾರ ತಾಯಿ?

ನನ್ನ ಮರೆತಿರುವ ದೇವರು ನನಗ್ಯಾಕೆ ಬೇಕು?
ನನ್ನ ಹರಸದ ದೇವರು ನನಗ್ಯಾಕೆ ಬೇಕು?
ನನ್ನ ಮುಳುಗಿಸೊ ದೇವರು ನನಗೀಗ ಸಾಕು
ನನ್ನತನವಿರಗೊಡದ ದೇವರ ಕತ್ತು ಹಿಸಕು

ನೆಲ ದೇವರು ಸೂಳೆ ಮೂರ್ತಿ ದೇವರೂ ಸೂಳೆ
ನಾನಿವರಿಗೇಕೆ ತಕ್ಕಡಿಯ ಮುಳ್ಳಾಗ ಬೇಕು?
ತಮ್ಮನೇ ಅಳೆಯಲಾಗದವರು ಬೇರೆಯವರಿಗೆ ಅಳತೆಗೋಲೆ?

ಸಾರುತಿದೆ ನಿನ್ನೊಳಗಿನ ನಮ್ಮ ಇತಿಹಾಸ ಬೆಳಗಿನೆದುರೆ
ತಮ್ಮ ತಾ ಅಳೆದವರು ಇತಿಹಾಸವನೂ ಅಳೆವರು
ತಮ್ಮ ತಾ ಅರಿಯದವರು ಅಳಿದುಳಿಯದೆ ಹೋಗುವರು

ಮಣ್ಣಗೋಡೆಗೆ ಕಣ್ಣು ಕನಸ ಮೂಡಿ
ಕತ್ತಲೊಂದಿಗೆ ಬಣ್ಣಗಳು ಮಾತಾಡಿ
ಬೆಳಕಿನೆಳೆ ಹಿಡಿದು ಬೆಳಕ ಸಾಗರ ಕೂಡಿ
ನೀರುಗಿಯಾಗಿ ಮತ್ತೆ ನೆಲ ಕೂಡಿ
ಮಣಕದ ಹೊಟ್ಟೆ ನೋಡೆಷ್ಟು ಚಂದ
ದೇವರ ಮಳೆಗಿಂತ ಸೂಜಿಯ ಮೆಳೆ ಅಂದ
ಸೂಚಿಯೊಳಗ ಸೂಜಿಯ ನಂಟು
ಹ್ಯಾಗಿದು ಬೆಳೆಯಿತು ಜೀವದ ಗಂಟು
ನಾಡಲ್ಲಿ ಕಾಡಾಗಿ ಕಂಡ್ಯಾವು ಪ್ರಶ್ನೆ
ಪ್ರಶ್ನೆಗೂ ಪ್ರಶ್ನೆ ಪ್ರತಿ ಪ್ರಶ್ನೆ ಅಗ್ಯಾವು
ಬಿಡಿಸದ ನಂಟಿನ ವರ್ಣಮಯ ಚಿತ್ರ
ಇರಬೇಕು ಇದರಾಗೂ ದೇವರ ಮಿತ್ರ

ಚಿತ್ತರದ ಹೊಟ್ಟೆಯೊಡೆದು ಕಂಡ ಕಚ್ಚಿದಾಗ
ಹುಲ್ಲು ಕರುವಿನ ಹಂಗು ಕೆಚ್ಚಲಿಂಬು ಕೈಯಾಗ
ಹಾಲ ಹರಿದಾವ ಎದೆಯಿಂದ ಸಂದು ಸಂದಿಗೆ ಸರಳ
ಮತ್ತೆ ಹಾಡಿ ಬಡಿದಾಳೊ, ಕಲ್ಲದೇವರ ಮೊಗಕೆ ಕರುರುಳ
ಉಗಾದಾಳು ಮಾರಿಗಿ ಮುರದಾಳ ಚಟಕಿ
ತೂರ್‍ಯಾಳೊ ಮಣ್ಣು ಆಗ್ಯಾಳ ಸುಣ್ಣದುಡಕಿ.

೬

ಮನದ ಮೊಟ್ಟೆಯ ಮ್ಯಾಲ ಗಿಣಿ ಕುಂತು ಕೇಳ್ಯಾವು
ಯಾರಿಗೆ ಯಾರು ಸಂತಾನ? ಯಾರಿಗೆ ಯಾರ ತಾಯಿ?

ಅಕ್ಷರ ಕಲಿಯದ ಅವ್ವ ಬೆಕ್ಕಸ ಬೆರಗು ಮಾಡ್ಯಾಳವ್ವ
ಬೆಕ್ಕಿನ ತಲಿ ಮ್ಯಾಲಿ ದೀಪವನಿಟ್ಟು ಪಗಡಿಯನಾಡ್ಯಾಳವ್ವ
ಮಕ್ಕಳಿಲ್ಲದಾದಾಗ, ಮಗ ದೂರ ಹೋದಾಗ
ಮಾವ ಮಣ್ಣಾದಾಗ, ಅತ್ತಿ ಶೆಟವ್ಯಾದಾಗ
ಧರ್ಮದ ಮಾತೆಂದು ಕರ್ಮದ ಕತಿಯೆಂದು

ಗಿರಿಗಿರಿ ತಿರುಗ್ಯಾಳು ಗಾಣಾಗಿ
ಬುಗುರಿಯಗತ್ತಿಗೂ ಮಿಗಿಲಾಗಿ
ಸುಣ್ಣ ಕರಿಕಲ್ಲಾದುದ ನೆನೆ ನೆನೆದು ಹೊಸಬಾಳ
ದುರಗ ಮುರಗಿಯ ಚಾಟಿ ಚಾಳಿಗೆ ಬರ್ಮಾಳ
ತಗ್ಗ ತಗದು ಹೂಳ್ಯಾಳ ವೇದ ಶಾಸ್ತ್ರ ಸ್ಮೃತಿ ಪುರಾಣ
ಜೇನುಹುಟ್ಟ ಸೋಸಿ ಹಾಲಾಹಲ ಕುಡಿಸಿ ಮಾಡ್ಯಾಳು ಕಬ್ಬಿಣ
ಜಾಲಿಯ ಮರ ಬಡಿದಾಳೊ ಕಾಲುಂಗುರ ಮಾಡ್ಯಾಳು
ಗಿಲಗಂಚಿ ಆಡಿಸಿ ತಿನಿಸಿ ಆನಿ ತಾನಾಗ್ಯಾಳು
ದೇವರ ಮುಚ್ಚ್ಯಾಳು ಬದುಕನ್ನ ಕಚ್ಚ್ಯಾಳು
ನೆಲಕೆ ಹಣೆ ಹಚ್ಚ್ಯಾಳು ತನ್ನ ತಾ ನೆಚ್ಚ್ಯಾಳು
ಮಾತು ಬಂದರೆ ಹೇಳಿ ಬರದಿದ್ದರೆ ಮೂಗಾಗಿ
ನನ್ನವ್ವಳ ಕನಸ ಕೊಳಗಂತೈತಿ ನಸುಗಾಗಿ
ಆ ಲೋಕ ಈ ಲೋಕ ಮೂಲೋಕ ಎಂಬುದು
ಅಂಗಳ ಮನೆ ಹಿತ್ತಲು ತ್ರಿಕೋನ ಲೋಕಲೋಕಾಯನೆಂಬುದು.

ಶಿವದಾರ ಜನಿವಾರ ಉಡುದಾರ ಹೊಸದಾಳ ರಾತ್ರ್ಯಾಗ
ಒಬ್ಬೊಬರಿಗಿ ಕರದ ಹಾಕ್ಯಾಳ ಹಗಲಾಗ
ಗೋವು ಕುದಿರೆ ಪಾರಿವಾಳ ಪವಿತ್ರವೆಂದ್ಹೇಳಿ
ಬಿಗದಾಳ ಧರ್ಮದ ಗೂಟಕ್ಕೆ 'ಕಾಯಿರಿ' ಅಂತೇಳಿ
ದಾರಗಳು ಬಿಕ್ಯಾವು ಎಳೆಗಳು ಸೊಕ್ಯಾವು
ಪಾವಿತ್ರ್ಯ ಕಳೆದ್ಹೋಗಿ ಕಾಯುವರ ಕೊಂದಾವು
ಭಾಗಾದಿ ಆಗ್ಯಾವು ಭೂಮ್ಯಾಗ
ದೇವರು ಹೊಕ್ಯಾವು ಕಲ್ಯಾಗ
ಧರ್ಮಕ್ಕ ಕರ್ಮ ಕಟ್ಟಿ ನಿಲಸ್ಯಾವು
ಎದುರೆದುರು ಹುಣ್ಣಿಮಿ ಅಮವಾಸಿ ಕಾಯ್ದಾವು.

ತಿರಿದುಣ್ಣೊ ಮನುಜರಲಿ ದೇವರನು ಕಂಡಾಳು
ತನ್ನ ತುತ್ತು ನೀಡಿ ತಾನುಗಳ ನುಂಗ್ಯಾಳು
ಗುಡಿಗಳ ಬಾಗಿಲಿಗಿ ಕಲ್ಲುಗಳ ಎರಿಸ್ಯಾಳು
ನಸುಕು ಬಲದಿಂದೆದ್ದು ಅಂಗೈಯ ನೆನೆಯೊಳು
ನಾಯಿಕಜ್ಜಿ ಬೆಕ್ಕಿನುಣುಕು ಕೋಳಿಹೇನ ತೆಗೆದೊಳು
ಹಕ್ಕಿ ಹುಳ ಶುಕ ಪಿಕ ಬೇರೆನದೆ ಮಕ್ಕಳೆ ಎಂದೋಳು
ದೇಶವನರಿಯದೆ ದೇಶೀಯಾಗಿದ್ದವಳು
ಬಹುಭಾಷಿಯಾಗಿದ್ದು ತನ್ನತಾನರಿವವಳು.

ಕೆಂಪುಮುಸಡಿಯ ನೋಡಿ ಫಕ್ಕನೆ ನಕ್ಕವಳು
ಟಿಂವಕ್ಕಿನಡಗಿಯ ತೋರಿಸಿ ಕಣ್ಣಚಿವುಟಿದೋಳು
ಧ್ವಜವ ಕಂಡಾಗ ಜೈಎನುತ ಮನದಾಗ ಹರಸ್ಯಾಳು
ಸುಣ್ಣದ ಗೋಡೆಗೆ ಬೆರಳ ಹಚ್ಚುತ ಮಣ್ಣನ್ನೆ ತೂರ್ಯಾಳು.

೭

ಮನದ ಮೊಟ್ಟೆಯ ಮ್ಯಾಲ ಗಿಣಿ ಕುಂತು ಕೇಳ್ಯಾವೆ
ಯಾರಿಗೆ ಯಾರು ಸಂತಾನ? ಯಾರಿಗೆ ಯಾರ ತಾಯಿ?

ದೇವಿ ತನ್ನೊಳಗೊ, ತಾನು ದೇವಿಯೊಳಗೋ
ದೇವಿಯೇ ಬೇರೆ, ನಾನೇ ಬೇರೆಂಬ ಬನ್ನ
ಕಾಡುಣಕಿ ಕಾಡಿ ಕಡಲಾಗಿ ಕರಿಯುತಿಹುದೋ
ಕಲ್ಲಿಗೂ ಕಡೆಗೋಲ್ಹಾಕಿ ಕಟ್ಟ ಕಡಿಗ್ಯಾಗಲು ಹೆಣಗುತಿಹಳೊ
ಬೀಸುಕಲ್ಲಿನ ಗೂಟ ಗಟ್ಟಿ ಮಾಡಿ
ಕಾಲದೊಂದಿಗೆ ಕಾದು ತಿರುಗಿಸುತ ಬೀಸ್ಯಾಳೊ
ಎರಡಾಗಿ ಒಡದಾಳು ಬೀಜ
ಬೇಕಾದ್ದ ಹಿಟ್ಟು ನುಚ್ಚು ಕಚ್ಚ ಹಾಕ್ಯಾಳೊ.

ಪಳಗಿಸಬೇಕು ಕುದುರೆ ಕುದುರೆಯನೇರುವರು
ತಂತ್ರ, ಬಲ್ಲವರು ಮಂತ್ರವನು ಹೇಳುವರು
ತಾಡವೋಲೆಯೊಳಗೆ ತವರ ಕಾಣುವರು
ಕಾಲಕಟ್ಟೆ ಧರೆಯನು ಮೆಟ್ಟಿ ಬದುಕುವರು

ಮಣ್ಣಿನೊಂದಿಗೆ ಕುಸ್ತಿ, ಕರಿಕಿಯೊಂದಿಗೆ ಜಿದ್ದು
ಹೆಳ್ಳಿಯಲಿ ಸಿಕ್ಕ ಹುಳುವಿಗೂ ಬದುಕ ಯೋಗ
ದಾರಿಯುದ್ದಕ್ಕೂ ತತ್ರಾಣಿ ತಂಪು ತೇವ
ಬೋಳುಹಣೆಯಾದರೂ ಧರ್ಮದ ಹಣೆಗೆ ತಿಲಕ
ಕೊಟ್ಟವರ ಹರಕೆ ಕಲ್ಲಿಯಲಿ ತುಂಬಿ
ಕಲ್ಲಿ ಕಲ್ಲಿಗೂ ತತ್ತು ಹಾಕಿ ಹೇರಿ ಹೂಡ್ಯಾಳ ಚಕ್ಕಡಿ
ಕಟ್ಟೆ ಹೇಳ್ಯಾಳು ಗಿಣಿಮಾತ, ಹೆಕ್ಕಿ ತಗದಾಳು ಚಿಲಕ
ಕಬಡ್ಡಿ ಹುಲಿ-ಕುರಿ ಘಗಡೆಯಾಟದ ತತ್ತ್ವ!

೬

ಮನದ ಮೊಟ್ಟೆಯ ಮ್ಯಾಲ ಗಿಣಿ ಕುಂತು ಕೇಳ್ಯಾವು
ಯಾರಿಗೆ ಯಾರು ಸಂತಾನ? ಯಾರಿಗೆ ಯಾರ ತಾಯಿ?

ಕೋಳಿ ಕುರಿಯೆನದೆ ಮೀನು ದನವೆನದೆ
ಸಾಕಿ ಸಲಹಿದೋಳು ಸತ್ತಾಗ ಅತ್ತವಳು
ಗುಡ್ಡದಲಿ ಗೋಕಲ್ಲ ನೆಡಿಸಿ
ಕಾಲುದಾರಿಯಲಿ ಅರವಟ್ಟಿಗೆಯನಿಡಿಸಿ
ನೆಲುವಲಿ ನುಚ್ಚನಿಟ್ಟು ನೀರ ಹಣಿಸಿ
ಮೊಟ್ಟೆಗಳನಿಟ್ಟು ಮರಿ ಮಾಡಿಸಿ
ದೊಂಪ ಕಟ್ಟಿ ಬಳ್ಳಿಯ ಬೆಳೆಸಿ
ಕರುವಿಗೆ ಬೆರಳ ಚೀಪಿಸಿ ಬೆಳೆಸಿದವಳು.

ಮನೆಗೆ ಬಂದ ಬಳುವಳಿ ಆಕಳ ಅಳುತ ಮಾರಿದೋಳು
ಹೆರವರದು ಬಿಸಮಿಲ್ಲಾ ಆದಾಗ ಲಾಕಿ ಮಾಡಿದೋಳು
ತಕ್ಕ ಸಾರ, ಉಪ್ಪು ಹುಳಿ ಕಾರ ಬೆರಸಿ ಚಪ್ಪರಿಸಿದವಳು
ಹಗಲಲ್ಲಿ ಹೇನು ಇರುಳಲ್ಲಿ ತಿಗಣೆ ಹುಡುಕಿ ಒರೆದವಳು.

ಅವಳ ಉಡಿಯೊಳಗೆ ನಾನು, ನನ್ನ ಉಡಿಯೊಳಗೆ ಅವಳು
ಅವಳು ನನ್ನ ಉಡಿಯಲಿ, ನಾನು ಅವಳ ಉಡಿಯಲಿ
ನಾವಿಬ್ಬರೂ ನಮ್ಮಿಬ್ಬರುಡಿಯಲ್ಲಿ
ಉಡಿ ಬಿಚ್ಚಿದರೆ ನುಡಿ
ಉಡಿ ಕಟ್ಟಿದರೆ ಮುಡಿ
ಅವನಿಲ್ಲದಿರೆ ನಾ ನೀ ಅವನಿಲ್ಲ!
ನಾನಿಲ್ಲದಿರೆ ಅವ ನೀ ಇಲ್ಲ!
ನೀ ಇಲ್ಲದಿರೆ ನಾ ಅವ ಯಾರಿಲ್ಲ!

ಕಷ್ಟಕ್ಕೆ ಕಲ್ಲು, ಸುಖಕ್ಕೆ ಹೂವು
ಇದ್ದಾಗ ನಮ್ಮದು, ಇಲ್ಲದಾಗ ಹೆರವರದು
ನಗಿ ಹೊಗಿ ಮುಗಿಲಾಗಿ ಮೋಡ ಮಳೆ ಮಾತಾಯಿತು
ಮಣ್ಣೆಲ್ಲ ಕೆಸರಾಗಿ, ಮೈಯೆಲ್ಲ ಹಸಿರಾಗಿ
ಮೂಡೀತು ಮುಗಿಲಿಗೆ ಕಾಮನಬಿಲ್ಲು
ಬರದ ನೆಲ ಹರಿದಾಗ ಗೂಗೆಗಳ ಕೂಗು
ಬೆಳಗ ಪರಿಹರಿಂದು ಸಾವ ಸೂರ್ಯನತನಕ.

ಮೊಮ್ಮಗಳಿಗೆ ಮಗಳವ್ವ, ನನ್ನ ಮಗಳಿಗೆ ನಾನವ್ವ
ನನಗೆ ನನ್ನವ್ವ, ನನ್ನವ್ವಳಿಗೆ ಅವ್ವ ಅವಳವ್ವ
ಮುರಿದರೇನಂತೆ ಗೂಟ
ರಾಗಿಯ ಕಲ್ಲು ತಿರುವಿದಂತೆ
ಕಲ್ಲುತಾನೆ ತಿರುಗುವುದ ಗರಗರ
ಮುಂದೆ ಇದ್ದದ್ದೇ ಹೊಸ ಗೂಟ
ನಿಲ್ಲದು ಕಡಬತ್ತಕಲ್ಲಿನಾಟ
ಜಗದನುವಂಶೀಯ ಸೂತ್ರ, ಇರುವನಕ ನಿರ್ವಹಿಸಿದಷ್ಟೇ ಪಾತ್ರ.

ಉಘೇ ಉಘೇ ಉಘೇ ಉಘೇ
ತಾಯಿ ಗದ್ಯಾನೆಲ್ಲಮ್ಮ ನಿನ್ನ ಪಾದಕ್ಕೆ
ಮಳಿ ಬಂದು ಬೆಳಿ ಎದ್ದಾಂಗ
ಋತುಋತುವಿಗೆ ರಾಶಿ ಮಾಡಿ ಬಿತ್ತಿದ್ದಾಂಗ
ಉದೋಽ ಉದೋಽಽ ಉದೋಽಽಽ

□

## ಅಯ್ಯೋ... ಪೆಂಟಗಾನ್ ಪೆಂಟಗಾನ್....

ಅಪ್ಪಳಿಸಿದರೂ ಇನ್ನೂರು ಮೈಲಿ ಒತ್ತಡದ ಚಂಡಮಾರುತ
ಕೂದಲು ಕೊಂಕದ ಕಟ್ಟಡಗಳಿಗೆ ಉಕ್ಕಿನ ಹಕ್ಕಿಯ ದೃಷ್ಟಿತಾಗಿತ್ತು!
ಅಯ್ಯೋ! ಪೆಂಟಗಾನ್ ಪೆಂಟಾಗಾನ್....ಗಾನ್
ಓ, ಸೋಜಿಗದ ಸಾವಿನ ವ್ಯಾಪಾರಿಯೇ
ನಿನಗೆಷ್ಟು ಕೈ ಬಾಯಿ ತಲೆಗಳು!

ದನಿಯಿಲ್ಲ ಕೇವಲ ಕಣ್ಣೀರ ಧಾರೆ, ದುಃಖದಾಳಕೆ ಉಕ್ಕಿನಪ್ಪಗೆ
ತಾಯ್ ಹೊನ್ನ ಕೂದಲು ಮಾಸಿ, ತಂದೆಯ ಬೆಳ್ಳಿಗಡ್ಡ ಮುಳ್ಳು ಮುಳ್ಳು
ಅಯ್ಯ ಕಟ್ಟಡದೆದೆಗೆ ಹಾಯಲಿಲ್ಲ....
ಜೀವರಾಶಿಗಳ ಕರುಳು ಸೀಳಿ ಕತ್ತರಿಸಿ ಕೊಂಡು ಹೋಗಿವೆಯೋ
ಗೋಳದ ಮೇಲೆಲ್ಲ ರಕ್ತ ಚೆಲ್ಲದೆ
ಜನ ತಮ್ಮದೆಯ ರಕ್ತದಲ್ಲೆ ತಾವು ಹೆಜ್ಜೆ ಹಾಕುತ್ತಿದ್ದಾರೆ
ವರ್ತಮಾನದ ಪತ್ರಿಕೆಗಳು ರಕ್ತದಲದ್ದಿ ತೆಗೆದಂತಿವೆ.

ನಮ್ಮ ವಲಸೆ ಹಕ್ಕಿಗಳು ನಾವು ಬದುಕಿದೆವು
ಕೃಷ್ಣಾಷ್ಟಮಿಯೆಂದು ಗೋಪಾಲ ರಜೆ ಹಾಕಿಸಿದ್ದ!

ಪಸು ಯುದ್ಧ ಮಾಡಿ ರಕ್ತದಕೋಡಿ ಹರಿಸಿದರೇನು?
ಮತ್ತೆ ನೀರಾಗಿ ಉಸಿರಲಹುದೆ ಹೆಪ್ಪುಗಟ್ಟಿದ ರಕ್ತ?
ಮತ್ತೆ ಕಟ್ಟಬಹುದು ಪೆಂಟಗಾನ್
ಕಟ್ಟಬಹುದೇ ಒಡೆದ ಹೃದಯ ಪ್ರೀತಿ ಸ್ನೇಹ ಮನಸುಗಳ
ಧರ್ಮ ದೇಶ ಭಾಷೆ ಕೋಶಗಳ
ಬರಿ ಪೆಂಟಗಾನ್ ಆಗಿರಲಿಲ್ಲ ಅವು ದೊಡ್ಡಣ್ಣನ ಮೂಗು ಕೋಡಾಗಿದ್ದವು!
ತೃತೀಯ ಜಗದ ದೇಶಿ ತಟ್ಟೆಗಳಲೇನಿದೆಯೆಂದು ಇಣುಕು-ಹಾಕುತ
ಮೂಗು ತೂರಿಸುವ ನೀತಿಗೆ ಕೋಡೇ ಉದುರಿದವು
ಕ್ಯೂಬಾ ಇರಾನ್ ಉತ್ತರಕೋರಿಯಾ ಚೀನಾ ಪ್ಯಾಲೆಸ್ತಾನ...
ಉದ್ದಮೂಗಿಗೆ ಮುನಿಸಿ ನಾವು ತಮ್ಮಂದಿರಲ್ಲ ಎಂದವು

ಅಣ್ಣನ ಜೇಬಿನಲ್ಲಿದ್ದೇ ಇಸ್ರೇಲ್ 'ಗುರ್' ಗುಟ್ಟುತ್ತಾನೆ
ಮಾಜಿ ದೊರೆ ಷಾ ಈಗ ಗರುಡಗಂಬ!

ಉದರದ ಹಸಿವಲ್ಲ ಕಂಗಳ ಹಸಿವಲ್ಲ ಚರಿತ್ರೆಯ ಹಸಿವು
ಸೀಮೆಯ ಹಸಿವೆಗೆ ಹಸಿರುಂಟು ನೋವುಂಟು ಬೇಲಿಯುಂಟು
ಹೀರಿ ಹೀರಿ ರಕ್ತವೈತರಿಣಿ ಬತ್ತಿಹೋದರೂ
ಬೇಲಿಯೇ ಇಲ್ಲದ ಹಸಿವಿಗೆ ಮೃತ್ಯುವಿಲ್ಲ.
ತನ್ನರಕ್ತ ತಾನೇ ಹೀರಿ ಬರಿದಾಗುವಾಗ
ತನ್ನಸಾವೇ ತನಗೆ ಎಚ್ಚರಿಕೆ ಗಂಟೆ, ಬದುಕಿದ್ದರಲ್ಲವೇ ಕೇಳಲು?

'ಹೋ' ಅವರು ಸಾವಿನ ಸುದ್ದಿಗೆ ಸಂಭ್ರಮಿಸುತ್ತಿದ್ದಾರೆ!
'ಓ' ಸಾವೇ ನೀನೆಷ್ಟು ನಿರ್ದಯಿ.

'ಯಾವ ಬೆಲೆ ತೆತ್ತೂ ನಮ್ಮ ನಾವು ರಕ್ಷಿಸಿಕೊಳ್ಳುತ್ತೇವೆ
ನಿಮ್ಮ ಕಂದಮ್ಮಗಳ ರಕ್ತದಿಂದ
ನಮ್ಮ ರಸ್ತೆಗಳಿಗೆ ಬಣ್ಣ ಬಳಿಯುತ್ತೇವೆ'
'ಓ' ಮನುಜನೇ ನೀನೆಷ್ಟು ಕ್ರೂರಿ
ಸ್ಪರ್ಧಾತ್ಮಕ ರಾಜಧರ್ಮಕಾರಣದಲಿ
ಮುಗ್ಧ ಜನ ಹುಲಿಗಲಾಗುತ್ತಾರೆ ಕುರಿಗಳಾಗುತ್ತಾರೆ.

ಮಾತನಾಡುತ್ತಿವೆ ಇದ್ದಕ್ಕಿದ್ದಂತೆ ನಾಸ್ಟ್ರಡಾಮಸ್‌ನ ಕವಡೆಗಳು
ಹಾವಾಗಿ ಜನತೆಯ ಎದೆಯ ಮೇಲೆ ಹರಿದಾಡಿ
ಕವಡೆಗೆ ಕೈ ಮುಗಿದು ಉಧೋ ಉಧೋ ಭಜನೆ
ನನ್ನ ದೇಶದ ವಿಶ್ವವಿದ್ಯಾನಿಲಯಗಳು ಕವಡೆ ಶಾಸ್ತ್ರಕೆ
ಮಣೆಹಾಕುವಾಗ ನನ್ನ ಕೈಯಲಿ ಕಪ್ಪುಬಾವುಟವಿತ್ತು
ಭಜನೆಯ ಕವಡೆಗಳಿಗಿಂತ ರಾಜಕೀಯದ ದಾಳ ಮಿಡಿನಾಗ!

ಅಮೇರಿಯ ಇಟ್ಟಿಗೆಯಾಗಿದ್ದವ ಗನ್ನಿನ ಕಟ್ಟಿಗೆಯಾದ, ಕೊನೆಗೆ ಗನ್ನಾದ
ಉಕ್ಕಿನ ಹಕ್ಕಿಯ ರೆಕ್ಕೆಯಾದ, ತೋಪು ಕಾನನವಾದ!
ಸೋವಿಯೆತ್ ಸಣ್ಣಾಗುವಾಗ:
ಸ್ವಾತಂತ್ರ್ಯ ಹೋರಾಟಗಾರರೆಂದು ಬಿರುದು ಕೊಟ್ಟ ನೆಲ
ಭಯೋತ್ಪಾದಕರೆಂದು ಪಟ್ಟಿ ಕೊಟ್ಟದ್ದೂ ಅದೇ ಇಳೆ
ಬೇಕೆನಿಸಿದಾಗ ಹಾಲುಣಿಸಿ ಬೆಳೆಸುವುದು
ಬೇಡವೆನಿಸಿದಾಗ ಹಾಲಾಹಲವಿಕ್ಕಿ ಕೊಲ್ಲುವುದು.

ಮುಷರಫ್ ತಾಜಮಹಲಿನ ಮುಂದೆ ಪೋಜ್ ಕೊಡುತ್ತ
ಉಸಿರಿದ್ದು ಇದೇ ಬಿರುವಲ್ಲವೇ? ಹಿಂದೆ ಬೊಗಸೆಯೊಡ್ಡಿ
ಗುಂಡು ಹಾರಿಸುವ ಬಂದೂಕಿಗೆ ಹೆಗಲುಕೊಟ್ಟು
'ನಾವು ಭಯೋತ್ಪಾದನೆ ಬುಡಮೇಲು ಮಾಡುವವರೊಂದಿಗೆ'
ಇಕ್ಕುಳದೊಳಗಿನ ಮೊಳೆಯ ಮಾತು!
ಮಗಳು ಕಶ್ಮೀರಿಗಾಗಿ ಇಂಡಿಯಾ ಚಾಮುಂಡಿಯಾದಾಗ
ದೊಡ್ಡಣ್ಣನ ವೇದಾಂತ 'ಮಾತು ಕತೆಯಲಿ ಬಗೆಹರಿಸಿಕೊಳ್ಳಿ'
ಇನ್ನು ಕೆಲಬಾರಿ ಜಾಣ ಕಿವುಡ.

ನಿನ್ನೆ ದಿನ ಸದ್ದಾಂ, ಇಂದು ಲಾಡೆನ್
ನಾಳೆ ಬರಬಹುದು ಮುಷರಫ್ ಇಲ್ಲಾ ಸದ್ದಾಂ ಅವರ ಸರದಿ
ಒಬ್ಬರದು 'ಜೆಹಾದ್' ಮಂತ್ರ
ಮತ್ತೊಬ್ಬರದು 'ಮಾನವೀಯತೆ' ತಂತ್ರ
ಧರ್ಮ ಕುರ್ಚಿಗಳ ಹಸಿಕತೆ ಒಳಗೆ
ಒಣ ಮಾತು ಹೊಸೆತ ಹೊರಗೆ.

ಅಮೇರಿಯ ಅಪರಾಧಗಳ ಫಲ!
ಪ್ಯಾಲೆಸ್ತಾನ್‌ದಲ್ಲಿ ಸತ್ತವರೂ ಅಮಾಯಕರೇ
ದೊಡ್ಡಣ್ಣನ ಸಣ್ಣ ನೋವು ಯಮಯಾತನೆ
ಸಣ್ಣ ತಮ್ಮನ ಯಮಯಾತನೆ ಗಾಯವೂ ಅಲ್ಲ
ಅಮೇರಿಯ ಕೌಬಾಯ್ ಅಮಾನವೀಯತೆಯ ಲೆಕ್ಕ ಕೇಳುತ್ತ
ಪ್ಯಾಲೆಸ್ತಾನಕ್ಕೆ ಮುಕ್ತಿ ಕೇಳಿದ.

ಸದಾ ದೊಡ್ಡಣ್ಣನ ಜೇಬಿನಲಿ ಅಕೌಂಟ್ ತಗೆದು
'ಗುಟುರ್' ಹಾಕುವ ತಮ್ಮಂದಿರೂ ಇದ್ದಾರೆ
ಹಸಿದ ದೇಶಗಳಿಗೆ ತಣ್ಣೀರ ಬಟ್ಟೆಯ ಚಿಂತೆ
ಹೊಸೆವ ದೇಶಗಳಿಗೆ ಬಟ್ಟೆಯೊಳಗಣ ಚಿತೆಯಾಗುವ ಚಿಂತೆ
ಮೂಗಿನ ಮೇಲೆ ಕುಳಿತ ನೊಣ ಹೊಡೆಯಲು ಹೋಗಿ
ಕತ್ತೇ ಕೆಳಗೆ ಉರುಳಬಹುದು.

'ಎಷ್ಟು ಬಿಲಿಯನ್ ಬಹುಮಾನ ಇಟ್ಟಿರೇನು?
ದೇಶ ಬಿಟ್ಟೇವು ಒಸೋಮಾನನ್ನು ಬಿಡೆವು
ಒಬ್ಬ ಸತ್ತರೆ ನೂರಾರು ಒಸೋಮಾಗಳು ಹುಟ್ಟುತ್ತಾರೆ'
ಶಕ್ತಿಯ ಮೌನ ಮಾತು.

ಇಲಿ ಹುಲಿಯಾದುದಕೆ, ಹುಲಿ ಇಲಿಯಾದುದಕೂ ಚರಿತ್ರೆಯೇ ಸಾಕ್ಷಿ
ಧರ್ಮ ಧರ್ಮದ ದಾಹ ಧರ್ಮ-ಪ್ರಭುತ್ವದ ದಾಹ
ಸೇರಿದರೆ ಹಾಲು, ಸೇರಿದಿರೆ ಹಾಲಾಹಲ
ಪ್ರಭುತ್ವದ ದಾಹಕೆ ಖಂಡದ ರುಚಿ, ಧರ್ಮದ ಅಮಲಿಗೆ ರಕ್ತದ ರುಚಿ
ಗೆದ್ದು ಉಳಿದವರಿಗಿಂತ ಸೋತು ಉಳಿದವರೆ ಅಧಿಕ
'ವಸುಧೈವಕುಟುಂಬ'ವೊಂದೇ ಸಾರ್ಥಕ.

□

# ನಾದ ನಿನಾದ

## ಕಡಲ ಕನ್ನೆ

ಎನ್ನೆದೆಯ ಕಡಲಾಗೆ
ದೋಣಿಯ ಬಿಟ್ಟವಳೋ
ಹುಟ್ಟಾಕಿ ನಡೆದವಳೋ
ಇಂದೇಕೆ ತೆರೆ ತಂದಳೋ      ॥ ಪಲ್ಲ ॥

ದಿನವೊಂದು ಕಳೆದ್ದಾಂಗೆ
ಗಾಳ್ಹಾಕಿ ಮೀನ್ಹಿಡಿದು
ಚೆಲ್ಲಾಟ ಆಡಿದಳೊಽ
ನೀರಿನ ಮೀನವನು
ನೀರಿಗೆ ಬಿಸುಡದೆ
ಮರಳಿಗೆ ಎಸೆದ್ಹೋದಳೊಽಽ

ಕಡಲಿನ ಮುತ್ತೆಂದು
ಸಿಂಪೆಯಲಿ ಬಚ್ಚಿಟ್ಟೆ
ಸಿಂಪೆಲ್ಲ ಸವಳಾಡಿತೋಽ
ತೆಂಗಿನ ಮರವೊಂದು
ಕಡಲಿಗೆ ನೆರಳೆಂದು
ತಾನೇ ತಾನೋಡ್ಹೋಯಿತೊಽಽ

ಮರಳಿನ ನೆಲದಾಗೆ
ಸುಂಯಗುಟ್ಟೊ ಗಾಳ್ಯೊಂದು
ಜೊತೆಗಾರಗೆ ಇಸವಾಯಿತೊಽ
ಈಚಲಮರವೊಂದು
ಹೊಂಡದ ಕುಡಿಕೊಂದು
ಎನಗಿಂದು ಜೊತೆಯಾಯಿತೊಽಽ

ಬಾಳ ಬಂಗಲೆ ಹೋಗಿ
ತಿಪ್ಪೆಯ ನೆಲವಾಗಿ

ನರಿ ಹಂದಿ ವಾಸವಾದವೊ॥
ಊರ ತಿಪ್ಪೆಗಳೆಲ್ಲ
ಕಥೆಯ ಕೋಶಗಳೆಲ್ಲ
ತಿಪ್ಪೆ ಇಲ್ಲದ ಊರಾವುದೊ॥55

## ಕೂಲಿಗಾರನ ಮೌನ ಗೀತೆ

ಇದು ಹಿಂಗ್ಯಾಕ ಹಿಂಗ್ಯಾತಕೊ
ತಂದೇಽಽ
ಇದು ಹಿಂಗ್ಯಾಕ ಹಿಂಗ್ಯಾತಕೊಽ

ನಿಮ್ಮನೆ ಒಳಹೊರಗೆ
ತೆಂಗು ರಂಗೋಲ್ಯಾಕೊ
ನಮ್ಹಟ್ಟಿ ಸುತ್ತೆಲ್ಲ
ಈಚಲದ ಮರವ್ಯಾತಕೊ-ತಂದೇಽ

ಬೆಂಕಿಗೆ ಲೋಬಾನ ಸುರಿದ್ಹಾಂಗೆ ನಮ್ಮ ಬೆವರು
ವಾಸನೆ ಇಲ್ಲ ನಮ್ಮೂಽಗಿಗೆ
ಬೆಂಕಿ ಯಾರದೊ ಲೋಬಾನ ಯಾರದೊ
ಪೂಜೆ ಇನ್ನಾರಿಗೋ-ತಂದೇಽ

ನಮ್ಮಟ್ಟಿಯ ಅಂಬಲಿಗೆ
ಮಣ್ಣಿನ ಮಡಿಕ್ಯಾಕೊ
ನಿಮ್ಮನೆಯ ಹುಗ್ಗಿಗೆ
ಕಂಚು ಹಿತ್ತಾಳ್ಯಾತಕೊ-ತಂದೇಽ

ಸೀರಿಯ ಬಿಚ್ಚಿಸಿ ಮರಕೆ ನೀ ತೊಡಿಸಿದಿ
ಬಳೆಗಳ ತೆಗೆದು ಕೊರಡಿಗೆ ಹಾಕಿಸಿದಿ
ಗುಳಿದಾಳಿ ಕಾಲುಂಗುರ ಪೋಳಿಯ ನುಂಗಿತು
ಹಣೆಯ ಕುಂಕುಮ ನಿಮ್ಮ ಹೊಸಲಿಗೆ ನಿಂತೊ-ತಂದೇಽ

ನಮ್ಹಟ್ಟಿ ತಟ್ಟಿಗೆ
ಬಾರಿಯ ಮುಳ್ಯಾಕೊ
ನಿಮ್ಮನಿಯ ಬಾಗಿಲಿಗೆ
ತುಳಸಿಯ ಗಿಡವ್ಯಾತಕೊ-ತಂದೇಽ

ಮೂರು ಕೂಗಾಳಿನ ಗದ್ದೆಯು ನಿಮಗುಂಟು
ಅದರಲ್ಲಿ ನಿಮ್ಮ ಕೃಪೆಯ ಗುಡಿಸಲು ನಮಗುಂಟು
ಗಂಟೆ ಚಕ್ಕಡಿಯಲಿ ಕೊಡೆ ಹಿಡಿದು ಕುಳಿತರೆ
ಅದರ ಹಿಂದಿಂದೆ ನಾನು ಓಡೋಡಿ ಬರಬೇಕೊ-ತಂದೆ

ನಿಮ್ಮನಿಯ ದೇವರಿಗೆ
ಹೊನ್ನ ಚೌರವ ಯಾಕೊ
ನಮ್ಮಟ್ಟಿ ದೇವರಿಗೆ
ಚಪ್ಪಲಿ ಪೆಟ್ಯಾತಕೊ-ತಂದೆ

ಯಕ್ಷ ಯಕ್ಷಿಯ ವೇಷ ನೀವೇನೆ ಹಾಕುವಿರಿ
ಭೂತ ಬೇತಾಳ ವೇಷ ನಮ ಕೊರಳಿಗೆ ಕಟ್ಟಿದಿರಿ
ಹಗಲಿನಲಿ ಕಂಡಿದ್ದು ಇರುಳಿನಲಿ ಇಲ್ಲ
ಇರುಳಿನಲಿ ಕಂಡಿದ್ದು ಹಗಲಿನಲಿ ಇಲ್ಲ-ತಂದೆ

ನಿಮ್ಮಂತೆ ನಾವಿದ್ದು
ಬರಿ ದುಡಿವವರು ನಾವ್ಯಾಕೊ
ಕೈ ಕಾಲು ನಿಮಗಿದ್ದು
ಬರಿ ದುಡಿಸಿಕೊಳ್ಳುವ ಹಕ್ಕ್ಯಾಕೊ-ತಂದೆ

## ಪ್ರೀತಿ ಮಾತು

ನನ್ನಾ ನಿನ್ನ ಪ್ರೀತಿ ಮಾತು
ನೀರಿನೊಳಗ ಬರದ್ಹಾಂಗಾತು
ಮರಳ ಮನಿಯ ಕಟ್ಟಿ ಅಡಿ
ಕೆಡಿಸಿ ಮನಿಗಿ ಹೋದ್ಹಾಂಗಾತು

ಕೊಲ್ಲು ನಿನ್ನ ಕುಡಿಯ ನೋಟ
ಹೊತ್ತಿನೂಟ ಮರೆಸುತಿತ್ತು
ನೀನಿಲ್ಲದ ಒಳನೋಟ
ಕಣ್ಣ ನೀರು ತುಂಬುತಿತ್ತು

ನಿನ್ನ ಕಣ್ಣ ನೀರಿನಲ್ಲಿ
ನನ್ನ ಬಿಂಬ ಮಣ್ಣಾಗುತಿತ್ತು
ನಿನ್ನ ಪ್ರೀತಿ ನಗುವಿನಲ್ಲಿ
ನನ್ನ ಸಾವು ಕಾಣತಿತ್ತು

ರಾಜತೇರು ಎಳೆವ ನಡಿಗೆ
ನನ್ನ ಕಣ್ಣ ತುಂಬುತಿತ್ತು
ರಾಜಿ ಇರದ ನಿನ್ನ ನಡಿಗೆ
ನನ್ನ ದೇಹಕ್ಕಿರಿಯುತ್ತಿತ್ತು

ನನ್ನ ನಿನ್ನ ಮಧ್ಯದಲ್ಲಿ
ಅಂಚೆ ಮನೆಯೆ ಸೇತುವೆಯಾಯ್ತು
ಎದೆಯ ತುಂಬಿ ಬಂದಾ ಮಾತು
ನಾಟಕದಲ್ಲಿ ನುಡಿದ್ಹಾಂಗಾಯ್ತು.

## ಒಬ್ಬ ತಂದೆಯ ಹಾಡು

ನನ್ಹೆಣವ ಬೀಳಲಿ
ನರಿ ನಾಯಿ ತಿನ್ನಲಿ
ಧರಿತ್ರಿಯ ಈ ಉಡಿಯಲಿ
ಉತ್ತುವುದು ಬೇಡ
ಬಿತ್ತುವುದು ಬೇಡ
ಓದು ನೀನೋದು ಮೂರ್ಹೊತ್ತು

ದುಡಿದುಡಿದು ನಾ ಸತ್ತೆ
ನನ್ನಪ್ಪ ನನ್ನ ತಾತ ಸತ್ತ
ನೀ ಸಾಯುವುದು ಬೇಡ ನಮ್ಮಂತೆ
ಹೆಬ್ಬೆರಳು ಒತ್ತೊತ್ತಿ
ಗೆರೆಯೆಲ್ಲ ಮಾಸಿಹವು
ನಮ್ಮಂತೆ ನೀನಾಗ ಬೇಡ ಎಂದೂ

ಸತ್ತ ದನ ಹೊರುವೆ
ಕುರಿ ಕೋಳಿ ಮಾರುವೆ
ಹೆಂಡಕ್ಕೆ ಮುಂಡ ಮುಚ್ಚುವೆ
ಹೊಡೆವರೆನ್ನ ಹೊಡೆಯಲಿ
ಮೈ ಚರ್ಮ ಕಿತ್ತು ಬರಲಿ
ಓದು ನೀನೋದು ಮಗನೆ ಓದು

ಸೂಟು ಬೂಟು ಉಟ್ಟು
ಊರ ಅಗಸಿಯ ನೀ ಮೆಟ್ಟು
ಪೂರ್ವಜರ ಕರಿಕಲೆ ಮಾಸಬೇಕು
ನೀನಾಡಿದ ಮಣ್ಣಲಿ
ನಾನುಳುವ ಭೂಮಿಯಲಿ
ನೀ ಕೇಳಬೇಕು ಬಾಸುಂಡೆಗುತ್ತರ.

# ಮುಳುಗದ ಸೂರ್ಯ

ಬಣ್ಣ ಬುಗುರಿಯ ಸರದಾರ
ಸುತ್ತಿ ಆಡಿಸಿದ ಗುರಿಗಾರ ॥ ಪಲ್ಲ॥
ಭರತ ಖಂಡದಲಿ
ಕೆಂಡದುಂಡೆಯಾಗಿ
ತಿರುಗೆ ತಿರುಗತಾವ-ಬುಗುರಿ
ತಿರುಗೆ ತಿರುಗತಾವ ॥ ಅನುಪಲ್ಲ ॥

ಹಳೆಯ ಜಾಳಿಗೆ
ಸುಟ್ಟು ಹಾಕಿದ
ಹೊಸ ನಾರಲಿ
ಹೊಸೆದು ಹಾಕಿದ
ಹುರಿಯ ಕಟ್ಟಿಗೆ
ಮೇಣ ಸವರಿದ
ಹಿಂದೆ ಬಿಚ್ಚದ
ಗಂಟು ಹಾಕಿದ
ಎಂಥ ಹುರಿಯ ಕರೆಯೊ<sub></sub>ಽಽ
ಸರ್ವರಿಗೂ ಸುಖದ ಸುಧೆಯೊ.

ಲಂಕೆಯಲಿದ್ದರೂ
ಹಾರಿಸಿ ಬಿಟ್ಟ
ಲಗಿಬಿಗಿ ಬಿದ್ದರೂ
ಗೆದ್ದೇ ಬಿಟ್ಟ
ಹರಿಜಾಳಿಗೆ ಬಿಟ್ಟರೂ
ಹೋಗಿ ಆಡಿದ
ಹುರಿಹಾಕಿ ಹಿಡಿದರೂ
ಸಿಗದೆ ಕಾಡಿದ
ಎಂಥ ಸ್ಪರ್ಶ ಹರುಷಽಽ
ಮುಟ್ಟಿದರೆ ಬುಗುರಿ ಪರುಷ.

ಬಾಚಿ ಬುಗುರಿಯ
ಹಲ್ಲ ಕಿತ್ತಿದ
ಮುಂಗೈ ಬುಗುರಿಗೆ
ಗಿಚ್ಚ ಹಾಕಿದ
ಅಂಗೈ ಬುಗುರಿಯ
ಬಣ್ಣ ಬಿಚ್ಚಿದ
ಸಣ್ಣ ಬುಗುರಿಯ
ಕಣ್ಣ ತೆರೆಸಿದ
ಇರುಽಳೆಲ್ಲೂ ಉರಿವ ಸೂರ್ಯಽ
ಮೆಟ್ಟಿದನು ಧರೆಯ ಕ್ರೌರ್ಯ

ಜಾಳಿಗೆ ಜಾಳಿಗೆ
ತುತ್ತು ಹಾಕಿದ
ಮಾಳಿಗೆಲೇರಿ
ಮಥನ ಮಾಡಿದ
ಮಜ್ಜಿಗೆ ಬೆಣ್ಣೆ
ಬೇರೆ ಮಾಡಿದ
ಬೆಣ್ಣೆ ಕಾಯಿಸಿ
ತುಪ್ಪ ತೋರಿದ
ಧರೆಯೊಳು ಕಥನವಾಗಿ ಬಿಟ್ಟಽಽ
ಮುಳುಗದ ಸೂರ್ಯನಾಗಿ ಬಿಟ್ಟ.

ಬುದ್ಧಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ
ಧಮ್ಮಂ ಶರಣಂ ಗಚ್ಛಾಮಿ. ❑

## ಅಂಗಳ

ಹೇಗೆ ಹೇಳಲಿ ನಾ ನನ್ನಂಗಳದ ನೆನಪುಽ
ಹೇಗೆ ಹೇಳದೆ ಇರಲಿ ಮನೆಯಂಗಳದಾ ಒನಪು

ಅಂಬೆಗಾಲಿಡುವಾಗಽ ಎಡವಿದ ಆ ನೋವು
ಹೊಟ್ಟೆ ಹೊಸೆತದಿ ಊದಿದ ಗದ್ದದ ಬಾವು

ಗಿಲಕಿಯ್ನಾಡಿಸುವಾಽ ಅಡಗೋಲಿನ ಆ ಅಜ್ಜಿ
ಕೋಲಗುದುರೆಯ ಕುಣಿಸೋ ಬ್ಯಾಗಟಿಗ ಆ ಅಜ್ಜ

ನಾನಾಡೋ ಅಂಗಳಕ್ಕೆಽ ಬಣ್ಣ ಕೌದಿಯ ಥಳಕು
ಬೆಳಗಾದರೆ ಅದಕೆ ಸಗಣಿ ರಂಗೋಲಿಯ ಬೆಳಕು

ಅದರಲ್ಲಿ ನಡೆದಾವೆಽ ಹೊಸ ಮದುವೆ ಎಷ್ಟೊಂದು
ಇಸಬಾಯಿ ತೊಳಸ್ತಾರೆ ಹೆಣವೆತ್ತಿ ಏಸೊಂದು

ಕೋಳಿ ಬೆಕ್ಕು ನಾಯಿ ಚಕ್ಕಂದದಾ ಜಾಗ
ಸಾಲ ವಸೂಲಿಯಾ ದೊಣ್ಣೆಗೂ ಅಲ್ಲಿ ಯೋಗ

ಬುಡಬುಡಕಿ ಬಾವಾ ಕರಡಿ ಆಡಿಸೊ ಮಾವ
ಪಗರಣ ಜೋಗುತಿ ದುರಗ-ಮುರುಗಿಯ ಭಾವ

ಆ ಗುರ್ಚಿ ಗುಳ್ಳವ್ವ ಹಬ್ಬಜಾತ್ರೆಯ ಹೆಜ್ಜೆ
ಕಣಿ ಹಲಿಗೆ ಸಂಬಾಳ ಸನಾದಿ ಹುರಿಗೆಜ್ಜೆ

ಇದು ಬರಿ ಅಂಗಳಲ್ಲೊ ನೆನಪಿನ ತಂಗುಳಲ್ಲೊ
ಚಟ್ಟಿ ತೊಟ್ಟಿಲ ರಾಶಿ ಬದುಕ ಕಥೆಗಳ ರಾಶಿ.

□

# ಮೊದಲ ಚುಂಬನ

ಚುಂಬನಾ ಚುಂಬನಾಽಽ ॥ ಪಲ್ಲ ॥
ಚುಂಬಿ ಚುಂಬಿನಾಽಽ

ಗಾಳಿಯಲ್ಲಿ ತೇಲಿ ಬಂದ
ಮೌನ ಚುಂಬನಾ
ಹೂವಿನಲ್ಲಿ ಅಡಗಿ ಪುಳಕ
ಗಂಧ ಚಂಬನಾ

ನೀರಿನಲ್ಲಿ ಮುಳುಗಿ ಹೋದ
ಮಾತು ಚುಂಬನಾ
ಭೃಂಗವಾಗಿ ಹಾರಿ ಬಂದ
ಸ್ಮೃತಿಯು ಚುಂಬನಾ

ಕಾದು ಬಂದ ಹಾಲ ಮೇಲ
ಕೆನೆಯು ಚುಂಬನಾ
ಮಾಗಿದ್ಹಣ್ಣಿಗೆ ಮುಕ್ಕು ಹಾಕಿದ
ಮೊದಲ ಚುಂಬನಾ

ದೂರ ದೂರ ಸರಿದ ಹಾಗೆ
ಬೆಸೆವ ಚುಂಬನಾ
ರೆಕ್ಕೆ ಇಲ್ಲದೆ ಹಕ್ಕಿಯಾಗಿ
ಹಾರು ಚುಂಬನಾ

ನೀರಿನಲ್ಲಿ ಮುಳುಗಿ ಹೋದ
ಸ್ಮೃತಿಯು ಚುಂಬನಾ
ಮರುಳುಗಾಡಿನ ಸುಳಿಗೆ ಸಿಕ್ಕ
ಬಿರುಗಾಳಿ ಚುಂಬನಾ

ಅಧರ ಮಧುರ ಕದಿರು ತೆಗೆದ
ನೂಲು ಚುಂಬನಾ
ತನ್ನ ಬಲೆಯಲಿ ತಾನೆ ಸಾವ
ಜೇಡ ಚುಂಬನಾ

ಧರೆಗೆ ಮುಗಿಲ ಸ್ಪರ್ಶ ಬಯಕೆ
ಬಯಲು ಚುಂಬನಾ
ಗೋತ್ರ ಗೋಡೆ ಒಡೆದು ನಿಂತ
ಜಾತಿ ಚುಂಬನಾ

ಕೆಸರಿನಲ್ಲಿ ಹಸಿರಿನಂತೆ
ಇಬ್ಬನಿಯು ಚುಂಬನಾ
ಕಾಂತ ಕಾಂತೆಯ ಏಕಾಂತದ
ಬಹುಕಾಂತ ಚುಂಬನಾ

ಮರದ ಒಳಗಣ ಕಿಚ್ಚಿನಂತೆ
ಸುಡುವ ಚುಂಬನಾ
ಸಾವಿನುಡಿಯಲಿ ಮಲಗ ಬಯಸುವ
ಸಾವು ಚುಂಬನಾ

ರಕ್ತದಲ್ಲಿ ಸಿಕ್ತವಾಗೋ
ರಕ್ತ ಚುಂಬನಾ
ಹೆಣದ ಮೇಲು ಮರು ಜನುಮಕೆ
ಕಾವ ಚುಂಬನಾ.

## ಅಮೃತಮತಿಯ ಪ್ರಳಾಪ

ಅಡವಿಯ ಆಕಳಕ ಕಾಲ್ಬಿಗದ ಹಾವು
ಕುಡದ್ಹಾಂಗ ಮಲಿಯ ಹಾಲ
ಕುಡುದ್ಹೋಗು ಬಂದು ಹಾಡ್ಹಗಲ
ನೀ ನನ್ನ ಎದಿಯ ಹಾಲ

ವಡಮುರಕ ಬಳ್ಳಿ ಸುತ್ತಿದ್ಹಾಂಗ ಗಿಡಕ
ನೀ ಸುತ್ತು ನನ್ನ ಮೈಯೆಲ್ಲ
ಪುಡಿಪುಡಿಯ ಮಾಡ್ಹೋಗು ಮೈಯೆಲುವನೆಲ್ಲ
ಮತ್ತೆ ಹೊಂದಿಸುವೆ ಕೀಲು ಸಂದೆಲ್ಲ

ಉಟ್ಟರವಿಯೆಲ್ಲ ನಾ ಚಿಂದಿ ಮಾಡಿ
ಜೋಡಾಗತೀನಿ ಹರುವ ಇರುಳಿಗೆ
ಹಗಲೆಲ್ಲ ಕಾಡಿ ಕಾಡಿ ಸಂಜೀಕ ಬೇಡಿ ಬೇಡಿ
ಶಪಿಸುವೆ ಕಾಳ ಕತ್ತಲಿಗೆ

ನನಸೆರೆಯ ಮಾಡಿ ನೀ ಆಳುವನಾದಿ
ನಾನೆಷ್ಟು ಆಳಲಿ ಈಗ
ತಡಮಾಡ ಬ್ಯಾಡ ನೀ ಓಡಿ ಬಂದ
ಕಣ್ಣೀರ ವರಸು ಬೇಗ

ಹಂಗ್ಹರದ ಹೇಣ್ಲು ಹಾರ್ಯಾದ ಸೊಣ್ಲು
ಒಳಗೊಳಗ ಬತ್ಯಾದ ಸಣ್ಣ
ಕಾಣದೆ ನಿನ ಕಣ್ಣ ಸುಟ್ಟಾದ ನನಬಣ್ಣ
ದಿನಗಳದ್ರ ಆಗುವೆನೋ ಮಣ್ಣ

ಕಾಡ ಕತ್ತಲಿಗಿ ಹುಡುಕುವುದು ಹಸ್ತ
ತೇವಿದ್ದ ಬಾವಿಯೊಂದು

ಕತ್ತಲಾರಿಹೋಯ್ತು ಬಿಸಿಲ ನೆತ್ತಿಗೆ ಬಂತು
ಜಗವೆಲ್ಲ ಕಣ್ಣಿಗೆ ಸುಂದ ಸುಂದು

ದಿನದಾಗ ಕನಸಿನ ಕುದುರಿ ಎಷ್ಟಂತ ಏರ್ಲಿ
ಸೊಗಸಿಲ್ಲ ಮನಸಿನೊಳಗು
ಎಷ್ಟರಸಬೇಕು ಜೊತೆಗೂಡು ಸಾಕು
ಬೆಂಕಿ ಮ್ಯಾಲ್ಯಾಡು ಗಾಳ್ಯಾಗು

ಕಾಮಕ್ಕ ಕಣ್ಣಿಲ್ಲ ಮೋಹಕ್ಕ ಬಣ್ಣಿಲ್ಲ
ಹರದಾಡು ಹಾವು ಮನದಾಗ
ಹಗಲಿರುಳ ಅಕ್ಕಳಿಸಿ ಎದಿಯುಸಿರ ಬಿಕ್ಕಳಿಸಿ
ಸಾವಾಯ್ತು ಪಂಜರದ ಗಿಣಿಯಾಗಿ.

□

## ಮಾತಂಗಿ ನ್ಯಾಯ

ಸುಡು ಸುಡುವ ಬಿಸಿಲೀಗಿ ನೆಲ ಕಾದ ಹಂಚು
ನಡದರ ಎಳ್ಳು ಹುರದ್ಹಾಂಗ-ಆ ಊರ
ನೆಲ ಕಾದು ಉರಿದಿತ್ತು ಆವತ್ತು

ಊರ ನಡುಬೀದ್ಯಾಗ ಕುಡಗೋಲು ಕೈಯಾಗೆ
ಹೊಂಟಾಳ ನಾರಿ ಯಾರೀಕಿ-ಕಾರ್ಹುಣ್ವಿ
ಕರಿಹರ್ದ ಎತ್ತಂಗ ಹೊಂಟಾಳೆ

ಕೊಲ್ಲುವಳು ಯಾರನ್ನು ಕಡಿಯುವಳು ಯಾರನ್ನ
ನೀ ಬಾರೊ ನಾ ಬಾರೊ-ಊರಿನ ದಂಡು
ಹೊಳಿಯಾಗಿ ಹರದಾದೊ ಹಿಂಡು

ಸೀರಿಯ ಕಳೆದಾಳೆ ಕುಪ್ಪಸವ ಹರಿದಾಳೆ
ಚಾವಡಿಯ ಏರಿ ನಿಂದಾಳೆ-ಆ ನಾರಿ
ಬೆತ್ತಲೆ ಮಾರಮ್ಮನಾಗ್ಯಾಳೆ

ಕುಡಗೋಲು ಹಚ್ಚಿ ತನ್ನಮೂಗ ಸವರ್‍ಯಾಳೆ
ಕರ್ರನೆ ಕೊಯ್ಯದಾಳೆ ಮಲೆಗಳ-ಹಾ ಎನ್ನುದಕ
ಮುಡಿಬಿತ್ತೊ ಅವಳ ಕಾಲಲಾಗ

ಹೋಳಿಯ ಹುಣ್ಣಿಮಿಗೆ ಓಕಳಿ ಆಡದ್ಹಂಗ
ರಾಮಾರಕ್ತ ಮೈತುಂಬ-ಜನರೆಲ್ಲ
ಫಿರ್ಯಾದಿ ಹೋಯ್ತು ಅರಸನಿಗೆ

ಹಾದರದ ಹೆಣ್ಣಿಗೆ ಮೊಲೆ ಮೂಗ ಕೊಯ್ದು
ನ್ಯಾಯ ನೀಡುವ ಅರಸು-ಆ ಅರಸನಿಲ್ದೆ
ಕೊಯಕೊಂಡ ಕಥೆಯು ಒಗಟಾಯ್ತು

ಹಕ್ಕಿಗೂ ಚಿಂತಿ ಮನಿ ಬೆಕ್ಕಿಗೂ ಚಿಂತಿ
ಹಂತಿಯ ಹೊಡದ್ಹಾಂಗ ತಲಿಯಾಗ-ಕಂಕಿ
ತಗದ್ಹಾಂಗ ರಾಶಿ ತುಂಬಿದ್ಹಾಂಗ

ಅರಸ ಬಂದರೇನು ಅಂಬಾರಿ ತಂದರೇನು
ಒದ್ದಾಡು ಜೀವ ನಿಲ್ಲಲಿಲ್ಲ-ಆ ಅರಸು
ಮನದಾಗೆ ಒದ್ದಾಡಿ ನೀರಾದ

ಈ ಹೆಣ್ಣಿನ ಹಣೆಬರಹ ನಮಗೆಲ್ಲ ಗೊತ್ತು
ಮತಂಗನ ಮಡದಿ ಮಾತಂಗಿ-ಎಂದರಸ
ಉಸಿರು ಬಿಡದ್ಹಾಂಗ ಹುಸಿ ನುಡಿದ

ನನ್ನರಸಿ ಎದಿ ಮ್ಯಾಗ ಬಂಗಾರ ಪದಕ
ಹೊಳಿತ್ತಿತ್ತು ಥಳ ಥಳ ಬೆಳಗಾಗುತನಕ-ಕದ್ದು
ನುಂಗ್ಯಾನ ಮತಂಗ ಬೆಳತನಕ

ಕಳ್ಳಮತಂಗನ ಕತ್ತಾದ್ರು ಕಡಿಸಿದ್ರಿ
ನೆರೆದ ಪಟ್ಟಣದ ಚಾವಡ್ಯಾಗ-ಅತ್ತಿದ್ಲು
ನಮ್ಮೆದರ ಈವತ್ತು ಸತ್ತಬಿದ್ಲು

ನಡೆದ್ಹೋದ ಕಥೆಗೆ ಕಸಿಮಾಡಿ ಹೇಳಿದ
ಕೇಳಿದ ಮಂದಿ ಸುಮ್ಮಿತ್ತೆ?-ಅವರ ಮನ
ಮುಸುಕಲ್ಲೆ ಜಾಡಿಸಿ ಒದ್ದಿತ್ತು

ಪಾದರ ಮಾಡಿದ್ದು ಅರಸಿ ಹೊರಸ್ಹಾಕಿ
ಮಾತಂಗಿ ಮತಂಗ ಬಲಿಪಶು-ಮಣ್ಣಾಗೆ
ಇಂಥ ಏಸೊಂದು ಕಥೆ ಹುದುಗ್ಯಾವೆ.

□

## ಆಷ್ಟಾವಂಕನ ಹಾಡು

ಅತ್ತಿ ಮಾವರ ಕಣ್ಣು ಕಾಣಕಿಲ್ಲ
ಮನಿಯವರಂತೂ ಊರಾಗಿಲ್ಲಾ
ಅಂಜೀಕಿ ಗಿಂಜಿಕಿ ಇನ್ಯಾಕ
ಕಕ್ಕುಸಲ ಇನ್ನ ಬಿಡುದ್ಯಾಕ

ಮನಿರಾಯನಿಲದಿದ್ರ
ಮನಿ ನಂದಾತೇನ?
ಅತ್ತಿಮಾವರ ಕಣ್ಣಾ ಕಾಣದ್ಹೋದ್ರೆ
ಗ್ವಾಡಿಯ ಕಿವಿಕಾಲು ಊನೇನ?

ಗಂಡಲ್ಲದ ಗಂಡೆ ನನ ಗಂಡಂತ
ಈ ಗಂಡಿಗೆ ನಾನು ಮರುಳಾದೆ
ನನ್ನ ಹೆಜ್ಜಿಯೊಳಗ ಹೆಜ್ಜೆಯ ಹಾಕಿ
ಗಂಡಸಾಗಿದ್ರ ಬಾ ಈಗ

ಗಂಡುತನಕ ಕೆಣಕ ಬ್ಯಾಡ
ಮೊಳಕಾಲ ಕೆಳಗಿನ ಬುದ್ಧಿ
ತೋರಿಸಾಕ ಬರಬ್ಯಾಡ
ಕೊಳ್ಳಾನ ತಾಳಿ ಕಳಕೊಂಡೀಯ

ಬಲವಿಲ್ಲದ ತಾಳಿ ಹೋದರೇನು
ಬಲಗಾರ ನೀನೇ ಇರುವಾಗ
ರಾಜಾರಾಣಿ ಹಾಂಗ ರಾಜಮಹಲನ್ಯಾಗ
ಬಾಳೂನು ಮಕ್ಕಳ ಕೂಡ

ಅಂಬಾರಿ ಮ್ಯಾಲ ಕುಂತು
ಮಳ್ಳ ಹೆಣ್ಣ ಆಗಬ್ಯಾಡ

ಇಲ್ಲದ್ದೊಂದ ಕನಸ ಕಟ್ಟಬ್ಯಾಡ
ಅರಮನಿಹೆಣ್ಣ ನೀನು ತಿಳ್ದ ನೋಡು

ಅರಮನಿಯಾಗಿದ್ದ ಅರಗಿಣಿ ನಾನು
ಪಂಜರ ಬಿಚ್ಚುವ ಗುರಿಕಾರ ನೀನು
ಹಸಿರಲ್ಲದ ಚಪ್ಪರಕ ಹಸಿಬಳ್ಳಿ ನಾನು
ಹೆಣ್ಣ ಜೀವ ನನದು ತಿಳಿ ನೀನು

ಬುದ್ಧಿಯ ಮಾತ ಹೇಳಲಾಕ
ನಿನಗಿಂತ ನಾನು ಹಿರಿಯಾಂವೇನ
ಯ್ಯಾಳ್ಯಾಭಾಳಾತು ಮನಿಗ್ಹೋಗ
ಮತ್ತೊಮ್ಮೆ ನಾವಿಲ್ಲಿ ಸೇರೂನ

ಮತ್ತೊಮ್ಮೆ ಯಾಕ ಸೇರೂನಿಲ್ಲಿ
ಮನಸಿಲ್ಲದ ಮನಸಿನ್ಯಾಗ
ಇನ್ನೊಮ್ಮೆ ಈ ಕಡೆ ನೆದರೆತ್ತಿ ನೋಡಬ್ಯಾಡ
ಮತ್ತೆಂದೂ ಈ ಹಾದಿ ತುಳಿಬ್ಯಾಡ

ಹೆಜ್ಜ್ಯಾಗ ಹೆಜ್ಜ್ಯಾಕಿ ಬರತೀನಿ ನಿನ ಕೂಡ
ಸಿಡ ಸಿಡದು ಹೋಗಬ್ಯಾಡ
ನಿನ ಕೈಯ ಹಿಡದು ನಡಿತೀನಿ
ಎಡವಿ ಬೀಳಾಗ ಹಿಡಿತೀನಿ

..................................................

..................................................

ಹೋಗುದು ಹೋಗತೀಯ
ನನದೊಂದು ಮಾತ ಕೇಳ
ಎದಿಮ್ಯಾಗಿಲ ದಿಟ್ಟಿ ನೆಲಕಿಡು
ಕಾಲಾಗ ಕಲ್ಲುಂಟು ಎಡವೀಯ.

## ಬದುಕು

ಹಾರೆ ಹಾರುತ್ತಿದ್ದ ಪಾರಿವಾಳಗಳು
ಆಕಾಶದಾ ತುಂಬಾ
ಕಟ್ಟಿ ಹಾಕಿದರು ಯಾರು ಇವ್ಕ ಇಲ್ಲಿ
ಸಾವುತನಕ ಹಿಂಗ || ಪಲ್ಲ ||

ಅಂಬಾ ಎನ್ನುವ ಕರುವಿನ ಕಣ್ಣಿಗೆ
ಮೊಲೆಗಳೆಷ್ಟು ಗೊತ್ತೆ?
ಕೆಚ್ಚಲೊಳಗಡೆ ಮೊಗವನಿಟ್ಟರೆ
ಏನಿದೆ ಲೊಳಲೊಟ್ಟೆ?

ನಡೆಯುವ ಕಾಲಿಗೆ ಗೆಜ್ಜೆಯ ಕಟ್ಟಿ
ಗಿಲ ಗಿಲ ನಾದ ಕೇಳಬೇಕೆ
ರಂಗು ರಂಗಿನ ಕೈಗೆ ಮದರಂಗಿ
ಬಳೆಯ ತೊಡಿಸ ಬೇಕೆ?

ಬೆಟ್ಟದ ಬಯಲಲಿ ತೋಳು ಕಡಿದುಕೊಂಡು
ನಿಂತ ಮರದ ಮರುಗೆ
ಕುಂಡದೊಳಿರುವ ಸಸಿಯೇ ಏಕೆ ನೀನು
ಮರವ ಕಂಡು ನಗುವೆ

ಹರಿಯುವ ಹಾಲಲಿ ಕಂಡು ಮುಳುಗುವ
ಕಾಮನ ಬಿಲ್ಲಿನ ಕೋಲೆ
ಹಿಡಿಯಲ್ಹೋದರೆ ದೂರ ಸರಿವುದು
ಸಿಗುವುದೆಂದು ಹೇಳೆ?

ಬದುಕು ಎಂಬುದು ಬುಗುರಿಯ ಆಟ
ತಿಳಿಯದ ಮನುಜನಿಗೆ
ಬದುಕ ಬಲ್ಲವ ಹಿಡಿದು ಆಡಿಸಿ
ಗೆಲ್ಲುವ ಕೊನೆ ವರೆಗೆ.

## ಮುದುಕನ ಬರಹೇಳು

ಸಾಲಿಗೆ ಹೋಗುವ ಸಂಗಯ್ಯ
ಮುದುಕನ ಕಂಡರ ಬರಹೇಳ-ನೀ
ಮುದುಕನ ಕಂಡರ ಬರಹೇಳ
ಮುದುಕನ ಖೂನ ಕೇಳಲ್ಲ ॥ ಪಲ್ಲ ॥

ಬಚ್ಚಬಾಯಿಯಂವ
ತತರಾಣಿ ಮೋತೆಂವ
ನೀಳ ಮೂಗಿನ ಚಲುವನ
ನೀಳ ಮೂಗಿನ ಚಲುವನ-ಅವ
ಕಣ್ಣಿಗೆ ಕನ್ನಡಕಿಟ್ಟವನ
ಕಣ್ಣಿಗೆ ಕನ್ನಡಕಿಟ್ಟವನ-ನಮ
ಮುದುಕನ ಕಂಡರ ಬರಹೇಳ

ಪಂಚೆ ಸುತ್ತಿದವ
ದುಪಟಿಯ ಹೊದ್ದವ
ಕುಡುಗೋಲ ಸೊಂಟದ ಮುದುಕನ
ಕುಡುಗೋಲ ಸೊಂಟದ ಮುದುಕನೋ-ಅವ
ನಡದಾಗ ಗಡಿಯಾರ ಕಟ್ಟವನೋ
ನಡದಾಗ ಗಡಿಯಾರ ಕಟ್ಟವನೋ-ಅವ
ಗಡಿಯಾರ ಮುಳ್ಳಿನ್ಹಂಗ ನಡೆವವನೋ

ಬೋಳ ತಲೆಯವ
ಎಕ್ಕಡ ತೊಡುವವ
ಕೈಯಲಿ ಕೋಲ ಹಿಡಿದವನೋ
ಕೈಯಲಿ ಕೋಲ ಹಿಡಿದವನೊ-ಅವ
ಹಿಂಸಾ ಮಾರ್ಗವ ಮೆಟ್ಟಿದವನೋ
ಹಿಂಸಾ ಮಾರ್ಗವ ಮೆಟ್ಟಿದವನೋ-ಅವ
ಅಹಿಂಸೆಯ ಬಾಗಿಲ ತಟ್ಟಿದವನೋ

ತೂಕದ ಬಾಯಿಯವ
ಒಡಕ ಬಗೆಯದವ
ಮುಪ್ಪಿನ ಮುದುಕಿನ ಮನುಷ್ಯಾನೋ
ಮುಪ್ಪಿನ ಮುದುಕಿನ ಮನುಷ್ಯಾನೋ-ಅವ
ರಘುಪತಿ ರಾಘವ ಹಾಡವನೋ
ರಘುಪತಿ ರಾಘವ ಹಾಡವನೋ-ಅವ
ರಾಮ ನಾಮವ ಬಿಡದವನೋ

ಕಣ್ಣ ತಗಿಸಿದವ
ಕಣ್ಣ ಮುಚ್ಚಿಸಿದವ
ಮತ್ತನ್ಯಾಗಿ ಮಗಿ ಒಡೆದವನೋ
ಮತ್ತನ್ಯಾಗ ಮಗಿ ಒಡೆದವನೋ-ಅವ
ಉಪ್ಪು ಹುಳಿಯು ಕಾರ ತಿಂದವನೋ
ಉಪ್ಪು ಹುಳಿಯು ಕಾರ ತಿಂದವನೋ-ಅವ
ತಾಯತ ನಡದಾಗ ಉಳ್ಳವನೋ.

## ಬತ್ತಿದ ಶಾಲ್ಮಲೆ

ನೀನಿಲ್ಲದ ಈ ಮನ
ಹಾಳುಹಂಪೆಯಾಗಿದೆ
ನೀನಿಲ್ಲದ ಹೊಬನ
ಅರಳದೇ ಬಾಡಿದೆ ॥ ಪಲ್ಲ ॥

ನೀನಂದು ಹಾಡ ಹಾಡು ಎಂದೆ
ನಾನೊಂದು ಹಾಡ ಹಾಡಿದೆ
ಮರವು ತಲೆಯ ತೂಗಿ ತೂಗಿ
ಅಹುದಹುದು ಎನ್ನುತ್ತಿತ್ತು
ಹಾರುಹಕ್ಕಿ ಕುಂತು ಕೇಳಿ
ಜೊತೆಗೆ ದನಿಯ ನೀಡುತ್ತಿತ್ತು
ನೀನಿಲ್ಲದ ಈ ಹಾಡಿಗೆ
ಬರಿಯ ಗೂಗೆ ಕೂಗಿದೆ

ನೀನಂದು ನನ್ನ ಬಳಿಯಿರೆ
ದಿನಕೆ ದಿನವ ಮರೆಯುತಿದ್ದೆ
ಉರಿವ ಸೂರ್ಯ ಏರಿ ಬರಲು
ಮೋಡ ನೆರಳ ಮಾಡುತ್ತಿತ್ತು
ಬಿರುಗಾಳಿ ಸುತ್ತಿ ಬರಲು
ಬಾಳೆ ತಡೆಯ ತರುವುತ್ತಿತ್ತು
ನೀನಿಲ್ಲದ ಈ ದಿನ
ಕಡು ಕೋಪ ಎಲ್ಲಕೂ

ಹೋಗುವಾಗ ಮತ್ತೆ ಬಂದು
ಕೊನೆಯದೊಂದು ಎನ್ನುತ್ತಿದ್ದೆ
ಬರುವ ಮುನ್ನ ಹೇಗೆ ಬಂದೆ
ನನಗೆ ಒಂದೂ ತಿಳಿಯಲಿಲ್ಲ
ಹೋಗುವಾಗ ಅಂದು ಇಂದು

ಮರೆಯದಂಥ ಅಗಲಿಕೆ
ನೀನಿಲ್ಲದ ದಿನವಲೂ
ಹಳೆಯ ನೆನಪೆ ಕಾಣಿಕೆ

ನಿನ್ನ ತೋಳು ದಿಂಬನಾಗೆ
ಅಡವಿ ಸ್ವರ್ಗವಾಗುತ್ತಿತ್ತು
ನಮ್ಮ ಇರುವ ನೋಡಿ ನೋಡಿ
ಜಗವೇ ಹಲ್ಲು ಮಸೆಯುತ್ತಿತ್ತು
ಅಮಲು ತುಂಬಿ ನಾಗಸರ್ಪ
ಕಚ್ಚಿ ಬಂದು ಮರುಳುತ್ತಿತ್ತು
ನೀನಿಲ್ಲದ ಈ ಕ್ಷಣ
ಇರುವೆ ಕೂಡ ಕಚ್ಚಿತು

ನಾಳೆ ಬಾ ಎಂದು ನುಡಿಯೆ
ಈಗ ಬಂದೆ ಎನ್ನುತ್ತಿದ್ದೆ
ಬಳಸಿದಾಗ ತೋಳು ತುಂಬ
ಬಳ್ಳಿ ಕೂಡ ನಾಚುತ್ತಿತ್ತು
ಜೊನ್ನ ನಾನು ಸವಿಯುವಾಗ
ದುಂಬಿ ಹೂವ ಮರೆಯುತ್ತಿತ್ತು
ನೀನಿಲ್ಲದ ಆ ಸುಖ
ಇವೆಲ್ಲವೂ ತೊರೆದಿವೆ

ತೊಡೆದೊಟ್ಟಿಲೊಳಗೆ ಮಗುವನಾಗೆ
ಕನವರಿಸುತ್ತಿತ್ತು ಕಾಡು ಕೂಡ
ಓಡು ನವಿಲ ಅಲ್ಲೆ ನಿಂತು
ಮೇಘ ಓಡಿ ಸಂದೇಶ ತಂತು
ಮಳೆಯರಾಯ ಹೂವ ಹಾಸಿ
ಕಾಮನ ಬಿಲ್ಲ ಕಟ್ಟಿದ
ನೀನಿಲ್ಲದ ಈ ತುಟಿ
ಬರ ಬಂದು ಸೀಳಿದೆ

ಬೆನ್ನ ಬೆನ್ನ ಒತ್ತೆ ಆಟ
ತರಗೆಲೆ ನುಚ್ಚು ನೂರು

ಹುಲ್ಲು ಕೂಡ ನಾಚಿ ಬಾಗಿ
ಎದ್ದಾಗ ನಾವು ಏಳುತ್ತಿತ್ತು
ಚೆನ್ನಾಟ ನೋಡಿ ಕೂಡಿ
ಮುನಿಯ ಬಳಿ ಮುನಿಯುತ್ತಿತ್ತು
ನೀನಿಲ್ಲದೆ ಈ ಹುಲ್ಲುಕಡ್ಡಿ
ಸೂಜಿಯಾಗಿ ಚುಚ್ಚಿತು

ತರುತಿದ್ದೆ ಬರುವಾಗ ಏನೇನೋ ಕೈತುಂಬ
ಇಡುವಾಗ ಬಾಯಲ್ಲಿ ಕಚ್ಚಿದ್ದೆ ಬೆರಳನ್ನೆ
ಹೌಹಾರಿ ನೀ ಚೀರಿ ಗುದ್ದಿದ್ದೆ ಮುಷ್ಟೀಲಿ
ರಸಬಾಳೆ ಆ ಕೆನ್ನೆ ನೀ ತೊಯ್ಸಿ ಅತ್ತಿದ್ದಿ
ಆ ಕಣ್ಣೀರೆಲ್ಲ ಈ ನೆಲದಲಿ
ಮಡುವ ಮಾಡಿ ತೋರಿತು
ನೀನಿಲ್ಲದ ಈ ಶಾಲ್ಮಲೆ
ಬತ್ತಿದ್ಯೆ ಹರಿಯದೆ

ನೀನು ನನ್ನ ಕಾಯುವಾಗ
ಕೆರೆದ ನೆಲವು ತಗ್ಗು ತಗ್ಗು
ಕಳ್ಳಹೆಜ್ಜೆ ಹಾಕಿ ನಾನು
ನಿನ್ನ ಕಣ್ಣು ಮುಚ್ಚುತ್ತಿದ್ದೆ
ಸಿಡುಕಿನಲ್ಲಿ ನನ್ನ ಚಿವುಟಿ
ಮುಖವ ಊದಿ ಕೂಡುತ್ತಿದ್ದೆ
ನೀನಿಲ್ಲದೆ ಈ ಆಟವೂ
ಕಣ್ಣು ಕಟ್ಟಿ ಕುಣಿವುದು

ಬರುವೆನೆಂದು ನೀನು ನುಡಿಯೆ
ಕಾಯುವಲ್ಲಿ ಸಿಹಿಯೇ ಇತ್ತು
ರಾತ್ರಿಗಿಂತ ಹಗಲು ಚೆನ್ನ
ಹಗಲಿಗಿಂತ ರಾತ್ರಿ ಚೆನ್ನ
ಜೀವವಿದ್ದ ಈ ಗಡಿಯಾರಕೆ
ಎಷ್ಟು ಬಾರಿ ಪರೀಕ್ಷೆಯು
ನೀನಿಲ್ಲದ ಈ ಪರೀಕ್ಷೆಯು
ಯುಗ ಪರೀಕ್ಷೆ ತಂದಿದೆ

ನನ್ನ ನಿನ್ನ ಒಂದುತನದಿ
ಹೇಗೋ ಏನೋ ಬಾಳು ಎಂದೆ
ಹರಿಯ ಮುಡಿಯ ನಿನ್ನ ಜಾತಿ
ಹರಿಯ ಅಡಿಯ ನನ್ನ ಜಾತಿ
ಆ ಜಾತಿ ಯಾಜಾತಿ ಎನುತ ನೀನು
ಮನುಜ ಜಾತಿ ನಮ್ಮದೆಂದೆ
ನೀನಿಲ್ಲದ ಈ ಬೀದಿಲಿ
ಜಾತಿ ಭೂತ ಕುಣಿದಿವೆ

ನನ್ನ ನಿನ್ನ ಬಾಳಿನಂತೆ
ನಡೆದಿವೆ ಇಲ್ಲಿ ಸಂತೆ
ಅಂತೆ ಕಂತೆ ಜನರ ಕಿವಿಗೆ
ಮರೆತಂತೆ ನಮ್ಮ ಬಾಳು
ಕಾಲ ಕಾಲಕೆ ಇದುವೇ ಸಮರ
ಉಳಿಯಲಿಲ್ಲ ಶೇಷವು
ನೀನಿಲ್ಲದ ಈ ಕವಿತೆಗೆ
ಜೀವ ಮೂಡಿ ನಿಂತಿದೆ

ನೀನಿಲ್ಲದ ಈ ಮನ
ಮರುಭೂಮಿಯಾಗಿದೆ
ನೀನಿಲ್ಲದ ಹೂ ಬನ
ಉಳಿಯಲಿಲ್ಲ ಮರುಕ್ಷಣ.

□

## ಗೋಲಿಬಾರ್ - ೧೯೮೦

ಮುದ್ದೇಬಾಳ ಊರಾಗ ನೋಡ
ಆಗೈತಿ ಗೋಳಿಬಾರ
ಊರಿಗಿ ಊರೆಲ್ಲ ತೋಳಿತೈತಿ ನೋಡ
ಕಣ್ಣೀರ ಕೈಯ ಒಳಗ || ಪಲ್ಲ ||

ತಿನ್ನು ಕಾಳ ಕಡಿಯ ಧಾರಣೆಯ ಏರಿ
ಬಡವರಿಗೆ ಬಂತ ವನವಾಸ
ಸರಕಾರದವರಿಗೆ ಕೈ ಮುಗದ ಕೇಳದ್ರ
ಧಾರಣೆಯ ಇಳಸ ಅಂತ
ಬಡವರ ಬಾಯಾಗ ಮಣ್ಣ ಬಿದ್ದ ಮ್ಯಾಲಿ
ಬಂಡೇಳುದು ಎಷ್ಟು ಹೊತ್ತ
ಬಂಡ ಎದ್ದ ಮ್ಯಾಲಿ
ಗುಂಡ ಹಾರಿಸಿ ಕೊಂದರು ಐದ್ ಜನಕ

ಬಂಡೆದ್ದ ಬಳಗ ಕೇಕಿಯ ಹಾಕಿ
ಮುರದಾರ ಗುದಾಮ ಕೀಲಿ
ಒಳಗಿದ್ದ ಚೀಲ ಬಾಯಿಯ ಬಿಚ್ಚಿ
ಹಂಚ್ಯಾರ ಕಾಳ ಕಡಿ
ಕಿಡಗೇಡಿಯ ಹುಡುಗನೊಬ್ಬನು ಇಟ್ಟನಪ್ಪ ಕೊಳ್ಳಿ
ಹಾವಿನಂಗ ಹೆಡಿ ಎತ್ತಿ ಉರಿಯುತು ಉರಿನಾಲ್ಗಿ ಬೆಂಕಿ
ಅಲ್ಲಿ ಅಲ್ಲಿಯೇ ಆಯಿತು ನೋಡು
ಅದೇ ರೀತಿ ಬೊಬ್ಬಿ

ಖಾಕಿಯ ತೊಟ್ಟವರು ಖಾವ ಬಾಳ ಏರಿ
ಏರಸ್ಯಾರ ಬಂದೂಕ ಗುಂಡು
ಹೋಗುವ ಹುಡುಗರಿಗಿ ಕರ ಕರಬ ಹೊಡದ್ರ
ಉಂಡಾಡು ಮಕ್ಕಳಿಗೆ ಬಡ್ಡ

ವಿಲಿವಿಲಿಯ ಒದ್ದಾಡಿ, ರಕ್ತವ ಕಾರಿ
ಸತ್ತಾರ 'ಯವ್ವ' ಅಂತ
ಸತ್ತಬಿದ್ದ ಮ್ಯಾಲಿ
ಬಂಡ ಎದ್ದ ಬಳಗ ಆಯಿತು ದಿಕ್ಕಾಪಾಲ

ಗುಂಡಿನ ಸಪ್ಪಳಕ ಹೌಹಾರಿ ಮಂದಿ
ಮಗ ಅಂತ ಓಡಿ ಹೋದ್ರ
ಖಾಕಿಯ ಅರವೆವರು ತೋಳೇರ್ಸಿ ಹೊಡದ್ರ
ಲಾಟಿಲೇ ಬೆನ್ನ ಬೆನ್ನ
ಮಗ ಸತ್ತ ಮ್ಯಾಲಿ ಯಾವ ಹೊಡತೇನಃ
ಬೆನ್ನ ತೊಗಲ ಕಿತ್ತಿತ್ವಾದ್ರೂ
ಖಬರಹಾರಿ ಅವರು ಓಡಿ ಹೋದರ
ಸರಕಾರ ದವಾಖಾನ್ಯಾಗ

ಸತ್ತ ಬಿದ್ದ ಹೆಣ ತೇಲುತಿದ್ದ ನೋಡು
ರಕ್ತದ ಮಡುವಿನ್ಯಾಗ
ಅರ್ಧಮರ್ಧ ಜೀವ ಇದ್ದವ್ರ ನೋಡು
ಎದ್ದೆದ್ದು ಬೀಳತಿದ್ರ
ಬಾಯಿ ಹರ್ದ ಹೋದ ಹುಡುಗ ಒಂದು
ಎದಿ ಎದಿ ಬಡಕೋತ್ತಿತ್ತ
ನೋಡಾಕ ಬಂದ ನಿಂತ ಮಂದಿ ಎಲ್ಲರೂ
ಹಾಕತ್ತಿದ್ರು ಕಣ್ಣೀರ

ತಂದಿ ತಾಯಿ ಬಂದು ಹುಡುಕಿದ್ರ ಮಗಗ
ಸಿಗಲಿಲ್ಲ ಹೆಣದ ಗುರುತ
ಅರವಿಯ ಮ್ಯಾಲ ಗುರುತಾವ ಹಿಡದ್ರು
ಅರವೆಲ್ಲ ರಾಮರಗುತ
ಎದಿ ಎದಿಯ ಹೊಡ್ದು ನೆಲಕುರುಳಿ ಬಿದ್ದು
ಅಳತಾರ ತಂದಿ ತಾಯಿ
ಮಾಡಿದವ್ರು ಯಾರು ಸತ್ತವ್ರು ಯಾರು
ಊರಿಗೂರೆ ಅಂಬು ಮಾತ.

# ಹುಚ್ಚೆದ್ದು ಕುಣಿದಾವು ನವಿಲ

ಬಿದ್ದಾವು ಕನಸುಗಳು ಹಗಲ
ಹುಚ್ಚೆದ್ದು ಕುಣಿದಾವು ನವಿಲ ॥ ಪಲ್ಲ ॥

ಗರಿಗರಿಯ ಬಿಚ್ಚಿ ಕಾಮನ ಬಿಲ್ಲು
ನಡು ಪರಿಯ ಹರಿದು ಹೂಮಳೆ ಸುರಿದು
ಕಲ್ಲುಗಳು ಒಡದಾವ ಮೊಳಕಿ
ಕೊರಡುಗಳು ಚಿಗತಾವ ಬೆದಕಿ

ಖಡ್ಗ ಕಿರೀಟಗಳುರುಳಿ ಬೂಟು ಓಟುಗಳುರುಳಿ
ಬಿಳಿ ಆನೆಗಳು ಉರುಳ್ಯಾವು ಪೂರಾ
ಪೆಗಾಸಸ್ಸನ್ನು ಹಿಡಿದು ಜಟಕಾ ಬಂಡಿಗೆ ಹೂಡಿ
ಕಲಿಸಿತ್ತು ನೆಗುವುವುದು ಪೂರಾ

ಕಪ್ಪೆಚಿಪ್ಪುಗಳಲ್ಲಿ ಮುತ್ತು ರತ್ನಗಳುಂಟು
ಮೂಡ್ಯಾವೂ ತಿಪ್ಪೆಯಲಿ ಹೊಳೆದು
ಕ್ಕೊ ಕ್ಕೊ ಕ್ಕೋ ಎಂದು ಕೂಗ್ಯಾವು ಗುಡುಗ್ಯಾವು
ಸುಡುಗಾಡದೊಳಗೂ ಮುಂಜಾವು

ಕೋವಿ ಬ್ಯಾನಟ್‌ಗೆ ಉಯ್ಯಾಲೆ ಕಟ್ಟಿ
ಜೋಗುಳವ ಹಾಡಿತ್ತು ಒಡಲ
ನ್ಯೂಟ್ರಾನು ಬಾಂಬುಗಳು ಗೋಲಿಯ ಮಾಡಿ
ತಗದಾವು ಮಕ್ಕಳು ಫಸಲ

ಬೆಂಕಿಯ ಮಳೆಯಿಲ್ಲ ಬಣ್ಣಾ ಸಾಲುಗಳಿಲ್ಲ
ಹಾಸ್ಯಾದ ಹಚ್ಚಡಕ ಒಪ್ಪ
ಮನೆ ಮನೆಯ ಒಳಗೂ ಊರೂರು ಹೊರಗೂ
ಉರದಾವು ನೀರಾಗೂ ದೀಪ.

□

## ಸಾವುಗಳ ಹಬ್ಬ

ಹೊಲೆ-ಮಾದಿಗರ ಮನೆಯ ಬೆಕ್ಕೊ
ನಿನ್ನಿಲ್ಲದ ಮೊನ್ನಾರ ಸತ್ತೊ ॥ ಪಲ್ಲ ॥

ನೂರಾರು ಕುರಿ ಕೋಣ ಕೋಳಿಯ ಬಲಿಕೊಟ್ಟು
ಪಡೆದ್ದಂತ ಮುದ್ದಿನ ಬೆಕ್ಕೊ
ಹರೆಯಾದ ವಯಸ್ಸು ಮುರಿಯುವ ಮುನ್ನ
ಮುಪ್ಪೊಡೆದು ಸತ್ತಂತ ಬೆಕ್ಕೊ

ಅರೆಹೊಟ್ಟೆ ಬರಿಮೈಯಲಿರುವಾಗ ಜೊತೆಗಿದ್ದು
ಕಲ್ಲು-ಮರಕೆ ಸುತ್ತಿದ ಬೆಕ್ಕೊ
ಗೌಡರ ಆಳು ಎಳೆದೆಳೆದು ವಯ್ಯುವಾಗ
ನೆಲ ಬಡೆದು ಅತ್ತಂಥ ಬೆಕ್ಕೊ

ನರನರವ ಬಿಗಿಹಿಡಿದು ನೆಲದಲ್ಲಿ ನಡೆದಾರು
ಅಪಶಕುನದ ಬಾಯಿಗೆ ಅಡಿಕ್ಯಾದ ಬೆಕ್ಕೊ
ಹುಲಿಯಂತೆ ಕಂಡಾರು ಬೆಕ್ಕಂತೆ ಬದುಕದೆ
ಮೀಸೆಗೂ ದಂಡ ತೆತ್ತಂಥ ಬೆಕ್ಕೊ

ಎಳ್ಳಿನ ಗಾಣದಲಿ ಎಣ್ಣೆಯ ತೆಗೆವಾಗ
ಹಿಪ್ಯಾಗಿ ಬಿದ್ದಂಥ ಬೆಕ್ಕೊ
ಎಣ್ಣೆಯ ಮಾರವಳು ಒಳಗೊಳಗೆ ಅಳುವಾಗ
ಉತ್ತರಿಮಳೆ ತಂದ ಬೆಕ್ಕೊ

ಹಾರೋರ ಕೇರಿಯಲಿ ಹಾಲನ್ನು ಕುಡಿವಾಗ
ದೊಣ್ಣೆಯ ಪೆಟ್ಟು ತಿಂದ್ದಂಥ ಬೆಕ್ಕೊ
ಬಚ್ಚಲು ಮೋರಿಯಲಿ ಇಲಿಯನು ಕೊಲ್ಲುವಾಗ
'ಸೈ' ಎನಿಸಿಕೊಂಡಂಥ ಬೆಕ್ಕೊ

ಅಳುವವರು ಇದಕಿಲ್ಲ ಹೊರುವವರು ಇದಕಿಲ್ಲ
ಬೀದಿಯ ಹೆಣವಾದ ಬೆಕ್ಕೊ
ಹೋಗುವವರು ಬರುವವರು ಮೂಗ ಮುಚ್ಚಿ ಬೈದರೂ
ಕಿವಿತಗೆದು ಕೇಳಿದ್ದಂಥ ಬೆಕ್ಕೊ

ಬಿಳಿಬದುಕ ಕರಿಬೆಕ್ಕ ಕೊಂದವರು ಯಾರು?
ಬಾಗದ ಎಲುವು ಮುರಿದವರು ಯಾರು?
ಕೂದಲು-ನಾಲಿಗೆ ಕಿತ್ತಿದವರ್‍ಯಾರೊ?
ಸೀರೆಯ ಸೆರಗಲ್ಲಿ ಸುಟ್ಟಿದ್ದು ಯಾರೊ?
ನೆತ್ತಿಯ ನೆರಳನ್ನು ಕದ್ದದ್ದು ಯಾರೋ?
ತುಂಬಿದ ಮೈಖಂಡ ನುಂಗಿದವರ್‍ಯಾರೊ?
ಬಿಡಿಸ್ಲೇಳಿ ಕರಿಬೆಕ್ಕ ಒಗಟು
ಮನುಜರೇಽ
ಅಲ್ಲಿಹುದು ನಮ್ಮ ಬಾಳ ಸಂಕ್ಟ

ಕರಿಕೂದಲಿನ ಬೆಕ್ಕೊ
ಸರದಿಗೆಽ
ಇಂದು-ನಾಳೆ ಮತ್ತೊಂದು ಬೆಕ್ಕೊ
ಇನ್ನೊಂದು ಬೆಕ್ಕೊ.

## ನಾದ ನಿನಾದ

ಹಾಡೇ ಹಾಡು ಹಾಡಿನರ್ಥ
ಬದುಕ ಹಾಡೇ ಭಾವದರ್ಥ ॥ ಪಲ್ಲ ॥
ಭಾವವಿಲ್ಲದ ಹಾಡು ಉಂಟೆ
ಹಾಡು ಹಾಡದ ಹಕ್ಕಿಯುಂಟೆ ॥ ಅನುಪಲ್ಲ ॥

ಮೊರೆವ ಕಡಲಿಗೆ ಗುರಿಯು ಉಂಟೆ
ಬೀಸು ಗಾಳಿಗೆ ಕೊನೆಯು ಉಂಟೆ
ಇರುವುದೆಲ್ಲವು ಕಾಣದೇಕೆ?
ಇಲ್ಲದರ್ಥಕೆ ತಡಕಲೇಕೆ?

ನಾದ ಆದಿ ನೀ ಹಾದಿ ಆದಿ ನೀ
ನಿನದ ನದಿ ನೀ ಆದಿ ಆದಿ ನೀ
ನಾದ ಮೇಧಿನೀ ವಾದ ಮೋದಿನಿ
ನಾದ ನೀ ಅನುನಾದನೀ ಜಗನ್ನಾದನೀ

ಮರದ ಸ್ವರದಲಿ ಗಾನ ನಿನಾದ
ಹರಿವ ಹೊಳೆಯಲಿ ನಿನದ ತಾನ
ಗಾಳಿ ಬೆಳಕಲಿ ರಾಗಾಽಲಾಪ
ಸೂರ್ಯ ಚಂದ್ರರೆ ಕಾಲದೀಪ

ದನಿಯ ದನಿ ನೀ ಧ್ವನಿಯ ದನಿ ನೀ
ದನಿಯ ಧನಿ ನೀ ಪ್ರತಿಧ್ವನಿ ನೀ
ಪದದ ದನಿ ನೀ ಪಾದ ದನಿ ನೀ
ಜನದನಿ ನೀ ಜನಪದ ಧ್ವನಿ ನೀ

ಅರ್ಥದ ಅರ್ಥಕ್ಕೂ ಏನರ್ಥ?
ಹುಡುಕುವದಿಂತು ವ್ಯರ್ಥಾವರ್ತ
ನೀನೆ ಸ್ವಾರ್ಥ ನೀನೇ ಪ್ರತ್ಯರ್ಥ
ನೀನೆ ಪಾರ್ಥ ನಿನಗೆ ನೀ ನಿತ್ಯಾರ್ಥ.

# ಮೂರನೆಯ ಕಣ್ಣು

## ಚಟ್ಟ ತೊಟ್ಟಿಲಭೂಮಿ

### ಕಾವ್ಯ ಬಾಲೆ

ಈ ಮೂಕನಿಗೆ ಬಾಯಿ ಕೊಟ್ಟು
ನೀ ಹೋದೆ ಎಲ್ಲಿಗೆ?

ಉಡಿತುಂಬ ಕಾಡಹೂ ತುಂಬಿ
ಮುಡಿಗೆ ಮುಡಿಸಿದೆ ಮಲ್ಲಿಗೆ
ಹೂ ಗಂಧವ ಚೆಲ್ಲಿ ಅಲ್ಲಿ ಇಲ್ಲಿ
ನೀ ಹೋದೆ ಎಲ್ಲಿಗೆ?
ಸತ್ತಿರುವೆಯೊ ಇಲ್ಲ ಬದುಕಿರುವೆಯೋ
ಬದುಕಿದ್ದರೆ ನಿನ್ನತನವನು ತೋರಿಸೇಳು
ತರತರದ ಸೀರೆಗಳ ತಂದಿರುವೆ ತೊಡು ಏಳು

### ಕಾವ್ಯ ಗಂಗಾ

ಬೆಳದಿಂಗಳಲಿ ಬೀದಿಗೆ ಬಂದ ಕಾವ್ಯ
ಬೆಳ್ಳಿಚುಕ್ಕಿ ಮೂಡುವ ಮುನ್ನ
ಬಯಲಿಗೆ ಬಂದು ಬಯಲಾಯಿತು
ಪೊರಕೆ ರೆಪ್ಪೆಗೆ ಗಡ್ಡ ಬಳೆ ದಾರಗಳು
ಮೊಳಕೆಯಲಿ ಒಂದೇ ತಟ್ಟೆಯಲುಂಡು ಕೈ ತೊಳೆದವು
ಎಲ್ಲ ಉನ್ಮತ್ತ ಗತಿಯ ಗತ್ತು
ಆದರೂ ಹೇಳುತ್ತಿದ್ದ ಜೋಯಿಸ
ಊರಿಗೆ ಬಂದವಳು ನೀರಿಗೆ ಬರಲಾರಳೆ?

### ಕಾವ್ಯ ಸಹೋದರಿ

ತಮ್ಮ ಮನೆಯ ನೀರ ತಂದು ತೊಳೆದರು
ದೇಶಭಕ್ತಿಯ ನೆಂಟರು
ಕಡಲ ನೀರು ಗಿಂಡಿಯಲಿ ತಂದು ತೊಳೆಯಲ್ಹೋಗಿ ಸೋತರು

ಪ್ರಗತಿಪಂಥದ ಭಂಟರು
ನಾನು ಯಾರು? ನಮ್ಮಪ್ಪ ಯಾರು? ನಾನೇ
ಅಭಿಜಾತ ಜಾತಕದಲ್ಲಿಯೇ ಆರಳಿದ
ಸ್ವಯಂಘೋಷಿತ ಪಾಪದ ಬೀಜ
ಪ್ರತಿಭಟನೆಯ ಭೂಪರೋ
ಒಳಚೆರಂಡಿ ಹೊರತೆಗೆದು, ಊರೆಲ್ಲ ಹಾಸಿ
ಪ್ಯಾಂಟು-ಶರ್ಟಿನ ತೋಳು ಏರಿಸಿ
ಸಾಕವ್ವಳ ಕೇರಿಯ ನೀರು ತಂದು
ಶುಚಿಗೊಳಿಸಲು ನಿಂತೇ ಇದ್ದಾರೆ, ಎಲ್ಲರಿಗೂ ಕಾಣು
ಬಂಡಾಯದ ಬೀದಿ, ಸ್ಮಶಾನದ ಯಾತ್ರೆ
ಊರ ಸೇರಲಿಲ್ಲ
ಭೂಮಿ ಬಿರಿಯಿತು-ಬೆಸೆಯಲಿಲ್ಲ
ಚೋಮನ ದೊಡ್ಡಿಯವರೆಗೆ ಶತಮಾನಗಳುದ್ದಕ್ಕೂ
ಮೊಲವನ್ನು ಬೆನ್ನಟ್ಟಿ ಬಂದ ತೋಳ
ಗಲ್ಲಿಗೆ ಕಾಲಿಡುತ್ತಿದ್ದಂತೆ
ಮೊಲವೇ ಹುಲಿಯಾಗಿ ತೋಳವನ್ನು ಬೆನ್ನಟ್ಟಿತು!

ಒಳಗೊಳಗೆ ತೋಳಗಳು ಆವು ಚರ್ಮವ ಹೊತ್ತು
ಬೆನ್ನೆಲುಬಿನ ಘೋಷಣೆ
ದೊಡ್ಡಿಯಲ್ಲಿ ನಿಂತು ಹೋ ಹೋ ಸದ್ದೋ ಸದ್ದು
ನಡುವೆ ನಿಂತ ಬೇಲಿ ಕರಗಿ, ನಾಯಿ ಕೊಡೆಯಾಗಿ
ನೀರಿನಂತೆ ನಿಂತರು
ನೀರು ನೊರೆ ನೊರೆಯಾಗಿ ಹರಿದು
ಗುಡಿಸಲಲ್ಲಿಯ ಮೊಲ ಬೆಕ್ಕು ನಾಯಿ
ಮೆರವಣಿಗೆಗೆ ನಿಂತ ಇರುವೆ ಸಾಲು
ತರಗೆಲೆಯಾಗಿ ತೇಲಿ ತೇಲಿ, ಒಡೆದು ದಿಕ್ಕಾಪಾಲಾದವು
ಟೈ ಒಬ್ಬರ ಕೊರಳಿಗೆ ಹಗ್ಗ ಇನ್ನೊಬ್ಬರ ಉರುಳಿಗೆ.

## ಕಾವ್ಯ ಕುಂಕುಮ

ನೀ ಗರತಿಯಾಗಿದ್ದವಳು ಬೀದಿಗೆ ಬಿದ್ದ ಸೂಳೆಯಾದೆ
ಏಡ್ಸ ರೋಗಿನಿಂದ ಬಾಗಿ
ಹನ್ನೆರಡರ ಹರೆಯದಲ್ಲೇ, ಗೂನುಬೆನ್ನಿನ ಮುದುಕಿಯಾದೆ!

ಬಂದೂಕಿನ ಬಾಯಿಯಲಿ ಗುಬ್ಬಿಗೆ ಗೂಡು ಕಟ್ಟುವ ಕನಸು
ನನ್ನ ನಿನ್ನ, ಅವನ ಇವನ, ಇವಳ ಅವಳ, ಅವರ ಇವರಂತರಂಗದಲಿ
ಬಂದೂಕಿನ ಸಹಿತ ಬ್ಯಾನೆಟ್ಟನು ಮಸೆಯದೇ ಬಂತು

ಕೂಳಿಲ್ಲದ ಗುಡಿಸಲುಗಳು ಯಜ್ಞವಾದವು
ದನಿಯಿಲ್ಲದ ಬಾಯಿಗೆ ಹೇಲುಚ್ಚಿ
ಕುದುರೆ ಮೋಶಿಗೆ ಬಲವಿಲ್ಲದ ಬಳ್ಳಿಯ ಬಲಿ
ಅಕ್ಷರಗಳಿಗೆ ಹುಬ್ಬು ಹೆಬ್ಬೆರಳುಗಳ ಬಲಿ
ಬಾಗಿಲಿಗೆ ಬಾಗಿಲು ಎದುರಾದರೆ ಚೋಮನ ಕೇರಿಗೆ ಬಹಿಷ್ಕಾರ
..........................................

ಹಸಿಯೇ ಇಲ್ಲದ ಮಣ್ಣು ಕಲ್ಲುಗಳ ಬೆಸುಗೆ
ಮೇಲೆ ಗಾಳಿಗ್ಹಾರುವ ಚಪ್ಪರ, ಕೆಳಗೆ ತಾಯ್‌ನೆಲವೇ ಇಲ್ಲ
ಒಳಗೊಳಗೇ ಹೊಗೆಯಾಡಿ,
ಹಾಳುಮಣ್ಣಿನ ಗೋಡೆಯ ತುಂಬ ಇಲ್ಲಣದ ಕಲೆಗಳು,
ಬರಿ ಗುಡುಗು ಸಿಡಿಲಿಗೆ, ಮಳೆ ಬಂದು ಮೊಳಕೆ ಒಡೆದೀತೇನು?
ಬರಿ ಮೋಡಕಟ್ಟಿ, ಕಾಮನಬಿಲ್ಲು ಹುಟ್ಟಿ,
ಕೋಗಿಲೆ ಪಾರಿವಾಳಗಳ ದಿಬ್ಬಣ ಹೊರಟೀತೇನು?
ಕಣ್ಣಿಗೆ ಕನ್ನಡಕ ಬೇಕಿಲ್ಲ-ಕಣ್ಣು ಬೇಕು
ಎದೆಗೆ ಕರ್ಣಕವಚ ಬೇಕಿಲ್ಲ ಹೃದಯ ಬೇಕು.

## ಕಾವ್ಯ ಮಾತೆ

ಕುಡಗೋಲಿನ ಆ ಕೆಂಪುಸೀರೆಯಲ್ಲಿ
ನಿನ್ನ ಮುಟ್ಟಿನ ರಕ್ತ ಯಾವುದು, ನಿನ್ನ ರಕ್ತ ಯಾವುದು
ನಿನ್ನ ಮಕ್ಕಳ ರಕ್ತ ಯಾವುದು
ಮಲಮಕ್ಕಳ ರಕ್ತ ಯಾವುದು ಹೇಳಬಲ್ಲೆಯೇನು?
ತಾಯೇ, ಇದು ಕ್ಲಾಸ್ ವಾರ್ ಅಲ್ಲ; ಕ್ಯಾಸ್ಟ್‌ವಾರ್
ಕಡಲು ಬತ್ತಿದರೂ ಕಡಲ ನೆಲ ಬತ್ತದು

ಮಂದಿರದ ಮೇಲಿನ ಧ್ವಜ, ಮಸೀದಿಯ ಮೇಲೆ ಹೇಗೆ ಬಂತು?
ರಾಮ ರಹೀಮರ ರಕ್ತ ಯಾವುದು ಗುರುತಿಸಬಲ್ಲೆಯಾ?
ಇಲ್ಲಿ ತೊಗಲ ಪತಾಕೆ ಪೊರಕೆಯ ಮೇಲ

ಅಲ್ಲಿ ಶಿವದಾರ-ಜನಿವಾರ-ಉಡುದಾರ-ಮುಡುದಾರ
ಅಡ್ಡ-ಉದ್ದ ಪಲ್ಲಕ್ಕಿಗಳ ಸಂ-ಮೇಳ
ಅಗೋ ಅಲ್ಲಿ ; ಗಡ್ಡ-ಚಡ್ಡಿಗಳ ಮೆರವಣಿಗೆ

ಭವಿಷ್ಯತ್ತಿನ ಬದುಕಿಗೆ ವರ್ತಮಾನ ಸಮರ್ಪಿಸಬೇಕು
ಭೂತದ ಗರಿ ಹಿರಿದು ಎಳೆಎಳೆಯ ಅರಿಯಬೇಕು
ತೊಳೆಯಲಾಗದು ರಕ್ತದ ಕೈ ರಕ್ತದಿಂದ
ಹುಡುಕಬೇಕಿದೆ ಹೊಸ ನೀರಿನ ಸೆಲೆ ಈಗಿಂದ.

ಕಾವ್ಯ ಮುದಿ-ಜವ್ವನೆಯೇ ;

ಬಾಯಿ ಮುಚ್ಚಿದ ಮಣ್ಣಿನ ಗಡಿಗೆಯಲಿ
ನೀರೂ ಕುದಿಯುತ್ತಿದೆ
ನೀರು ಕಾಯಿಸುವ ನೆಪದಲಿ
ವಿದೇಶಿ ಸೌದೆಯೋ ಸೌದೆ-ಬಂದು ಬೀಳುತ್ತಿದೆ
ಹೊರಗಿನ ಉರಿ : ಒಳಗಿನ ಧಗಿ
ಯಾವಾಗ ಸಿಡಿಯುತ್ತದೆಯೋ ಈ ಗಡಿ-ಗೆ ಗೊತ್ತಿಲ್ಲ!

ತಣ್ಣಗಾಗಿಸಬೇಕೆ ಒಳಗಿನ ನೀರು
ಆರಿಸಲು ಹೊರಗಿನ ಚಿತೆ ಜೋರು
ಮುಚ್ಚಳ ಮೇಲ್ಹಾರಲು ಹರಿದಾರಿ ದೂರ
ಸುಮ್ಮನಿದ್ದರೆ ಯಾರ್‍ಯಾರದೋ ದರ್ಬಾರು

ಕಾವ್ಯ ದೇವತೆಯೆ,
ತಾ ಕೈ ತಾ
ದುರ್ಬಲನೆಂದು ದೂರದಿರು
ಜರಿದವನೆಂದು ಜರೆಯದಿರು
ಗೋವು ಎತ್ತು ನೊಗ ಹೊತ್ತು
ಎಳೆದೆಳೆದು ಸೋತಿದೆ ಗೊತ್ತು

ತಾ ಕೈ ತಾ
ಮಾಡಿದ ಗಾಯಕೆ ಮುಲಾಮ ಹಚ್ಚುವೆ
ಮೂಗಿಗೆ ಬೆಣ್ಣೆ ಹಚ್ಚಿದ ಬೆಕ್ಕಿನಂತೆ ತಿರುಗಿಸಬೇಡ
ನಿನ್ನೊಂದಿಗೆ ನನ್ನನ್ನೂ ಸಾಯ ಬಿಡಬೇಡ

ಸಾಯುವ ಮುನ್ನ ನಿನ್ನನೆತ್ತಿ ಬಾಲೆಯಂತಾಡಿಸಿ ಸಾವ ಬಯಕೆ
ಬಾಯಿ ತೆರೆವ ಮುನ್ನವೇ ನನ್ನ ನುಂಗಿಬಿಡು

ಸಿದ್ಧನಿರುವೆ ಬೈ
ಏನಾದರೂ ಗೈ
ಎಲ್ಲದಕ್ಕೂ ಸೈ
ಇಲ್ಲ : ತಾ ಕೈ.

□

## ಗಂಡಭೇರುಂಡ

೧

ಯಜ್ಞದ ಕುದುರೆಗಳನ್ನು ಹಿಡಿದು
ಜಟಕಾಬಂಡಿಯ ಕುದುರೆಯಾಗಿಸಲು ಹೆಣಗಿ
ತಾನೇ ಯಜ್ಞದ ಕುದುರೆಯಾಗಿ ಮೆರೆದು.....
ಕವಲೆತ್ತಿನ ಬಸವನಾದುದು ಇತಿಹಾಸ,
ಯಾಗ ಮುಗಿದ ಮೇಲೆ ಯಜ್ಞದ ಕುದುರೆಯೂ ಬಲಿಪಶು!
ಒಂದೊಂದು ಭಾಗಕ್ಕೂ ಕಟಿಬದ್ಧ ಬೇಡಿಕೆಯ ವಿಧಿ
ಇದೇ ವರ್ತಮಾನ ಇದೇ ಆವರ್ತನ ಇದೇ ವಾಸ್ತವ

೨

ಕುಕ್ಕಿ ತಿನ್ನುವ ರಣಹದ್ದು
ರೆಕ್ಕೆಯನ್ನು ಕಳೆದುಕೊಂಡು
ಕಪ್ಪೆಯಾದುದು ಪವಾಡವೆ!
ಕೋಗಿಲೆಯ ಇರುವೆಸಾಲಿನ ಅವತಾರಕೆ
ಗುಡುಗು ಸಿಡಿಲು ಮಿಂಚು ಮಳೆಯ ವರಬಾಣ
ಪಳೆಯುಳಿಕೆಯನ್ನು ಉಳಿಸಿಕೊಂಡ ಹದ್ದುಗಳು
ಗೊರವಂಕಗಳಾದುದು
ಪಾರಿವಾಳಗಳು ಗುಬ್ಬಿಗಳಾದುದು ಕಾಲಪುರುಷನ ಮಹಿಮೆಯೆ!

ಕೋಗಿಲೆ ಜಂಬು ನೇರಳೆಯ ಮರಕೆ
ಪಾರಿವಾಳ ಮಾವಿನ ಮರಕೆ
ಗೊರವಂಕ ಪೇರಲ ಮರಕೆ ತಬ್ಬಿ
ಹಾಡಿದ್ದೆ ಹಾಡು ತುಳಿದದ್ದೆ ದಾರಿ
ಕೂಡಿದ್ದೇ ಮಾರ್ಗ ಹುಟ್ಟಿದ್ದೆ ಬೀಜ
ಮಾತಿನ ಮತ್ತೆ ಹೆಂಡ, ಮಾನದಂಡಗಳೆಲ್ಲ ದಂಡ
ನೀತಿ ಹೇಳುವವನೆ ಷಂಡ, ಬಾಯಿ ಇದ್ದವನೆ ಗಂಡ

೩

ಮಟ ಮಟ ಮಧ್ಯಾಹ್ನದ ಒಂದು ದಿನ
ಬಿಸಿಲಿಗೆ ಮಾಗಿಹಣ್ಣುಗಳ ರಸವೊಡೆದು
ಬಣ್ಣಗಳ ನಡುವೆ ಬಣ್ಣ ಬೆರೆಸಿ ಕೆಂಡ
ಮೊಗೆಮೊಗೆದು ಅಮೃತವ ಕುಡಿದವು ಹಕ್ಕಿಗಳು
ಹಾರಲಾಗದೆ ಮತ್ತಿನಲ್ಲಿ ಕರಗಿದವು ಪಕ್ಷಿಗಳು

ಏನು ಮೋಹ ಎಂಥ ಕಾಯ
ಎಂಥ ಸ್ಫಟಿಕದ ಕಿರಣ
ಹರಣ ಹಾರದ ಮರಣ
ಏನು ಜಾದು ಎಂಥ ಮಾಯ
ಬೆಸೆದು ಹೋದವು ಮುಂಡ
ಬೇರೆ ಉಳಿದವು ರುಂಡ
ಅದೇ ಗಂಡಭೇರುಂಡ!

ಹರಿದಿತ್ತು ಪ್ರಾಣವಾಗಿ ಕೋಗಿಲೆಯ ಜೀವ
ಉಳಿದಿತ್ತು ಪೂರ್ವಾಶ್ರಮದ ಎಳೆಗೀಲು
ಬಂಡೆಯೊಡೆದು ನೀರು ಚಿಮ್ಮಿಸುವ ಆಸೆ
ಕೊರಡು ಕೊನರಿಸುವ ಹುರಿಮೀಸೆ
ಭೂಮಿತುಂಬ ಬಿಳಿ ಹೂವುಗಳ ಬೆಳೆಯುವ ದಾಹ
ಹರಿಯುವ ನೀರೆಲ್ಲ ಶುದ್ಧ
ತಮಗೆ ತಾವೇ ಬದ್ಧ
ಬುದ್ಧ-ಎದ್ದ-ಸಿದ್ಧ.

೪

ಪ್ಯಾಂಥರ್‌ಗಳ ಗುಡುಗು
ದಿಗಂಬರಗಳ ತೊಡಗು
ಸಮುದ್ರದಲೆಯಾಗಿ ಮೊರೆತು ಮರೆತಿದ್ದವು
ಕನ್ನಡದ ಪಾತಾಳದಲ್ಲಿದ್ದ ಹಸ್ತಗಳು
ಕತ್ತಲೊಂದಿಗೆ ಮಾತಾಡುತ್ತಿದ್ದವು
ತನ್ನ ಗಂಡಭೇರುಂಡ ಜನ್ಮಕೆ
ತಾನೆ ಬೆನ್ನು ಚಪ್ಪರಿಸಿಕೊಂಡ ಹಮ್ಮು.

ಗುಡುಗು ತೊಡಗುಗಳಿಗೆ
ಅತ್ತ ಹರಿಯದ ಇತ್ತ ಸರಿಯದ
ರಬ್ಬರ್ ಹಾವೆಂದು ಬಿರುದು ಕೊಟ್ಟ ಹರೆಯ
ಹುಲಿಯಾಗಿ ಗುಡುಗಿ ಉಬ್ಬಿಸಿದ ತೊರೆಯ
ಕನಸಿಗೂ ಸ್ವಪ್ನವಾಗಿ ಕಾಡಿದ ಕರೆಯು
ಗಂಡ-ಬೇರೆ-ಉಂಡ:

ಕಾಗೆ ಕೋಗಿಲೆಯಾಗಿ ಸಸ್ಯಾಹಾರಿಯಾಯಿತು
ಗಿಳಿ ಪಾರಿವಾಳವಾಗಿ ಮಾಂಸಾಹಾರಿಯಾಯಿತು
ಗೊರವಂಕವೊ ; ಅಲ್ಲಿಯೂ ಸಲ್ಲುವರಯ್ಯ ಇಲ್ಲಿಯೂ ಸಲ್ಲುವರಯ್ಯ
ಪರಕಾಯ ಪ್ರವೇಶ ಮಾಡಿದ ಹಕ್ಕಿಯ ಕಾಲಿಗೆ
ಗೋಕಾಕದ ಮುಳ್ಳು ಮುರಿದ ನೆವ
ಸೊರಗತೊಡಗಿತು ಒಳಗೊಳಗೆ

ಇಳಿಬಿಸಿಲ ನೆಲದಲ್ಲಿ ಹಾಡುಹಗಲೆಲ್ಲ
ಕನಸಿನೊಳಗೊಮ್ಮೆ ಕನವರಿಸಿತು ಗಂಡಭೇರುಂಡ
"ನಾನು ಅ-ಶೋಕ ಸ್ಥಂಭ
ಚತುರ್ಮುಖಿಗಳು ನನಗೆ"
ಹೌದು ಕನಸಿನಲಿ ಜೀವವಿತ್ತು
ಒಂದರ ಮುಖ ಮಾತ್ರ ಎದುರಿತ್ತು
ಮತ್ತೆರಡರ ಮುಖ ಆರೆಮರೆಯಲಿತ್ತು
ಮೊಗದೊಂದು ಮೊಗ ಮಾಯವಾಗಿತ್ತು!
ಜೇನಹುಟ್ಟಿಗೆ ಕೈಹಾಕಿ ತುಳವೆದ್ದಾಗ
ಕನಸಿಗೂ ಷಾಕ್ ಹೊಡೆದು ಎಚ್ಚರಾದಾಗ
ಸ್ಥ
ಂ
ಭ
ವಾಗಿತ್ತು.

ಪರಕಾಯ ಪ್ರವೇಶದ ಪಕ್ಷಿಯ ಕಾಲುಗಳು
ಕತ್ತರಿಸಿ ಒಗೆಯಬೇಕೆಂಬ ವಾದ
ಕತ್ತುಗಳೆರಡು ಸೀಳಿ ಇಬ್ಭಾಗವಾಗಿಸಬೇಕೆಂಬ ವಿತಂಡವಾದ
ಮತ್ತೆ ಕಾಯತೊಡಗಿದವು ಉರಿಬಿಸಿಲಿನ ಬೇಗೆಗೆ
ಹಣ್ಣುಗಳು ರಸವಾಗಿ ಹರಿಯಲೆಂದು ಹಾರೈಕೆ.

೫

ಹರಿದು ಬಂತದೋ ಹಣ್ಣಿನ ರಸ
ಹೀರಿದ ಗಂಡಭೇರುಂಡ ಹೆಣವಾಗಿತ್ತು-ಮೂಜನ್ಮದಲಿ
ಮಣ್ಣುಮುಕ್ಕು ಹಾವಾಗಿ ಹರಿಯಿತು; ಅದಕ್ಕೂ ಎರಡು ಮುಖ!
ಸತ್ತ ನಂತರವೂ ಬೆಳೆದಿತ್ತು ಹೆಣದ ಉಗುರು

ಮುಖವಾಡಗಳ ಮಥನಕೆ
ಹಳ್ಳಿಯ ಹಕಳೆಗಳ ಕಥನ
ಹಾವಿನ ಪೊರೆಯಾಗಿ ಬಿಚ್ಚಿತ್ತು
ಕಾಣದ ಮುಖದೊಂದಿಗೆ ಹಾದರದ ಕಥೆಯಾಗಿ ಹಬ್ಬಿತು
ರಸ ಅಮೃತವಾಗದೆ ವಿಷವಾಗಿತ್ತು

ಎತ್ತು ಕೆರೆಗೆಳೆದರೆ ಕೋಣ ಏರೆಗೆಳೆದಂತೆ
ಬೆನ್ನು ಮೂಳೆಯೇ ಕಳೆದುಕೊಂಡ
ಇತ್ತಲೆಯ ಹಾವಿನ ಜಗ್ಗಾಟ
ಆರಕ್ಕೇರದ ಮೂರಕ್ಕಿಳಿಯದ ಹಾಡು ಪಾಡು

ಬಂದರೆ ಬರಲಿ ತಿರುಗುಬಾಣ
ಎದೆ ತೆರೆದಿದೆ
ಹರಿದು ತೋರಿದರೆ ಎದೆಯಲಿ
ಯಾವ ರಾಮನೂ ಇಲ್ಲ ರಾವಣನೂ ಇಲ್ಲ
ಬರಿ ಎಲುಬೊಗಲು ರಕ್ತ ತುಂಬಿದ ಜೀವ
ಕಿವಿಗೊಟ್ಟರೆ, ಕೇಳುತ್ತದೆ ಮಾನವತೆಯ ಮಿಡಿತ

ಹಸಿರೆಲೆ ಹಣ್ಣಾಗಲೇ ಬೇಕು
ಚಿಗುರೆಲೆ ಹುಟ್ಟಲೇಬೇಕು
ಎಚ್ಚರಬೇಕು :
ನೈದಿಲೆ ಬಾಡಿದ ಮೇಲೆ
ಕಮಲವರಳುವುದು

ವೃತ್ತ ಆವರ್ತನದ ಗತಿ ತಪ್ಪದು
ತಪ್ಪಿದರೆ : ವೃತ್ತವಾಗುಳಿಯದು
ನಡೆದು ಬಂದಿಹ ದಾರಿ ಬೆತ್ತಲಾಗಿ ಬಿದ್ದಿಹುದು

ಬೆನ್ನ ಬಸುಗೆಯು ಸಾಕು
ಎದೆಯ ಬೆಸುಗೆಯ ಹಾಕು
ಬೇಕು ಬೇಕುಗಳ ನೂಕು
ಮಣ್ಣ ತೊಟ್ಟಿಲಿಗೆ ತಾಕು.

## ಜೀತಾವತಾರ

ಭರತ ಖಂಡದ ಭೂಮಂಡಲದಲಿ
ವಿಜ್ಞಾನದ ಕಮಂಡಲದಲ್ಲಿ
ದೇಶಿ ವಿದೇಶಿಯ ಅಣಗಳ ಕುದಿತದಲಿ
ಕುದಿಯುವುದು ಜೀವ ಕುದಿಸುವುದು ಜೀವ
ಹದಗೊಂಡು ಪಾಕವಾಗುವುದೋ
ಮಂಜು ಮುಸುಕಿದ ದಾರಿ
ಕಚ್ಚಾರಸ್ತೆಯಲಿ ನಡೆವ ಜೀವ
ಕಾಲುದಾರಿಯೂ ಸಿಗದೆ ಕಾಡು ಪಾಲಾಗುವುದೋ
ಹೆದ್ದಾರಿಯಲಿ ಹೆಣವಾಗುವುದೊ......

ಕಡಲ ಕಿನಾರೆಗೆ ಬೆನ್ನು ಕಾಯಿಸಲು ಬಂದ
ಆಮೆ, ಒಮ್ಮೆ ಖಾಸಗಿಯಾಗಿ
ಮತ್ತೊಮ್ಮೆ ಸಾರ್ವತ್ರಿಕವಾಗಿ
ಜಲ-ಅನಿಲ-ಸೌರಶಕ್ತಿಯ ಅವತಾರವಾಗಿ
ದೀಪದಲಿ, ಮಣ್ಣಿನ ಗಡಿಗೆಯಲಿ
ಇಂಡಿಯಾದ ಗಲ್ಲಿ ಗಲ್ಲಿಯಲ್ಲಿ ಕಾಲು
ಛಾಯೆಗೆ ಹುಟ್ಟಿದ ಶನಿಯಾಗಿ
ಮುಂದೆ ಹಯಗ್ರೀವ ಹುಟ್ಟಿದಂತೆ
ಮನುವಿನ ಹಣೆಗೆ ತಿಲಾಂಜಲಿ

ಹ್ಯಾಟಿನ ನೆರಳಲ್ಲಿ ಮೂಡಿದ ಮೊಲ
ಮುಟ್ಟಿದರೆ ಶಾಕ್ ಹೊಡೆಯುತ್ತದೆ
ಇಲ್ಲವಾದರೆ ತನ್ನ ಹೆದ್ದಾರಿ ತನ್ನದೆ
ಗಲ್ಲಿಗಲ್ಲಿಯಲ್ಲಿ ಕಾಲಿಡುವ ಕಾಲ
ಮೊಲ ಹಾಡುತ್ತ ಬಂತು : ಅರಸುತ್ತ ಬಂತು
ಮೇರಾ ಜೂತಾ ಹೈ ಜಪಾನಿ.........
ಫಿರ್ ಭೀ ದಿಲ್ ಹೈ ಹಿಂದೂಸ್ತಾನಿ
ಮುಖಾಮುಖಿಯಾದವು

ಹ್ಯಾಟು ನೆರಳಿನ ಮೊಲ
ಧೋತಿ ತೊಟ್ಟ ಆಮೆ
ಆಮೆ ತನ್ನೆಲ್ಲ ಅಂಗಾಂಗ ಮರ್ಮಾಂಗಗಳ ಮರೆತು
ಎಡಬಲ ಬಂದ ಕ್ರಿಮಿಕೀಟ ಮರೆತು ಓಡೇ ಓಡಿತು
ನಿದ್ದೆಯ ಮೊಲವೂ ಎಚ್ಚೆತ್ತು ಓಡಿತು
ಕೀಟದಾದಾಯ ನೂರು ನೂರು
ಸಖಿ ಬಾಳು ಸುಖಿ ಬಾಳು
ಇಹ ಬಾಳು ಆಯ ಬಾಳು
ತಾರೆಗಳ ಬೆನ್ನ ಮೇಲೆ ಸಂಖ್ಯೆ ಬರೆದು
ಚಂದ್ರನ ಮೇಲೆ ಗಡಬು ಹಾಕಿ
ಅಣುಬಾಂಬಿಗೆ ಹುತ್ತ ಕಟ್ಟಿದ ನೆಲ
ಬೆಳಗಿನ ಕೆಲಸಗಳಿಗೆ ವಿಮಾನ ಬಳಸುವ ಬಲ
ಜಗತ್ತಿನ ನಂಬರ್ ಒನ್ ಬಕಧ್ಯಾನಿಗಳಿಗೆ
ಮೊಲ ಆಮೆಗಳ ಓಟದ ಮೇಲೆ ಕಣ್ಣು!

ನೆಲದ ಮಣ್ಣಿಗೂ ಕೂರ್ಮಾವತಾರಿಗೂ ನಂಟು
ಸಮುದ್ರಮಥನದಲ್ಲಿ ಕಡೆಗೋಲಿಗೆ ಆಧಾರ
ಹಗಲಲ್ಲಿ ಕತ್ತಲಾದಂತೆ
ಅಡವಿಟ್ಟ ಕಡಲು ಬತ್ತಿದಂತೆ
ಬತ್ತದ ಕಡಲ-ಕನಸು-ಬಿಸಿಲುಗ್ದುರೆ
ಕೋಲು ಕಚ್ಚಿದ ಆಮೆಯನ್ನು ಹಾರಿಸಿಕೊಂಡು ಹೊರಟರು

ದಾರಿ ಹರದಾರಿಯೂ ಸವೆದಿಲ್ಲ
ತಲೆಗೆ ಮುಗಿಲ ತಟ್ಟುವ ಭಯಮಿಶ್ರಿತ ಸಂತಸ
ಅಡಿಗೆ ಬಿದ್ದರೆ ಪಾತಾಳ ಸೇರಿದಂತೆ
(ಪಾತಾಳ ಸೇರಿದ ಮೇಲೆಯೇ ಅಲ್ಲವೆ
ಜಪಾನ ಜರ್ಮನಿ ಕಿರೀಟ ಧರಿಸಿದ್ದು)
ಕಾಲೆಳದುಕೊಂಡರೂ ಒಳಗೆ ನಿಲ್ಲದ ಸ್ಥಿತಿ
ಹಸಿವು ಬಾಯಾರಿಕೆ ಭಯಗಳ ನಡುವೆಯೂ

ಬತ್ತದ ಕಡಲಲ್ಲಿ ಹುದುಗಿದ ಸಂಪತ್ತು ಬಗೆವ ಚಿತ್ತಾರ
ಬಕಧ್ಯಾನಿಗಳಿಗೂ ತಲ್ಲಣ ಇತ್ತೀಚಿಗೆ
ಐದು ತಾಸಿನ ಪ್ರಜಾಪ್ರಭುತ್ವದಲ್ಲಿ
ತಾಸು ಅರೆತಾಸಿಗೂ ಬದಲಾಗುವ ಬಣ್ಣ

ಬಕಗಳ ಧ್ಯಾನ ಕಳಚುವುದೊ ಕಬಳಿಸುವುದೊ
ಆಮೆ ಬತ್ತದ ಕಡಲ ಸೇರುವುದೋ ಪಾತಾಳಿಕ್ಕಿಳಿವುದೊ
ಹುತ್ತದೊಳಗೆ ರೋಜುಗಾರನೊ
ರೋಜುಗಾರನೊಳಗೆ ಹುತ್ತವೊ
ಏನ್ನತ್ತ ಎನ್ನ ಚಿತ್ತ
ಎತ್ತ ಓ ನೀನೆತ್ತ.

## ವಿದ್ಯುತ್ ತಂತಿಗಳು

ಇಲ್ಲೆ ಎಲ್ಲೋ ದೇಶಿಗರ ನಡುವೆಯೇ
ಕಳೆದು ಹೋಗಿದೆ ನನ್ನ ಇಂಡಿಯಾ
ಕಮಲದ ಪರಾಗದಲ್ಲೋ, ಗಂಗಾಧರನ ಸೇನೆಯಲ್ಲೋ
ಗಿಳಿಭವಿಷ್ಯದ ಹಸ್ತದಲ್ಲೋ
ಚಾಮುಂಡಿಯ ಉಡಿಯಲ್ಲೋ
ಇಲ್ಲೆ ಎಲ್ಲೋ ನಮ್ಮವರ ನಡುವೆಯೇ
ಕಳೆದುಹೋಗಿದೆ ನನ್ನ ಇಂಡಿಯಾ

ಎನ್ರಾನಿನ ವಿದ್ಯುತ್ ಹಲ್ಲು ಮುರಿದು
ಬಾಯಿಯಲಿ ತೂತಿನ ದುಡ್ಡಿಟ್ಟು ಸುಡುವ
ಸರ್ಪಯಜ್ಞದ ಬಯಕೆ
ಜನಮೇಜಯನಾಗಿ ಮೆರೆಯುವ ಮನಸು
ಮರಾಠಿ ಕಮಲ ಚರ್ಮಾಂಬರಧಾರಿ ಹಾವುಗಾರನಿಗೆ!

ನಾಗರಪಂಚಮಿಯ ಹಬ್ಬ ಆಚರಿಸಿ
ಬಿಳಿಹಾಲು ಕೆಂಪ್ಹಾಲು ಎರೆದು
ಕೊಜೆಂಟ್ರಿಕ್ಸ್ ಜೋಕಾಲಿಯಲಿ
ದೇವನಾಗನಾದರೂ ಪನ್ನಗಶಯನನಾಗುವ ಆಸೆ
ಕನ್ನಾಡಿನ ಕಾಲಚಕ್ರದ ಹಾವುಗಾರನಿಗೆ!

ನಾ ಪವಡಿಸಿರುವುದು
ವಿದ್ಯುತ್ ತಂತಿಯ ಜೇಡರ ಬಲೆಯಲ್ಲ
ಕ್ಷೀರಸಾಗರದಲಿ ಮಹಾಶೇಷನೇ ನನ್ನ ಸಿಂಹಾಸನದ ಹಾಸಿಗೆ
ಪಂಚವಾರ್ಷಿಕ ಸಮುದ್ರಮಥನದಲ್ಲೂ ಮುಂದೆ ನಾನೇ ಪವಡಿಸಿ
ನರನೂ ನಾನೇ ಸಿಂಹನೂ ನಾನೆ!
ಮೂರನೆ ಕಣ್ಣಿಲ್ಲಿಲ್ಲ
ಮಣ್ಣಿನ ಯೋಜ(ಚ)ನೆಯಿಲ್ಲ

ನಾವು ನಡೆದದ್ದೇ ದಾರಿ
ಅವಕಾಶವಾದಿಯಾಗಿದೆ ಪ್ರಜಾಪ್ರಭುತ್ವ
ಇಲ್ಲೆ ಎಲ್ಲೊ ಕಾಲುದಾರಿಯಲ್ಲಿಯೇ
ಕಳೆದು ಹೋಗಿದೆ ನನ್ನ ಇಂಡಿಯಾ

ನನ್ನವಶೇಷದ ತುಕ್ಕಡಿಯೇ
ನಾನಿರುವವರೆಗೆ ನಿನಗೆ ತಕ್ಕಡಿ
ಸಿದ್ಧಗೊಳಿಸುವ ಕಲ್ಪ ಸಿದ್ಧಿಯ ಕಾರ್ಯ
ನಾರದ; ಬೆರಳಿಗೆ ಕೀ ಚೈನು ಹಾಕಿ ತಿರುಗಿಸಿದ
ಎಲ್ಲ ಬಾಗಿಲುಗಳ ತೆಗೆದು
ಬಾರಿಸಿದ ಪುಂಗಿ
ಗಣಪನ ಲೋಕ ಪರ್ಯಟನ, ಶಿವನ ಸುತ್ತ
ಒಂದೊಂದೇ ಮೊಟ್ಟೆ ತೆಗೆದ, ಹಾಲಿನ ಬಟ್ಟಲು ತೆಗೆದ
ವಿಷ್ಣುವೂ ಪರದೇಶದಲ್ಲೆಲ್ಲ ಪುಂಗಿ ಊದಿಬಂದ
ಬುಟ್ಟಿಯಲಿ ಹಾವ್ಹಿಡಿದು ಬಿಟ್ಟ ಬಿಟ್ಟ ಬಿಟ್ಟ
ನನ್ನದು ಕಾಳಿಂಗ ಮರ್ದನ ನೀತಿ
ಹುತ್ತದಲ್ಲಡಗಿದ ಹೆಬ್ಬಾವಿನ ಹುಣ್ಣು ಒಡೆದು
ಅವರ ಖಜಾನೆ ತುಂಬಿಕೊಳ್ಳುವುದು
ಕೊಲ್ಲುವುದಲ್ಲ : ಪಲ್ಲಕೀಳಿ, ಕಾಯುವುದು

ಆದಿಶೇಷನ ಅಷ್ಟದಿಗ್ಗಜಗಳ-ಪತಾಕೆ
ಈಗ ಒಂದೇ ಆಗಿ ಉಳಿದಿಲ್ಲ.
ಉಳಿದ ಪತಾಕೆಗೂ ತೇಪೆಯೋ ತೇಪೆ
ಅಲ್ಲಲ್ಲಿ ಗಜಗಳು ಬಾನೆತ್ತರ ಏರಿಸಿವೆ ಬಾವುಟ
ಇದ್ದುದೆಲ್ಲವೂ ಮಹಾಶೇಷನ ಹೊಟ್ಟೆಗೆ ಹೊರೆದು
ಕಣ್ಣಲ್ಲಿ ಕಣ್ಣಿಟ್ಟು ಹಗಲಿರುಳು
ಕ್ಷೀರಸಾಗರದ ಪರಂಪರಾಗತ ಮಕುಟಕೆ
ಸರ್ಪಗಾವಲಿಡುವ ಬಯಕೆ

ಇಲ್ಲಿ ಕತ್ತೆ-ಕುದುರೆಗೂ ಒಂದೊಂದು ತತ್ವವಿದೆ
ತತ್ವ ಬುಡಮೇಲಾಗಿ
ಬೆಳಗಾಗುವುದರಲ್ಲಿಯೇ ಕತ್ತೆ ಕುದುರೆಗಳು ಕೂಡಿ
ಹೇಸರಗತ್ತೆಗೆ ಜನ್ಮಕೊಡುತ್ತ

ನೆರಳು ಬೆಳದಿಂಗಳಾಟದಲಿ
'ಇವರ ಬಿಟ್ಟು ಇವರ್‍ಯಾರು' ಎಂದು
ಇಲ್ಲೇ ನಮ್ಮವರ ನಡುವೆಯೆ
ಕಳೆದುಹೋಗಿದೆ ನನ್ನ ಇಂಡಿಯಾ

ಈ ವಿದ್ಯುತ್ ತಂತಿ ಒಬ್ಬರಿಗೆ ಕುಡಿವ ನೀರಲ್ಲಿ ಹರಿದರೆ
ಮತ್ತೊಬ್ಬರಿಗೆ ಶಾಕ್ ಟ್ರೀಟ್‌ಮೆಂಟ್ ಕಾವ್ಯ
ತಕ್ಕಡಿಯ ತೂಗು ನೋಟ, ನಿರ್ಣಯಗಳ ಹೊಯ್ದಾಟ
ಮೇಲೆ ಅವತಾರಪುರುಷನಿಗೂ ಪಿಕಲಾಟ!
ಹಾಡುಹಗಲೇ ತೆರೆದ ಕಣ್ಣಲ್ಲೇ ಕಾಣುವ ಕನಸು ಪನ್ನಗಶಯನಗೆ
ಮೈತುಂಬ ಹರಿದ ವಿದ್ಯುತ್ ಸಂಚಾರ ಸಮುದ್ರಮಥನಕೆ ಸಂಚಕಾರ!
ಪರದೇಶಿಗರು ಪರದೇಶದಲಿ ಪರಕೀಯರಾದರು
ಭ್ರೂಣಹತ್ಯೆಯ ಆರೋಪದಿಂದ
ಸೂರ್ಯವಂಶಿ ಸ್ವದೇಶದಲೇ ಪರಕೀಯನಾದ!

ಆಟ ನೋಡಲು ಬಂದವರು
ಜನಮೇಜಯನಿಗೂ ಚಪ್ಪಾಳೆ ಹೊಡೆದರು
ದೇವನಾಗನಿಗೂ ಚಪ್ಪಾಳೆ ಹೊಡೆದರು
ಸರ್ಪಶಯನನಿಗೂ ಚಪ್ಪಾಳೆ ಹೊಡೆದರು
ಚಪ್ಪಾಳೆ ಹೊಡೆಯುವ ಸ್ವಾತಂತ್ರ್ಯ ಎಲ್ಲರಿಗೂ ಇದೆ.

ಈಕೆಯ ಉಡಿಯಲ್ಲಿ
ಮೂರು ತಾಸಿನ ಪರದೆಯ ಮೇಲೆ ಕುಣಿವ ಶಿಖಂಡಿ ಸಂತಾನವೂ
ಬೆಳಗಾದರೆ ಕೋತಿಯ ಕುಣಿತ
ಟೊಂಗೆಯಿಂದ ಟೊಂಗೆಗೆ ಜಿಗಿತ.
ಸಮುದ್ರಮಥನದ ದಿನ ಮಾತ್ರ ಪ್ರಭಾಪ್ರಭುತ್ವ
ಮರುದಿನವೇ ಇಲ್ಲೇ ಎಲ್ಲೋ ನನ್ನವರ ನಡುವೆಯೇ
ಕಳೆದು ಹೋಗುವುದು ನನ್ನ ಇಂಡಿಯಾ

ಚಪ್ಪಾಳೆಗಾರರ ನಡುವೆ ಜನಮೇಜಯ
ಗಾರುಡಿಗನಾಗಿದ್ದ!
ಗಂಗಾಧರ ಚರ್ಮಾಂಬರ ತೆಗೆದು
ಕಾವಿಬಟ್ಟೆ ನಡುವಿಗೆ ಸುತ್ತಿದ್ದ

"ಹಿತ್ತಲಿನ ಬಚ್ಚಲ ಮೋರಿಯಿಂದ ಬಂದದ್ದು
ಪರದೇಶಿ ಹಾವು ನೋಡಿ ಬಾಬು
ಇದರ ಹಲ್ಲು ಬಲು ಚೂಪು, ವಿಷ ನೆಟ್ಟರೆ ಇಳಿಸಲಾಗದು
ದೇಶಿ ಸರ್ಪಗಳಿಂಗಿಂತಲೂ ಮಿಗಿಲು
ಇದರಿಂದ ಅಪಾಯ ಕಟ್ಟಿಟ್ಟ ಬುತ್ತಿ ಬಾಬು"

'ನಾಗರ ಹಾವ ಹಾವೊಳು ಹೂವೆ.....
ಕೈಗಳ ಮುಗಿವೆ (ಬಿಸಿ) ಹಾಲನ್ಹೀವೆ
ಪೋ ಪೋ ಪೋ'.

"ಎಂದವರು ನಾವೇ; ಬಾಬು
ರಾ ರಾ ರಾ ರಾ ಎಂದು
ಕರೆಯುವುದು ಹೇಗೆ?
ಕಮಲನಾಭ ನಮ್ಮವನೇ, ಆದರೆ ಹೆಬ್ಬಾವಿನ ಬುಟ್ಟಿ ನಮ್ಮದೆ?"

ಕನ್ನಡದ ಹಾವುಗಾರಗೆ ಗೊತ್ತು
ದೇಶಿಸರ್ಪಗಳ ಕೆಣಕಿದರೆ
ಕೈಯಲ್ಲಿ ಮಂತ್ರದಂಡವೂ ಇಲ್ಲ, ಮಾಯದ ಚಾಪೆ, ಟೋಪಿಯೂ ಇಲ್ಲ;
ಈ ಸ್ವದೇಶೀ ಬಡಹಾವುಗಳು ಬದುಕುಳಿಯಲು
ವಿದೇಶೀ ಸರ್ಪಗಳೇ ಮದ್ದು!

ಕಾಳಿಂಗ ಮರ್ದನದ ನೀತಿ
ವಿದೇಶಿ ಸರ್ಪಗಳ ಹಲ್ಲು ಕೀಳಬೇಕು
ನನ್ನಲ್ಲಿ ಪುಂಗಿ ಇಲ್ಲ ಕೇವಲ ಕೊಳಲಿದೆ
ದೇಶಿ ಸರ್ಪಗಳಿಗಂಜಿ ಬೆನ್ನ ತೋರಲಾರೆ
ನನಗೆ ಬಡ ಮಿಡಿಹಾವುಗಳ ಬದುಕು ಮುಖ್ಯ
ಸರ್ಪಗಳ ಹಿಡಿದು ಬುಟ್ಟಿಗ್ಹಾಕುವುದು ಪದುಮನಾಭನ ಕೆಲಸ!

'ಕದಲ ಬಿದಲ ಕಂಚಿ ಕದಲು
ಅವರ ಬಿಟ್ಟು ಇವರ್ಯಾರು
ಇವರ ಬಿಟ್ಟು ಅವರ್ಯಾರು'
ಬೇಲಿಗೆ ಓತಿ ಸಾಕ್ಷಿ, ಓತಿಗೆ ಬೇಲಿ ಸಾಕ್ಷಿ
ಯಾರ ಜೇಬಿನಲ್ಲಡಗಿದೆ, ಯಾರ ಕಾಲಡಿಯಲ್ಲಿ ಬಿದ್ದಿದೆ?
ಯಾರ ಪೆಟ್ಟಿಗೆಯಲ್ಲಿ ಬಂಧಿಸಿಟ್ಟರು?

ನೆಲ ಜಲ ಹಸಿರಿನುಸಿರೇ ಇಲ್ಲ
ಅಲ್ಲಿ ಇಲ್ಲಿ ಪಕ್ಷ, ಕುರ್ಚಿಯುಸಿರೇ ಬಲ!
ಯಾವ ಕಾಳಸಂತೆಯ ಬೀದಿಯಲಿ ಹರಾಜಾಗುತ್ತಿದೆ ನನ್ನ ಇಂಡಿಯಾ

ನಾಳೆಯೇ ಪಂದ್ರಾ ಆಗಸ್ಟ್
ಇಂದೇ ರಸ್ತೆ ಎಡಬಲಕೆ ಮಣ್ಣು ಹಾಕಿದ್ದಾರೆ
ಸುಣ್ಣ ಬಣ್ಣವ ಹಚ್ಚಿ, ಧ್ವಜದಲ್ಲಿ ಪಾರ್ಥಿವಾಳಗಳ ಕಟ್ಟಿ
ತಲೆದಿಂಬಿಟ್ಟು ಮಲಗಿದ್ದಾರೆ
ನಾಳೆ ಹೊರಡುತ್ತದೆ ಪ್ರಭಾತ ಫೇರಿ

ಬೋಲೋ ಭಾರತ ಮಾತಾಕೀ ಜೈ
ಬೋಲೋ ಭಾರತ ಮಾತಾಕೀ ಜೈ ☐

## ಸಾಫ್ಟ್‌ವೇರ್ ಮತ್ತು ಎಮ್ಮೆ

ಪ್ರಿಯ ಇಂಡಿಯಾ;
ಗಂಗೆ ಯಮುನೆಯರ ಸುತ್ತ
ಮೇದ ಎಮ್ಮೆಯ ಹೆಂಡಿಯಲಿ
ಬಂಗಾರವಿತ್ತು;
ಹಸಿರು ನಳನಳಿಸಿ ಒಲೆಯಲ್ಲಿ ನಳಪಾಕ ನೈವೇದ್ಯ
ಹೆಜ್ಜೆ ಮೂಡುತ್ತಿವೆ
ಗೋಬರ್ ಗ್ಯಾಸ್‌ನಿಂದ ಸೋಲಾರಿಗೆ
ರಾತ್ರಿ ಹಗಲಾಗಿಸಿ ಮೊಳಕೆ ಒಡೆದ ಜೀವ
ಉಸಿರಾಗಿದೆ ಯುಗಾಂತರದಲಿ!

ವಿದ್ಯುತ್ ತಂತಿಯಲಿ
ಈ ಸಂಜೀವಿನಿ ವಿಷವಾಯಿತು
ಮೊದಲಗಿತ್ತಿಯ ಹಾಗೆ
ಪೆಟ್ರೋಲಿನ ಪರಿಮಳಕ ನಾಚಿದ ಮಲ್ಲಿಗೆ
ಹೇಳ ಹೆಸರಿಲ್ಲದೆ ಕಪ್ಪಾಗಿ ಮಣ್ಣ ಕೂಡಿತು
ದೀಪಾವಳಿಯ ಪಟಾಕಿಯ ದನಿ
ಉಸಿರು ನಿಲ್ಲುವ ತನಕ ಜೀವ ಘಾತುಕ ಸದ್ದು
ಕನಸಿನಲ್ಲೂ ಇಣುಕುವ
ವೇಷ ಮರೆಸಿ ಬಂದ ಭೂತ

ಆಸ್ಪತ್ರೆಯೇ ಕೊಂಡವಾಡವಾಗಿ
ಕೊಂಡವಾಡವೇ ಖಿಮೇಲಿಯಾಗಿ
ಖಿಮೇಲಿಯ ಗೂಟಕ್ಕೆ ಕಟ್ಟಿದ
ದನ ಕರು ಕೋಳಿ ಟಗರುಗಳು
ಯಂತ್ರದಲ್ಲಿ ಹೋದ ಹಸಿರು ಮರ
ಇದ್ದಲಿಯಾಗಿ ಹೊರ ಬಿದ್ದು
ಹಿಪ್ಪೆಯಾದಿ ಇಂಡಿಯಾ

ಸುಪಲಿ, ಗಿಲ್ಲಿಯ ಕೈಗೆ ವೀಡಿಯೋ ಗೇಮ್
ಹೆಬ್ಬೆರಳೊತ್ತುವ ತಲೆಗೆ ರಿಮೋಟ್ ಕಂಟ್ರೋಲರ್
ಕನಸಲಿ ಉಪವಾಸ ಮುರಿದಂತೆ
ಮಣ್ಣ ಮಾಡಿದ ಬಾಯಿಯಲ್ಲಿ ಎಳ್ಳುನೀರು

○

ಸಾಫ್ಟ್‌ವೇರ್ ನೆಪದಲಿ ನಿನ್ನ ಹಾರ್ಡ್‌ವೇರ್
ಯಾರಿಗೆ ತರ್ಪಣ ಕೊಟ್ಟೆ?
ಕಟ್ಟಿರೋ ಸೊಂಟಕ್ಕೆ ಕುಡುಗೋಲು
ನುಂಗಲಿ ಹೆಬ್ಬಾವು
ತೆರೆದ ಬಾಗಿಲನು ಮುಚ್ಚದಿರು
ಅಂಡುಗಚ್ಚೆಯನು ಬಿಚ್ಚದಿರು

ನೀ ಉಸಿರುವ ಗಾಳಿಯಲೇ ಇಲ್ಲ
ನಿನ್ನದೆಂಬುವ ವಾಸನೆ, ಇನ್ನು ವಸ್ತು ತತ್ವದಲ್ಲೇನು?
ನಮ್ಮ ನಾವು ಉಳಿಸಿಕೊಳ್ಳಲು
ಸಾವು ನೋವುಗಳ ನಡುವೆಯೂ ಆಗಬೇಕಿದೆ
ಕಚ ಶುಕ್ರಾಚಾರ್ಯರ ಒಪ್ಪಂದ

ಬಿದ್ದಾವು ಹೆಬ್ಬಾವಿನ ಹೊಟ್ಟೆಯಿಂದ ಹೊರಗೆ
ದಿನಬಳಕೆ ಜಂತುಗಳು ಮಾಯದ ಕನ್ನಡಿ
ಸತ್ತ ಪ್ರಾಣಿಯ ಮಾಂಸದ ತುಂಡು
ನೊಣ ಹೊಡೆಯುತ, ಗಿರಾಕಿಗಳನ್ನು ಕಾದರು

ಹರಿಯುತ್ತದೆ ನೀರು ಕಲಕಲನೆ
ಜೀವ ಹಿಡಿಯುತ್ತದೆ ಗಾಳಿ
ಕಾಗೆ 'ಕಾ' ಎಂದು, ಗುಬ್ಬಿ 'ಚ್ಯೂಂ' ವೆಂದು
ಬೆಕ್ಕು 'ಮ್ಯಾಂ'ವೆಂದು, ಕರು 'ಅಂಬಾ'ಎಂದು
'ಕ್ಕೊ ಕ್ಕೊ ಕೋ'ಎಂದು ಕೋಳಿ ಕೂಗು
'ಬೌ ಬೌ'ವೆಂದು ಎಚ್ಚರಿಸುವ ನಾಯಿಯೂ ನಮ್ಮದೆ
ಉಪ್ಪು ತಿಂದ ಮನೆಯ ಕಾವ ಕರ್ತವ್ಯ
ಅದಕೂ ಕಿವಿಗೊಡು : ಮುಂದೆ ಹೆಜ್ಜೆ ಇಡು.

○

ಮಗನೇ ಮಸಿಯೊತ್ತಿ
ಕಳೆದುಕೊಳ್ಳ ಬೇಡ ಹೆಬ್ಬೆರಳೆಂದು ಎಚ್ಚರಿಸಿ
ನೀ ಅಕ್ಷರಗಳ ಅರಿತು ಆಸರೀಕರೊಂದಿಗೆ ಪೆನ್ನು ಬದಲಿಸಿ
ಸುಣ್ಣದ ಮೆದಿಳಿನ ಪೆಟ್ಟಿಗೆಯ ಜೇಡರ ಬಲೆ
ಜೀತಕ್ಕೆ ಬಿದ್ದೆಯಲ್ಲ; ಇಂಡಿಯಾ.

ತೊತ್ತಿನ ಗಂಜಿ ಹೊತ್ತಿಗಾಗಬಹುದು
ಭಕ್ತಿಯಿಂದ ಅರ್ಪಿಸಿದಾ ಹೆಬ್ಬೆರಳು ಮರಳಿ ಬರಬಹುದು?
ನೀ ಜುಟ್ಟಿನ ಹೂವಿಗಾಗಿ
ತಲೆಯನೆ ಮಾರಿಕೊಡೆ!
ನಿತ್ಯನೂತನತೆ ಬೇಕು ಇಂಡಿಯಾ
ನಾಗರಿಕತೆ ನಗ್ನಬೇಡ
ಚರ್ಮ ಕಿತ್ತಿದರೂ ಇರಲಿ ಸ್ವದೇಶಿ
ಜಂಭ ಬೇಡ
ಮನೆಯ ಮೊಸರು ಕಡೆಯಲು
ವಿದೇಶಿ ಕಡೆಗೋಲು
ಬೇಕೆಂಬ ಚಟ ಬೇಡ
ಅಳುವ ಕೂಸಿಗೆ ಹಾಲು ಕುಡಿಸಬೇಕು
ತುಪ್ಪ ಕುಡಿಸುವುದಲ್ಲ ಇಂಡಿಯಾ

ಈ ಮೆರವಣಿಗೆಯಲಿ
ಏರಿ ಹೊರಟ ಆನೆ ನಿನ್ನದಿರಬಹುದು
ಆದರೆ ಅಂಬಾರಿ ನಿನ್ನದಲ್ಲ
ಹಸಿವಿನ ಜೋಳಿಗೆ ಬಗಲಿಗೆ ಹಾಕಿಕೊಂಡು
ಭಿಕ್ಷೆಗೆ ಬಂಗಾರ ಕೊಟ್ಟರೂ ಹೊಟ್ಟೆ ತುಂಬುವುದಿಲ್ಲ
ಅಂಬಾರಿ ಒದ್ದರೆ, ಆನೆಯ ಬೆನ್ನಿಗೆ ಹತ್ತುವುದಿಲ್ಲ ದಡ.

□

## ಭೊಂಗಾ ಮತ್ತು ನೇಗಿಲು

ಗಕ್ಕನೆ ನಿಂತವು ಕಣ್ಣುಗಳು
ಬೆಲ್ಲಕ್ಕೆ ನೊಣ ಮುಕ್ಕುರಿದಂತೆ ಕಿತ್ತಾಟ
ಫುಟ್‌ಪಾತಿನ ಮೇಲೆ
ನೂರು ರೂಪಾಯಿಯ ಅಂಗಿ ಹತ್ತು ರೂಪಾಯಿ
ಆತ ಮತ್ತೂ ಕಾಯುತ್ತಿದ್ದಾನೆ
ಪುಕ್ಕಟೆಯಾಗಿ ಸಿಗಬಹುದೆಂದು
ಕನ್ನಡಿಗೆ ಹೊಂದಿಕೊಳ್ಳುವ ಇಸ್ತ್ರಿ ಅರಿವೆಯ ಮುಖಗಳು
ಭಾರತೀಯ ಬಟ್ಟೆಗಳು : ಈಗಲ್ಲಿನ ಛಾಪುಗಳು

ಸಂಜೆಯ ಭೊಂಗಾ ವದರಿದರೆ ಸಾಕು
ಸುಟ್ಟ ಇದ್ದಲದ ಮುಖ ಕಾಲು
ಸಾವಿರಗಟ್ಟಲೆ ಸಾಲು ಸಾಲು ಹೊರಗೆ ಬೀಳುತ್ತಿದ್ದವು
ಇದೇನಿದು ಈ ಬೃಹತ್ ಫ್ಯಾಕ್ಟರಿಗೆ ಭೊಂಗಾಗಳೇ ಇಲ್ಲ
ಜನರೆಲ್ಲ ಗೂಂಗಾಗಳೆ?
ಅಲ್ಲ ಸ್ವಾಮಿ ಬಾಯಿ ಹೊಲೆದ ಮಾತಿನ ಗಿಣಿಗಳು
ಎರಡೋ ಮೂರೋ ಅಷ್ಟಕಷ್ಟೇ
ಯಾವ ಯಂತ್ರದಲಿ ರಸ ರಕ್ತ ಹಿಪ್ಪೆಯಾಗಿ
ಮಾಯವಾದರೊ ಮಾಯಾವಿ
ಆ ಭೊಂಗಾಗಳೆಲ್ಲಿ?
ಆ ಸಂಘಟನೆಗಳು ಆ ಧ್ವಜಗಳು
ಮಂದಿರ ಮಸೀದಿ ಚರ್ಚುಗಳ ಸುತ್ತುತಿವೆ.

ಇದೇನಿದು?
ಊರುಬಿಟ್ಟು ಪಟ್ಟಣ ಸೇರಿದವರು
ಹೊಲ ತೋಟ ಗದ್ದೆಗಳಿಗೆ ಮತ್ತೆ ಬದುವು ಹಾಕುತ್ತಿದ್ದಾರಲ್ಲ?
ಎರಡೆತ್ತು ಹೂಡುವಲ್ಲಿ ಹನ್ನೆರಡು ಹೂಡಿಹರು
ಅಲ್ಲೊಬ್ಬ ಟ್ರ್ಯಾಕ್ಟರು ಹಾಯಿಸುತ್ತಿದ್ದಾನೆ

ಕಲಿತವ
ಕಲಿಯುಗದಲ್ಲೂ ಬದುಕಿದ
ಕಲಿಯದವ
ಕೂಳಿಗೂ ದಂಡವಾದ
ಕೂಗದೆ ಹೆಣವಾದ

ಇದೇನಿದು?
ಹಳ್ಳಿ ಹಳ್ಳಿಯಲಿ ಹೆಣ ಸುಡದೆ ಹೂಳುತಿಹರು?
ಅದೇನು ಅಲ್ಲಿ ಹೆಣ ಹಾಗೆ ಎಸೆದಿಹರು, ಹದ್ದು ಕಾಗೆಗೆ?
ಹೂಳಲು ಸ್ಥಳವಿಲ್ಲವೇನು?
ನಗರದಲ್ಲಿ ವಿದ್ಯುತ್ – ಚಿತಾಗಾರಕೆ
ವಿದ್ಯುತ್ ಇಲ್ಲದೆ ನಾರುತ್ತಿವೆ?

ಯಾವ ಬಾಂಬು ಬಿದ್ದಿದೆ ಈ ನೆಲಕೆ
ತೆನೆ ಬಡೆದಂತೆ ಉರುಳುತ್ತಿವೆಯಲ್ಲ ಬುರುಡೆ ಕಾಳುಗಳು
ಅಂಬೆ ನಿನ್ನುಡಿಯ ತುಂಬಲು ಇಷ್ಟು ಸಾಕೇನಮ್ಮ
ಈ ತರಗೆಲೆಗಳನ್ನು ಬಿರುಗಾಳಿಯಲಿ ಧೂಳಿಪಟ ಮಾಡಿ ಹಾರಿಸಿ
ಹೊನ್ನ ಕಿರೀಟವ ಕಳಚಿ; ವಜ್ರ ಕಿರೀಟವ ತೊಡಲು
ಅವಸರದಿ ಹೊರಟಿರುವೆ, ಇದ್ದುದೆಲ್ಲ ಅಡವಿಟ್ಟು-ಆಸೆಬುರುಕಿ.

ಬಳ್ಳಿಯೆಂದು ಹಾವ ಹಿಡುದು, ಬಾವಿಯಲ್ಲಿ ಜೋತಾಡುತಿಹರು
ಬಾವಿ ಬತ್ತಿದ್ದರೂ ಒಳಗೆ ಹುಲಿ ಇದೆ
ಕೈಯಲ್ಲೂ ಸಾವು : ಕಾಲ ಅಡಿಯಲ್ಲೂ ಸಾವು
ಈ ನಡುವೆ ಬದುಕ ಸುಖ
ಹನಿ ಹನಿ ಜೇನು ಮೂಗಿನ ಮೇಲೆ ಬಿದ್ದು
ತುಟಿಗೆ ಬಂದಾಗ ನಾಲಿಗೆಯ ಸವರು. □

## ಪಂಡೋರಾಳ ಪೆಟ್ಟಿಗೆ

ಪಕ್ಕಿಗಳಿಗೊಂದು
ವಿಶ್ರಾಂತಿಯ ಧಾಮ
ಟಿ ವಿ ಯ ಆಂಟೆನಾ
ಹಿಕ್ಕೆ ಹಾಕುವ ತಾಣ

ತಲೆ ಕೊಟ್ಟು ಕುಳಿತ್ತಿದ್ದೇವೆಂದಮೇಲೆ
ಆತ ಬೋಳಿಸಿದ್ದೇ ಮಾರ್ಗ
ಇದು ಹರಿತ ಕತ್ತಿಯೋ ಮೊಂಡುಕತ್ತಿಯೊ
ಪರೀಕ್ಷೆಗೆ ಸಮಯ-ಸಂಯಮವಿಲ್ಲ
ಪ್ರಯೋಗಕ್ಕೆ ಬಲಿ-ಬಲ

ಈತನಿಗೆ ಬಂದ ಗಿರಾಕಿಗಳನ್ನು
ಕಳಿಸುವುದೊಂದೆ ಗುರಿ
ಬಕಧ್ಯಾನ ಆರಂಭವಾಗುದು ಪಂಚವಾರ್ಷಿಕದಲಿ
ಆಗ ಹಾವು-ಹಾವುಗಾರನ ಆಟ ಆರಂಭ
ಆ ಪುಂಗಿಯ ನಾದ ನಿನಾದವಾಗಿ,
ಬಂಡಾಯ ಮತವಾಗಿ
ನಾಯಕರು ಜಗದ್ಗುರುಗಳಾದಂತೆ.

ನೆಲಕ್ಕೆ ಬೆಂಕಿ ಬಿದ್ದಾಗಲೊಮ್ಮೆ
ಆತನೆ ಸಿಖ್ಖನಂತೆ ಇಸ್ಲಾಮನಂತೆ
ಕ್ರಿಶ್ಚಿಯನಂತೆ ಹಿಂದೂವಂತೆ ಕಾಣುತ್ತಾನೆ ಕನ್ನಡಿಯಲ್ಲಿ
ಸಮಯದಿಂದ ಸಮಯಕ್ಕೆ ಧಾರಾವಾಹಿಯಾಗಿ

ನೆಲ ಆರಿದಾಗ–
ಚೋಲಿಕೆ ಪೀಛೆ ಕ್ಯಾ ಹೈ
ಚುನರಿಕೆ ನೀಚೆ ಕ್ಯಾ ಹೈ

ಅಂಗಿ ಚೊಣ್ಣದ ಗುಂಡಿ ಬಿಚ್ಚಿದಂತೆ
ಈ ಚಾನಲ್‌ಗಳು
ಎಷ್ಟು ಉಜ್ಜಿ ನೋಡಿದರೂ
ನಮ್ಮ ಮುಖವೆ ಕಾಣುತ್ತಿಲ್ಲ
ನಿನ್ನೆವರೆಗೆ ನನ್ನ ಮುಖದಲ್ಲಿಯೆ
ನನ್ನ ಮುತ್ತಜ್ಜರು ನಕ್ಕ ಗೆರೆಗಳು ಕಾಣುತ್ತಿದ್ದವು
ಈ ಹಾಲ ಹಲ್ಲಿನ ಹಸುಳೆಯಲಿ
ನನ್ನ ಮುಖವೇ ಕಾಣುತ್ತಿಲ್ಲ!
ಒಮ್ಮೆ ಪೀನವಾಗಿ ಮತ್ತೊಮ್ಮೆ ನಿಮ್ನ ದರ್ಪಣವಾಗಿ
ನಿಂತು ಬಿಡುತ್ತದೆ ನನ್ನ ಮುಖ ಬಂದಾಗ.

ಗೂಟಕ್ಕೆ ಕಟ್ಟಿದ ಜೀವಿಗಳೊ
ಕಟ್ಟಿಸಿಕೊಂಡ ಜೀವಿಗಳೊ
ಒಟ್ಟಿನಲ್ಲಿ ಬಾಯಿಗೆ ಕಟ್ಟಿದ ಚೀಲದ ತವಡು ತಿನ್ನುತ್ತ
ಗಾಣದೆತ್ತಿನಂತೆ ತಿರುಗುತ್ತಿವೆ
ಕಣ್ಣಪಟ್ಟಿ ಬಿಚ್ಚಿದರೆ ಕಂಡೀತು ಜಗ
ಮಾತಾಡೀತು ನೆಲ ಮುಗಿಲುಗಳ ಮನ್ವಂತರದ ಬಗೆ
ಮಣ್ಣು ಕಣ್ಣುಗಳ ಬಗ್ಗೆ
ಕಂಡೀತು ನಮ್ಮ ಮುಖ ಕನ್ನಡಿಯಲಿ.

□

## ಇಳಾಗಾನ

ಹೊತ್ತಲ್ಲದ ಚಿತ್ತದಿ
ಹದವಿರದ ಭೂಮ್ಯಾಗ
ಬಿತ್ಯಾರ ಏನೇನು
ತರತರದ ಬ್ಯಾನಿ ಉಡಿಯಾಗ;

ಬೇವಾದರೂ ಐತಿ ಮರ ತಂಪು
ಹೊಗಿಧಗಿಯೊಳಗೈತಿ ಉರಿಬಿಸಿಲು ಮ್ಯಾಲಿ
ಬಾ ಮಗಳೆ ಕೂಡು
ತಲಿ ಸಡಿಲ ಮಾಡು
ಕೂದಲ ಬಿಡು
ಕಿವಿ ಕೊಡು.

ಏಸೊಂದು ಕೋಣಗಳು
ನಾಲ್ಗೂರು ಮೂಗೂರು ಕಣ್ಣೂರು
ತೊಗ್ಲೂರು ಕಿವಿಯೂರು ಮ್ಯಾಲಿ
ಆಯ್ದು ವರೆಯುವೆನು ಒಂದೊಂದೆ.

ಕರಿಹೊಲದ ಬಾವಿಗೆ ಸುತ್ತೇಸುತ್ತಾವ
ಮಳಿಹುಳುಗಳಿಗೇನು ಹೊತ್ತುಗೊತ್ತು
ತೇವ ತುಂಬಿರುವ ತನಕ ತುಂಬಿತುಂಬಿ ಬರ್ತಾವು
ತಾಯಿಕಣದಲ್ಲಿ ಮೇಟಿ ಏರಿದ್ದ ಹೇನುಗಳೆ
ಮಗಳ ಕಣದಲ್ಲಿ ಬಿದ್ದಾವು ಕೂಸೇ
ಮಣ್ಣೂರಿ ನೆಲಬಡಿದು ಹೇಳಾಕ ನಿಂತಾವು
ಕಾರಿರುಳು ಕಡ್ದು ಹಾಡ್ಹಗಲ ಮಾಡಿ
ಹನಿಹನಿಯ ಕೂಡಿ

ಹಳ್ಳಾಗಿ ನದಿಯಾಗಿ ಕಡಲಾಗಿ ನಿಂತಾವು
ನನ್ನಜ್ಜಿ ನಿನ್ನಜ್ಜಿ ಅವರಜ್ಜಿ ಬತ್ತದ ಬಾಯಾಗ

ಕಾರಿರುಳು ಕಡ್ದು ಹಾಡ್ಹಗಲ ಮಾಡು
ಹಾಡೆಂತ ಹಾಡು ಹೇಳವ್ವ?
ಕಟ್ಟೊಗಟು ಬ್ಯಾಡ ಬಿಚ್ಚೊಗಟಿನ್ಯಾಗ
ಬಿಳಿ ಎಲಿಯ ಬಿಚ್ಚಿ ಹಾಸವ್ವ.

ಹಣ್ಣುಗೂದಲು ನನಗೆ
ಹಣ್ಣಾಗಬೇಕಿನ್ನು ನಿನಗೆ
ಹೆಣ್ಣು ಹಣ್ಣಾಗುವ ಮುನ್ನ ಒಗಟು ಒಡೆಯಲೇ ಬೇಕು

ಪಿರಿಯಾಪಟ್ಟಣದ ಅರಸು, ಚಂದ್ರಗುತ್ತಿಯ ಹೊರಸು
ಬಮ್ಮನೂ ಪರ್ಮ್ಯಾನ ಜೇನ್ಹಾಕಿ ಕೀಲ್ಗುದರಿ
ತೇರಿನ ಮುಂದೆ ಹರಿಬಿಟ್ಟ ಹಾಲು
ಹೆಪ್ಪುಗಟ್ಟದೆ ಹ್ಯಾಗ ಮಾಸೀತು ಹೇಳು?
ಉಪ್ಪು ಹುಳಿ ಕಾರವೆಂದು ಚಪ್ಪರಿಸಿ ಉಂಡಾರು
ಜೋಕುಮಾರ ಕಲೆಂಜ....
ಶೆಟವಿ ಹೇಳಿದ ಶಕುನಗಳು ಬ್ಯಾರೆ

ದ್ಯಾಮವ್ವನ ಕ್ವಾಣಕ್ಕ ಚಿಕ್ಕಾ
ಬಚ್ಚಲ ಮೋರಿಗಿ ಬೆಣೆಗಟ್ಟಿ ಇಟ್ಟಾಂಗ
ಬಾಯಿಗಿ ತುರುಕಿ ಬಾವುಟ
ಜಡಿಮಳೆ ಜಪಿದದ್ದೇ ಜಡೆದದ್ದು ಕಣಕ

ಹೊಲೆ ಮನೆಯಲಿ ಹುಟ್ಟಿದ ಅರಿಸಿಣದ ಗಿಡ
ಹರಿದಾಡಿಸಿತು ಬೇರು
ನಡುಮನೆಯಿಂದ ಪಡಸಾಲೆ ಅಡಿಗೆಮನೆ
ಬೆಳ್ಳಿ ಮೀನಿನ ಹೆಡಿಗೆಯನ್ನೆ ಹೊತ್ತು ನಡೆದ
ಮೊಸರ ಮುತ್ತಿನ ಗುಪ್ಪಲಿ.

ಬ್ಯಾಡವ್ವ ಬಿಡು ಸಾಕು
ಬಿಗ್ಗಂಟಿನಾ ಚುರುಕು
ಹೊತ್ತಿಲ್ದ ಹೊತ್ತು ಬರುವ ಉರ್ಚಗಿ
ತಿಳಿತಿಳಿದು ತಪ್ಪು ಹ್ವಾವಂಗ
ಹೇನು ಕೈಯೊಳಗ ಸಿಕ್ಕು ಜರದ್ಹಾಂಗ

ಹೋದಾರು ಎಲ್ಲಿ ಹ್ವಾದೀತು ಮಗಳೆ?
ತಡತಡ್ದು ಬಂದು ನಿಲ್ಲುವುದು ಅಲ್ಲೆ!
ಊರಿಗೆ ಬಂದವನು ಬೀದಿಗೆ ಬರನೇನೆ?
ಹಾಕು ಉಕ್ಕುಡ ಗಟ್ಟಿ
ಹಗ್ಗ ಬಿಡದೆ ಸೇದು ನೀ ಮೆಟ್ಟಿ

ಸರಿ ಹೇಳು
ಅರಗಿಸಿಕೊಂಡಷ್ಟೇ ಬೆರಗು
ಮತ್ತೆ ಹೆರೆತರೆ ಕೊರಗು

ತಾಯಿ ಮಗಳ ತಲೆ, ಅತ್ತೆ ಸೊಸೆಯ ತಲೆ ನೋಡಿ
ಹಾಡ ಮೆಲಕುತ್ತ, ವರತೆ ಹೊಡೆಯುತ್ತ, ಹಲ್ಲು ಕಡೆದವರೆ
ಆಕಾಶದ ಗುಡುಗಿಗೆ ಮಿಂಚು ಸಿಡಿಲಿಗೆ
ಮಳೆ ಬಂದು ಕುಡಿಯೊಡೆವ ಮುನ್ನವೇ
ಆಡುಗಳೆಷ್ಟು ಕಂದ ಕಚ್ಚಿಲ್ಲ?
ಹೊಟ್ಟೆಯೊಡೆದರೂ; ರಕ್ತ ಲಾಕಿಯಾದರೂ
ಧರಿತ್ರಿಯೇ ಮತ್ತೆ ಬಾಯ್ದೆರೆದು ಗೆಬೇಲಿಗಳ ನುಂಗಿಲ್ಲ?
ಕಳಕಳನೆ ಕುದ್ದು ಒಳಗೊಳಗೆ ನೊಣೆದು
ಕಳಬೆಳಕು ಬಿಡದೆ ಗೋರಿಯಾಗಿಲ್ಲ?
ಬದುಕು ಬರಿದಾಗಿ ಭೂಮಿ ಭಾರಾಗಿ ಭೂಕಂಪನವಾಗಿಲ್ಲ?

ತಗೋ ಮರಿಹೇನು
ಉಗುರ ಮೇಲಿಟ್ಟು ಉಗುರಿಂದಲೇ ವರೆ.

ನಳನಳಿಸುತ ಬಂದ ಒಣಪೈರು
ಹುಟ್ಟಿದೇಳು ದಿನಗಳಲೇ ದೆವ್ವವಾಗಿ ಬಾಡಿ
ಹೊತ್ತುಹೊತ್ತಿಗೆ ಅನ್ನ ನೀರಿಲ್ಲದಿದ್ದರೂ ಎದ್ದದ್ದೆ
ಭುವಿಗೆ ಆಕಾಶವೇ ಅರಗಿನರಮನೆಯಾಗಿ ಕಾಡಿ
ತನಗೆ ತಾ ಭಾರವಾಗಿ ಮಣ್ಣಾಗಿಹುದು
ರಾಮ ಮಲಗಿಹನು ತಾಡೋಲೆಯಲಿ
ಬಾಹುಬಲಿ ನಿಂತಿಹನು ಚಂದ್ರ-ಗಿರಿಯ ಮ್ಯಾಲೆ
ಹೊಲೆ-ಮಾದಿಗರೆಂಬ ಮಾತಿಲ್ಲ
ಮಣಕವಾದರೇನು, ಹಲ್ಲುದುರಿದ ಆಕಳಾದರೇನು
ಮರುಭೂಮಿಯಾದರೂ ಸರಿ

ಬಿತ್ತೇಬಿಡುವ ಠಕ್ಕು ಟಗರು
ಬೆಳಗು ವಿಭೂತಿ ಬಳಿದು ಊದುಕಡ್ಡಿ ಬೆಳಗುವ ಬದುಕು.

ಗಟ್ಟಿ ವರೆಯ ಬೇಡವ್ವ ನೋವು
ಇದ್ದರಿರಲಿ ಹಾಡಲ್ಲೇ ಹಾವು

ಹೊಲೆ ಮನೆಯ ಮಾಡಿ
ಬಾಗಿಲಿಗೆ ಬೇವು ಕೊಲ್ಲೆಯ ತೂಗಿಸಿದ ಹಿಗ್ಗು
ಹೊಲತಿಯಾದವಳಿಗೆ ನೇಯಣ್ಣೆಯ ಶುದ್ಧಿ
ಎಂಥ ಅಮಲಿನ ಮಂತ್ರ!

ಸಿಂಬಳದಲಿ ಬಿದ್ದ ನೊಣ ಒದ್ದಾಡಿದರೂ
ಹೇಸಿಗೆಯ ಮೇಲ್ಬಿದ್ದ ಜೇನುತುಪ್ಪಕ್ಕೆಳಸುವ ನಾಲಿಗೆ

ನನ್ನ ಆಳವ ಬಿಟ್ಟು ನಿನ್ನ ಆಳಕೆ ಬರಲೆ
ತುಳುಕಿಸಿಬಿಡು ಕೊಡ ನೀರು ಹೊರಗೆ ಬರಲಿ
ಬಾಳೆಯು ಮರುಮರುಗಿ ತಾಳೆಯನು ಬಿಡುವಾಗ
ಹಿಂದೆ ಹಿತ್ತಲದಿ ಲಾಕಿ ಹೊಳೆ ಹರಿದಿತ್ತು
ಮುಟ್ಟಿದರೂ ಮುನಿಸು, ನೋಡಿದರೂ ಒಗರು
ಹೊಲೆ ಹೊಲೆಯೆಂಬ ಡಂಗುರ ಮೂರು ದಿನ
ಭೂಮದ ಪೂಜೆಯಲಿ ಕಡಬತ್ತಕಲ್ಲಿಗೆ ನಾಮ
ಆಗಲೇ ಆರಂಭ ನೆಲ ಮುಗಿಲಿನ ಸಂಬಂಧ
ಕೆಚ್ಚಲಕೆ ಅಂಟಿದ್ದ ಉಣ್ಣೆಗಳು ರಕ್ತರುಚಿ ಸವಿಯುವುದು ಹೀಗೆ

ಹಾಗಿದ್ದರೆ ಹ್ಯಾಗೆ ಬದುಕಿದ್ದಳವ್ವ
ಹುಟ್ಟು ಸಾವ ಗಂಡರನೊಯ್ದು ಒಲೆಯೊಳಗಿಕ್ಕು ಎಂದು ?

ಕನ್ನಡಿಯಲಿಟ್ಟು ನೋಡಿದರೂ
ಅದರ ಹಿಂದ್ಹೋಗಿ ಕೆದಕಿದರೂ
ಹೆಜ್ಜೆ ಬಲು ಮಸುಕು ಮಗಳೇ
ಓದು ಪುರಾಣಗಳಲಿ ಬೆಣ್ಣೆಯೇ ಭಾರ
ಕರಗಿಸಿ ಅರಸಬೇಕು ಆಗಲೇ ಸಿಗುವುದು ಸೂರು
ಕಣ್ಮುಚ್ಚಿದಾಗ ಕಪ್ಪರ ಮೇಲೆರಡು ಊದುಕಡ್ಡಿ
ಅದರ ಮೇಲೊಂದು ಗಿಡ ಹುಟ್ಟಿ
ಅರಳುವವು ಪಾಪದ ಹೂಗಳು ಪುಣ್ಯದ ಹೂಗಳಾಗಿ

ಬೂದಿಬಕ್ಕನಿಗೆ ತಲೆಯ ಮೇಲೊಂದು ಗಡಿಗೆ
ತೊಡೆಯ ಮೇಲೊಂದು ಗಡಿಗೆ
ಚಿತ್ತಚೋರನಿಗೆ ಹದಿನಾರು ಸಾವಿರ ಕೊಳಲು
ದಿಗಂಬರನಿಗೆ ತೊಂಬತ್ತಾರು ಸಾವಿರ ನವಿಲು
ಏಸು ಸೀರೆಗಳ ಬಿಚ್ಚಿ ಅಗಸನಿಗೆ ಕೊಟ್ಟಿದ್ದು?
ಏಸು ಬಾರಿ ಬೆಂಕಿಯಲಿ ಬಿದ್ದೆದ್ದು ಬಂದದ್ದು?
ಹೆಸರಿಸಲೇನು ಇರುವೆಗಳ ಸಾಲು
ಹುತ್ತರಿದೇವಿ ಕಾಶಿಬಾಯಿ ಭಾಗೀರಥಿ ಮಾಸ್ತಮ್ಮ....

ಬಿಡವ್ವ ಓಡಿಸುವಿಯಾಕೆ ಬರಿ ರೈಲು
ಸಾಕು ಬಿಡು ನೀ ತಲೆ
ಹೇನಿಗಿಂತ ವರೆತವೇ ಹೆಚ್ಚು

ಎಲ್ಲಿದೆ ಮಗಳೇ ರೈಲು?
ನಿನ್ನ ಅಕ್ಷರಗಳಲ್ಲಿದ್ದರೆ ಹೇಳು
ವೇದ ಪುರಾಣ ಶಾಸ್ತ್ರ ಸಮ್ಮತಿಯ
ಜೋಡು ಹುಂಜಗಳ ನಡುವೆ ಆಡಿದ ಕೋಳಿಯ ಹೆಸರು
ಯಾವ ಕೋಶಗಳ ಸ್ಮಶಾನದಲ್ಲಿ ಹುಗಿದಿದೆ ಹೇಳು
ಸೋಮಶೇಖರ ಚಂದ್ರಶೇಖರ, ಸಂಗ್ಯಾಬಾಳ್ಯಾರ ಬದುಕು
ಹಾದರದ ಹಾಡಾಯ್ತು ಮಗಳೇ....

ಯಾಕಿಲ್ಲವ್ವ?
ಒಂದೇ ವರಳಲಿ ಕುಟ್ಟಿದ ಪಾಂಡವರ ಮರೆತೇನು?

ಹಟ್ಟಿಹಬ್ಬದ ಹೆಂಡಿಪಾಂಡವರ ನಾ ಹ್ಯಾಗೆ ಮರೆಯಲಿ ಮಗಳೇ
ಕೋಳ್ಯಾಗಿ ತಿಪ್ಪೆ ಕೆದರಬೇಕು
ಸುಭದ್ರೆ ಹಿಡಿಂಬೆಯರ ಅಡಕಲೊಟ್ಟಿ
ಕುಂತಿ ಹಾಕಿದ ಸುವರ್ಣದ ಚೌಕಟ್ಟು ಬ್ಯಾರೆ
ಎಲ್ಲ ಕಾಲಿನ ಅಡಿಗೆ ಮುಡಿಗೆನ್ನುವ ಮಾತಿಲ್ಲ
ಮುಡಿಗೇರಿದ ಮಲ್ಲಿಗೆ ಮರುದಿನ ಎಲ್ಲಿಗೆ
ಏರಿಸುವೆಯೇನು ದೇವರ ಮುಡಿಗೆ?

ಬದುಕಿಹುದು ಬೆತ್ತಲೆ ಕಾಡು
ಉಸುರಿದಷ್ಟೇ ಗಾಳಿಯ ನಾಡು

ಹಳೆಯ ಗಾಯದ ಹಕಳೆಯ ಹಾಡು
ಏಳಲಾಗದ ಕತ್ತಲೆಯ ಗೂಡು
ತಿಳಿದಷ್ಟೇ ಅವರಿವರ ಮನೆಯ ಮಾಡು

ಅರ್ಥವಾಯಿತು ಬಿಡವ್ವ ನಿನ ಪಲ್ಲ
ಶುದ್ಧ ಗಂಧದ ಕೊರಡು ತೇದಂತೆ
ತಿಕ್ಕಿದಷ್ಟು ಪರಿಮಳವೆ ಬಿಡು
ಮಾತೃಕುಟುಂಬದ ಹಣೆಗೆ ತಿಲಕ
ಪಾರ್ವತಿ ಪರಮೇಶ್ವರ;
ಲಕ್ಷ್ಮೀನಾರಾಯಣರೆಂಬ ಮೂಡು
ಅಳಿಯ ಸಂತಾನದ ಸೂಡು
ಬಿಡು ಬಿಡು ನಾನೆದ್ದೆ
ಮೈಲುಗಲ್ಲಾಗುವ ಆಸೆ ನನಗಿಲ್ಲ....

ಬತ್ತಿಹೋದವಳು ಬಲದ ತೃಷೆ
ನನಗೂ ಇಲ್ಲ ಮಗಳೆ ಆಸೆ
ಹಾಡನರಿಯದ ಹಾಡ ಹಾಡುತಲೇ ಇರುವೆ
ಬಿಚ್ಚಲಾಗದ ಗಂಟು ಬಿಚ್ಚುತ್ತಲೇ ಇರುವೆ
ಈರುಳ್ಳಿಯ ಪೊರೆಯ ಬಿಚ್ಚಿದ್ದೇ ಭವ
ಕಾಳಿನಲ್ಲೇ ಅಡಗಿದೆ ತೆನೆಯ ತೇವ
ಕಾಯಿಸಬೇಕು ರೊಟ್ಟಿಯಾಗಲು ಮತ್ತೆ ಭಾವ
ಆಗಲೇ ಪಡೆಯುವೆ ನೀ ಇತ್ಯರ್ಥತೆಯ ಜೀವ
ಸಿದ್ಧಳಾಗು ನಿನ್ನ ಮಗಳ ತಲೆಯ ನೋಡಲು ನೀನು
ಪತಿಯೊಡನೆ ಉಂಡಂತೆ ಉಡಿಯೊಳಗೆ ನೋವು ನಲಿವು ನಾನು
ಚಲ್ಲಿ ಬದುಕುವುದಲ್ಲ ಕಟ್ಟಿಕೊಂಡೇ ಬದುಕಬೇಕು
ಹುಡುಕಬೇಕು ಸಿಕ್ಕದಿದ್ದರೂ ಹುಡುಕುತ್ತಲೇ ಬದುಕಬೇಕು

ಹೋಗಬೇಡ ಕೇಳು
ಬದುಕು ಬಣ್ಣದ ಬುಗುರಿಯಲ್ಲ ಮಗಳೆ
ಅದು ಆಡಿಸಿದಂತೆ ಆಡುವುದು
ಕಟ್ಟಿದೆಯಲ್ಲ ತುರುಬು ಕಟ್ಟು
ಕೂದಲುದ್ದ ಇದ್ದರೂ ಕಟ್ಟಿದಂತೆಯೇ ತುರುಬು

ಬೀದಿ ಅರಿಯದ ಹಾಲಹಲ್ಲಿನ ಹಸುಳೆಗೆ ಹೆದ್ದಾರಿ ತುಳಿವಾಸೆ
ಏಸು ದಾರಿಯ ನೀರು ಕಲಕು

ಕಟ್ಟೊಡೆಯ ಬಲ್ಲುದೆ ಅಣೆಕಟ್ಟು
ನೀಗದ ಬಾಯಾರಿಕೆ
ತಾಳ್ಮೆಯಿಲ್ಲದ ಹರೆಯಕೆ
ಅಣೆಕಲ್ಲಾಡುವ ಬಯಕೆ
ಕದ ತೆರೆಯದ ಕಣಕೆ
ಕೈ ಜಾರಿ ಆಟ ಹೋದಾಗಲೆ 'ಲೊಚ್ಚ'.

ಕುಂಕುಮದ ಮೇಲೆ ತಿಲಕದ ಸವಾರಿ
ತಿಲಕದ ಮೇಲೆ ಕುಂಕುಮದ ಸವಾರಿ

'ಅದಲು ಬದಲು ಕಂಚಿ ಕದಲು
ಇವರ ಬಿಟ್ಟವರ್‍ಯಾರು
ಅವರ ಬಿಟ್ಟವರ್‍ಯಾರು'

ಮಕ್ಕಳಾಟಕೆಯಂತೆ ಹುಡುಕಾಟ
ತಕ್ಕಡಿಯಲಿ ತನ್ನುವೇ ಎರಡು ಕಾಲು
ಎರಡು ಬದಿಯಲ್ಲಿಟ್ಟು ತೂಗುವ ಪರಿ
ಎತ್ತಿದರೂ ಎತ್ತಿದರೂ ಎತ್ತಲಾಗದ ಮಿಂಡರ ಜೋಕಾಲಿ
ಕಣ್ಣು ಕಟ್ಟಿದರೂ ನ್ಯಾ (ಮಾ)ಯಗಾತಿ.
ಕಣ್ಣು ಬಿಚ್ಚಿದರೂ ನ್ಯಾ (ಮಾ)ಯಗಾತಿ.

□

## ಕಡಲುಪ್ಪು ಕಾವ್ಯ

ಕಡಲುಪ್ಪು ಕಾವ್ಯಕ್ಕೆ
ಹಸಿಬಿಸಿಯ ಪಲ್ಲ:

ತಿರುಗಿ ತಿರುಗಿ ಚಕ್ರಪಾಣಿ ಹರಿಯುವುದ್ಯಾತಕ್ಕೆ?
ಎದ್ದ ಗುಳ್ಳೆ ಮುಳುಗಿ ಎದ್ದು ಒಡೆಯುವುದ್ಯಾತಕ್ಕೆ?
ಅರಗಿನ ಮನೆಯು ಬೆರಗಿಲೆ ಕರಗಿ ಚಿತ್ರ ಮೂಡುವುದ್ಯಾತಕ್ಕೆ?
ಮುಗಿಲುದ್ದಕ್ಕೂ ಕತೆಯು ಹಾಸಿ ಹೊದ್ದು ಬೆಳೆಯುವುದ್ಯಾತಕ್ಕೆ?

ಗಾಳಿ ಬೆಳಕು ನೆಲ ನೀರು ಕೂಡಿ ಆಡಿದ ನೆಲ
ಹುಲಿ ಹಸುಗಳು ಕೂಡಿ ಮಲಗಿದ ಭೂಮಿ
ಹಗಲು ರಾತ್ರಿಯಲಿ ಪೂರ್ವ ಪಶ್ಚಿಮ; ದಕ್ಷಿಣೋತ್ತರ
ಹರಿದ ಮುಗಿಲಿದು ಬಿರಿದ ನೆಲವಿದು
ಕಪ್ಪಾಗಿದೆ ಒಡಲು, ಉಪ್ಪಾಗಿದೆ ಕಡಲು
ಹಣ್ಣು ಹೂವು ಕಾಯಿ ಬೀಜಗಳು ಬಿಡಿಸದ ಸಂಬಂಧ
ಕರಗದ ಕಲ್ಲಿಗೆ ಹರೆಯದ ನೀರಿಗೆ
ಬಲವಿಲ್ಲದ ಬಳ್ಳಿಯ ಬಂಡಾಯ
ಶಾಂತಿ ಬೀಜಗಳ ಸಂದಾಯ

ಅಜ್ಜ ಚಿಂದಿಯ ಗಂಟಿನಲಿ
ಸಿಕ್ಕ ಅಂಕಿಯ
ಹಿಂದಿನ ಸೊನ್ನೆಗಳು

ನೆಲವಿಲ್ಲದ ನೀರಲಿ ರುಚಿಯಿಲ್ಲ, ಬಣ್ಣಿಲ್ಲ, ಬಲವಿಲ್ಲ
ಧರೆ ತುಂಬದರ ಬೇರೆಲ್ಲ
ಆಟವು ಇಲ್ಲ ಹೊಯ್ದಾಟವು ಇಲ್ಲ
ಮರಿ ಮೊಟ್ಟೆಗಳಿಲ್ಲದ ಪಾರಜ
ಎತ್ತ ನೋಡಿದರತ್ತ ಮಂಜಿನ ಲೋಕ
ದನಿಯುಂಟದಕೆ ರೂಪಿಲ್ಲ, ನಿದ್ದೆಯಿಲ್ಲ–ನೀರಡಿಕೆಯಿಲ್ಲ

ನಿರಾಕಾರದಲಿ ಆಕಾರವೊಡೆದ ಜೀವಿಗಳು
ಪಸಿರು ಎಲೆಗಳಲಿ ಸಪ್ತವರ್ಣಗಳು
ರೆಂಬೆ ಮಿಡಿದವು ಸಪ್ತ ಸ್ವರಗಳು
ನೆಲ ಜಲ ವಾಯುಗಳ ಪಿಂಡ; ಅಗ್ನಿಯ ಕುಂಡ
ಪ್ರಾಣ ಜೀವ, ಜೀವದ ಭಾವ
ಹೊತ್ತು ತುಂಬಿದ ಕುಂಭ
ಜಗ್ಗಿದರೆ ಹಿಗ್ಗುವ ಬಗ್ಗಿಸಿದರೆ ಡೊಗ್ಗುವ
ಹಾಸಿದರೆ ಮಲಗುವ ಎಬ್ಬಿಸಿದರೆ ಬೆಳಗುವ
ನಿತ್ಯ ಬಿಂಬ ಸ್ತಂಭ ಇದಕಿಲ್ಲ ಜಂಭ.

ಸನ್ಯಾಸಿಯ ಜೋಳಿಗೆಯಿಂದ
ಹೊರಬಂದ ಮೊಟ್ಟೆಗಳು :

ನಿಷ್ಕಳಂಕಳು ಧರಣಿ
ಹರಿಯ ಬಿಟ್ಟವಳು ನಿರ್ಮಲ ಜಲ
ಹೊತ್ತು ನಿಂತವಳು ಹಗಲಿರುಳೆನ್ನದೆ ಜೀವಸಂಕುಲ
ಹಿಡಿದರೆ ಹಿಡಿತಕೆ ಸಿಗದ ರೆಂಬೆಗಳು
ಎಣಿಸಿದರೆ ಎಣಿಕೆಗೆ ಸಿಗದ ಜೀವ, ಕೋತಿಗಳು
ಬಾಲದಲಿ ಬಾಲ, ಜೀವ ಜೋಳಿಗೆ ಬೆಳಕು
ಹೆಮ್ಮರಕೆ ಸಾಕ್ಷಾತ್ಕಾರ
ವರುಣನಿಗೆ 'ಗಿಲಗಿಂಚಿ'ಯ ಚಮತ್ಕಾರ.

ಕಾಲಚಕ್ರದ ಹಲ್ಲು ಹಲ್ಲಿಗೂ
ಹೂವು ಕಾಯಿ ಹಣ್ಣುಗಳಿಲ್ಲದ ರಸಜ್ವಾಲೆ
ಮುಪ್ಪು ಕಂಡರೂ ಹಲ್ಲುಗಳುದುರದ ಯೌವನದ ಬಾಲೆ
ಆಡಿದ್ದೇ ಆಟ ನೋಟಗಳದ್ದೇ ಕೂಟ
ಸುತ್ತುವರಿದ ನೆರಳ ತುಂಬ, ಜೀವ ಜಾತಿಗಳದೆ ಮಾಟ
ನೀಲಿ ವರ್ಣದ ಛಾಯೆ, ಯಾವ ಸಂಕುಲದ ಮಾಯೆ
ಉಸುರಿದರೂ ಉಸಿರಿಲ್ಲ ಜೀವ ಸಂಜೀವಿನಿಯೆಲ್ಲ.

ಕುಡಿಗೋಲಿನ ಬಾಯಿಗೆ
ಹಸಿರು ಪೈರು :

ಸುತ್ತುವರಿದ ಮರ

ವಾನರ ಮೀರಿದ ಸ್ತರ
ರೆಂಬೆಯಿಂದಿಣುಕಿ, ಸಾಹಸದಿ ತಿಣುಕಿ
ಮರಿಕೋತಿ-ಕೈ ಬೆಳೆಸಿಕೊಂಡು ಕರಾಪು ತಿದ್ದುತಲಿತ್ತು
ದಿನೇ ದಿನೇ ಬಾಲ ಕಳೆದುಕೊಳ್ಳುತಲಿತ್ತು
ಕೋತಿ ಹೇಳಿದ ಕತೆಯ ಮರೆಯುತಲಿತ್ತು
(ಕೋತಿಯ ಕೂದಲು ಬೆಳ್ಳಗೆಪ್ಪಿತ್ತು?)

'ಮರೆತು ಎಂದೂ
ನೆಲಕೆ ಬಿದ್ದ ಹಣ್ಣನೆಂದೂ ಉಂಬಬೇಡ
ಅರೆತು ಮರೆತೂ
ನೆಲದಲೆಂದೂ ಕುದುರೆಯಾಟ ಆಡಬೇಡ
ನಾ ತಂದೆ
ನಾನೆ ತಾನು, ನಾನೇ ನಾನು ಎನ್ನಬೇಡ'

ಆರಂಭ: ನೆಲದೊಡನೆ ಮುಟ್ಟಾಟ
ಮಂಗನ ಸರತಿ ಚಿಂಪಾಂಜಿಗಳವರೆಗೆ
ನೀರ ಸರಿಯುತ್ತ ಸರಿಯಿತು
ಪಾರಜ ಒಡೆಯುತ್ತ ಒಡೆಯಿತು
ನೆಲಬೇಲಿ ಬೆಳೆಯುತ್ತ ಕೊರೆಯಿತು

'ಬಂದಿತು ನಾಗ ತಂದೆಂದಿತು ಜಾಗ
ಆದಿ ಮುಂಗುಸಿಯ ಕಾಲ ಕಳೆದುಕೊಂಡಿತು ಬಾಲ
ಕದನದ ಸಾಕ್ಷಿಗೆ ಕಪ್ಪೆಯ ಸಂತಾನ
ಕಳೆದ ಬಾಲಕೆ ಇಲಿಯ ಸಂತಾನ'

ಬೆಳಗು ಹಗಲಾಯಿತು ಕತ್ತಲು ಇರುಳಾಯಿತು
ಕುದುರೆಯಾಟಕೆ ಕಿರೀಟ
'ಆಹಾ ಓಹೋ ಏಹೇ'
ಸೋಜಿಗ ಮೋಜಿಗ ಮೋಡಿಗ ಮೋಹಗ....
ಕೋಣದ ಮೇಲೆ ಎತ್ತುಗಳು, ಎತ್ತಿನ ಮೇಲೆ ಕುದುರೆ
ಕುದುರೆಯ ಮೇಲೆ ಐರಾವತ
ಎಲ್ಲಿಯದೀ ಸೂತ್ರ?
ಏನು ಚಂದವದು ಏನು ಅಂದವದು

ಮಾಯದ ಮಾಟದ ಪೀಠ, ಜೀವದ ಗೋಪುರದ ಆಟ
ಕುದುರೆಯ ಕೊರಳಿಗೆ ಕತ್ತಿಯ ಮಸೆತ
ದಿನ ಬೆಳಗಾದರೆ ಮಂಗಗಳೆರಡು
ತಿಂದೇ ತಿನ್ನುವವು ಒಂದಿನ್ನೊಂದರ ಬಾಲ

ಖಂಡ ಖಂಡದಲಿ ಅಡಿಗೆ ಮಾಡಿ
ಉಂಡ ತುಂಡುಗಳು :

ಪರದೆ ಮಂಜಿನ ಕಲ್ಪಲೋಕ
ನೃತ್ಯಗೈಯುವುದು ಕನಸಿನ ತಾಪ
ಅರಗಿನರಮನೆ ಮುಗಿಲಿನೆತ್ತರಕೆ
ಹಾಳೂರ ಮೇಲೆ ಹೊಸೂರ ಸವಾರಿ
ಕೋತಿಯ ಹೆಗಲೆಲ್ಲೊ, ಮಂಗನ ಹೆಗಲೆಲ್ಲೊ,
ಶೋಧದ ಬಿಂಬ
ಸಸಿಯಲೇ ಆರಂಭ ಈ ಬಿಂಬ ಜಂಭ.

'ಮೋಜೋ ಮೋಜು ಹಾವಿಗೆ
ಕರೆಯಿತು ಕಪ್ಪೆಯ ನೀರಿಗೆ
ಜಗ್ಗಿತು ಸೂತ್ರ ಬಡಿಯಿತು ಗಂಟೆಗೆ
ಎಳೆಯಿತು ಇಲಿಯ ನೀರಿಗೆ'

ಅಂಗಳದಲಿ ರಂಗೋಲಿ ಬರೆದಿತ್ತು
ಕಲ್ಲು ಕಲ್ಲ ಮೇಲೆ ಚಿತ್ರ ಮೂಡಿತ್ತು
ಮೊಲಕೆ ನಾಯಿ ಬೆನ್ನಟ್ಟಿತ್ತು
ಪಾಯ ಬಿದ್ದಿತು ಗುಡಿ ಎದ್ದಿತು
ತೋರಣ ಕಟ್ಟಿತು ಕಲಶ ಹುಟ್ಟಿತು
ಗಂಟೆ ಒಂದು ಕೈ ಖಡ್ಗ ಒಂದು ಕೈ
ಕಾಂಚಾಣವೊಂದು ಕೈ ಪೊರಕೆ ಒಂದು ಕೈ
ಕುದುರೆಯ ಆಟದ ಸಂಗೀತ
'ಥಕ್ ದಿಮಿ ಥಕ್ ಜಣು ಥಾ ಥೈ ಥಕ್'
ಬೊಂಬೆಯ ಆಟಕೆ ಅಂಕದ ಪರದೆ
ಯಕ್ಷಗಾನವೇ ಆರಂಭ.

ಅಣ್ಣನ ತಟ್ಟೇಲೆ ತಮ್ಮ ಮಲಗಿದ
ಮೂಗಿಲ್ಲದಿದ್ದರೂ ಮನ್ಮಥರು

ಭೂತ ಹಿಡಿದ 'ಕತ್ತಲೆ'ಗಳು
ನೆಲ ಕಚ್ಚಿದ ವಜ್ರದ ಕಿರೀಟಗಳು
ಪಳೆಯುಳಿಕೆಯ ಹರಿದ ಬೇರುಗಳು

ಶಂಬುಕ-ತ್ರಿಶಂಕುಗಳಿಗೆ ಸ್ವರ್ಗದ ಜೋಗ
ರಾಮ-ಪರಶುರಾಮರಿಗೆ ಸಮರದ ಭೋಗ
ದ್ರೌಪದಿಯ ಮುಡಿಯಲಿ ಮೃಷ್ಟಾನ್ನದ ಯೋಗ
ಎಲ್ಲಾ ಹಳೆ ಕಡತಗಳಲಿ ಬುಡುಬುಡುಕೆಯ ರೋಗ.

ಮನ ಹಿಡಿದಿಟ್ಟವ ಮಂಜಿಗೆ ಸೋತ
ದಂಡ ಹಿಡಿದವ ಇತಿಹಾಸಕೆ ಸೋತ
ಸ್ಪರ್ಧೆಗಿಳಿದವ ಅಲ್ಲೇ ಇದ್ದ
ಕಾರಣ ಹಿಡಿದವ ಪ್ರಕೃತಿ ಗೆದ್ದ
ಜ್ಞಾನದೊಂದಿಗೆ ವಿಜ್ಞಾನದ ಯುದ್ಧ.

ಗಾಲಿ ದುಂಡಗಿದೆಯೋ ತಮ್ಮ
ಸದಾ ತಿರುಗುತಲಿದೆಯೋ ಅಣ್ಣಾ.

ಕೆಂಬಾವುಟ ಕೈಗಳು
ಹಸಿದ ಹುಲಿಯ ದನಿಗಳು :

'ತಿರುಗಿದೆ ತಿರುಗಿದೆ ಗಿರಿಗಿರಿ ಗಿರಿಗಿರಿ
ಅಜ್ಜನ ಬುಗುರಿ, ಅಜ್ಜಿಯ ಕಾಲುಂಗರ
ಹೊತ್ತನು ಕಂದ ಹತ್ತು ಮಣ
ಕತ್ತೆಯ ಹೇರಿಗೆ ರದ್ದಿಯ ಕಾಗದ'

ಹಿತ್ತಲ ಬಳ್ಳಿಲಿ ಹಾವು-ಏಣಿಯಾಟ
ಕಾಡು ಬಳ್ಳಿಯ ಕಾಯಿಗೆ 'ದೊಂಪದ ಬಂಟ'
ಚಡ್ಡಿ ಗಡ್ಡಗಳ ಲಾಟಿ ಕವಾಯಿತು
ಖಡ್ಗ ಕೋವಿಗಳ ಮಾತು ಮಹಿನತ್ತು
ಕಪ್ಪಿರುವೆ ಕಾಲಿನ ಒರವಣಿಗೆ
ಕೋಣ ಎತ್ತು ಕುದುರೆ ಆನೆ ಒಂಟೆ ಐರಾವತಗಳ ಮೆರವಣಿಗೆ

ಮಾತನಾಡುವುದು ಗಾಳಿ, ಓಡಿಹೋಗುವುದು ಕಬ್ಬಿಣ
ಬೆತ್ತಲೆ ಮಾಡಿ ಉತ್ತರ ಕೊಡುವುದು
ಸುಣ್ಣ ಕಾಚದ ಡಬ್ಬಿ

ಕರುಳ ಹರಿದರೂ ಗಂಟನು ಹಾಕಿ ಉಸುರಿದೆ ಜೀವ
ಎಕ್ಕೆ ಎಲಿಯ ಚಪ್ಪಲಿಯಿಂದ ತೊಟ್ಟು
ಬಂದನು ಬೂಟುಗಳೊಡೆಯ
ಅಗ್ಗಿಷ್ಟಿಕೆಯೋ ಬೆಂಕಿ ಪೊಟ್ಟಣವೋ
ಉತ್ತರ ಇಲ್ಲುಂಟು(!)
ಹಗಲು ರಾತ್ರಿ ಎರಡರಲ್ಲೂ ಯಾವುದು ಮೊದಲು ಎನ್ನುವಗೆ.

ರಕ್ತವಿಲ್ಲದ ರಕ್ತ, ಸಂಬಂಧಗಳ ಅರ್ಥ ವ್ಯರ್ಥ
ಬರಿದಾಗಿಹ ಗೂಡುಗಳು ಹರಿದ ಜೇಡರ ಎಳೆಗಳು
ಬೆಳಗು; ಸಾವಿರಾರು ಬಲ ತೋಳುಗಳು, ವಜ್ರದ ಬೆಳಕುಗಳು
ಸಂಜೆ; ಗದ್ದೆ-ಕಾರ್ಖಾನೆಗಳು ಹೀರಿ ಎಸೆದ ಹಿಪ್ಪೆಗಳು
ಸಮುದ್ರದಲಿ ತೇಲುವ ಹಿಮಬಂಡೆಗಳೋ
ಬಾಯೆಲ್ಲಿವಕೆ ಮೂಗೆಲ್ಲಿ
ಭೂಮಿಯನೇ ಕೊರೆವ ತೆರೆಗಳ ದನಿಗೆ ಕಿವಿಯಿಲ್ಲ
ಶವ ಹೊರದೆ, ಹುಗಿಯದೆ, ಹರಿಯದೆ
ನುಂಗುವ ಪಾಶಾಣಗಳೋ?
ಬಿಸಿಲಿಗಾಗಿ ಕಾದವರು ಬಿಸಿಲಾಗಿ ನಿಂತವರು
ನೆರಳಿಗಾಗಿ ಕಾಯುವವರು ಕೊಡೆ ಹಿಡಿದು ನಡೆದರು

ಬೆವರ ಹನಿಯ ಕಡಲಿನಲ್ಲಿ
ಭುಗಿಲೆದ್ದ ತೆರೆಗಳು :

ಬಂದಿತು ಬಂದಿತು ಮನೆ ಬಾಗಿಲಿಗೆ
ಬಂಡಾಯದ ಧ್ವನಿಗಳ ದೀವಳಿಗೆ
ಹೆಗಲು ಕೊಟ್ಟವು ಯಜ್ಞದ ಕುದುರೆ
ಜಟಕಾ ಬಂಡಿಯ ನೊಗಗಳಿಗೆ.

ವಸಂತ ಶಿಶಿರದ ದೌಡು, ಮರದೆಲೆಗಳ ತೌಡು
ಬೆದರಿದ ಗೋಪುರದಡಿಪಾಯದ ಕಲ್ಲುಗಳು
ಹಗಲಲಿ ಕುಣಿದ ಬೆದರು ಬೊಂಬೆಗಳು
ಬಿತ್ತು ಬೆವರಹನಿ ಹರಳಾಗಿ ನೆಲದೊಳಗೆ
ಭುಗಿಲೆದ್ದಿತು ರೋಸಿ ಹರಿಬರಿ ಕಡಲೊಳಗೆ
ಕಡೆಯಿತು ಕಟ್ಟೆ ಒಡೆಯಿತು ಮೊಟ್ಟೆ
ಹೊಯ್ದಾಡಿತು ನೀರು ಸಮುದ್ರದಲಿ

ಹನಿ ಹಳ್ಳ ಕೆರೆ ನದಿ ನಾಲೆಗಳೆಲ್ಲ ಸೇರಿದವು
ಮೀನು ಮೊಸಳೆ ತಿಮಿಂಗಿಲ
ಇದು ಅದು ನುಂಗಿ ಅದು ಇದು ನುಂಗಿ
ನೀರು ಕುಡಿದವು ಹಾಡ್ಹಗಲೆ
ಸಂಪ ಸಮುದ್ರದಿ ಉಯ್ಯಾಲೆಯು ತೂಗಿ
ಕೊರೆಯಿತು ನೆಲ ಸವೆಯಿತು ಬಂಡೆ
ಹೊರೆ ಹೊರೆಗಳು ತೆರೆ ತೆರೆಯಾಗಿ ಅಪ್ಪಳಿಸಿದವು 'ಧಬ್ಬಲ್ಲನೆ'.

'ಬೆಳ್ಳನೆ ಬಾನೆಲೆ ಬಂದಿತು ಗಿಡುಗ
ಇಲಿಯನೆತ್ತಿತು ಮನ ಕರಗಿ
ಇಲಿಯ ಹಿಂದೆ ಕಪ್ಪೆ, ಕಪ್ಪೆಯ ಹಿಂದೆ ಹಾವು
ಎಲ್ಲಿಯ ತನಕ ಕಪ್ಪು-ಬಿಳುಪಿನ ಬಣ್ಣದ ಸೂತ್ರ?'

ಗೋಪುರದಡಿಪಾಯದ ಮಕ್ಕಳ ಕಂಡು
ಕರಕರ ಕರಕರ ಹಲ್ಲು ಕಡಿದಳು
ಕಣ್ಣುಗಳಲ್ಲೇ ಕೆಂಡ ಕಾರಿದಳು
ಕಂಪನ ಕಂಪನ ಅಡಿಮುಡಿವರೆಗೆ
ಮೈದೋರಿದಳು ಚಾಮುಂಡಿ
ಸಮುದ್ರ ಮುದ್ರೆಯಯ ತಾ ನುಂಗಿ
ಭುಗಿಲೆದ್ದಿತು ಒಡಲಾಗ್ನಿಯ ಕಡಲಾಗ್ನಿ
ಬೆವರಿನ ಜೊತೆಗೆ ಕಂಬನಿ ಕೂಡಿ
ಹರಳುಗಟ್ಟಿತು ಉಪ್ಪಿನ ಶಿಖರ
ಉಪ್ಪು ನಿರಂತರ ಬೀಸುವಳವ್ವ ಕಡಲಲ್ಲಿ
ಕುಡಿಯದಿರಲೆಂದೀ ನೀರ್‍ಯಾರೂ
ಕುದುರೆಯಾಟದ ಗೋಪುರವೆಲ್ಲ
ನೆಲಸಮನಾಗಿ ನಿಲ್ಲುವ ತನಕ
ಬೀಸಿ ಬೀಸುವೆನೆನ್ನುವಳು
ಕಡಲುಪ್ಪಿನ ಕಾವ್ಯ ಕಟ್ಟಿ ಹಾಡುವೆನೆನ್ನುವಳು.

ಇತಿಹಾಸದ ಚಕ್ಕಡಿ, ಚಕ್ರದ ಬಾಯಿಯಲಿ
ಪರಿಮಳ—ಬಣ್ಣಗಳಿಲ್ಲದ ಹೂಗಳ ರಾಶಿಯ ಮೊಳಗು
ನೆಲಸಮನಾಗೆ ನೀರು ಹರಿಯುವುದು
ಉಪ್ಪು ಸಕ್ಕರೆಯ ಸಂಜಾತ
ಸಮರಸದ ಜೋಗದ ಜಲಪಾತ.

## ಸಪ್ತಮಾಸಗಳ ತೇರು

ವಟ್ಟಿ ಮಾಸ

ಕ್ಷಮಿಸು ತಾಯಿ,
ನೀ ಹುರುಕು ನಾಯಿ ಹೇಗೆ?
ಮಾಸದನ್ನಕೆ ಮೂಲ ಹೇಗೆ?
ಪಾಂಡವರು ಕಳೆದು ಹೋಗಿ
ಅಕ್ಷರ ಓಡಿಸಿತು ಹಳ್ಳಿ
ಬಾಚಿ ತಬ್ಬಿತು ದಿಲ್ಲಿ
ಉಳಿದದ್ದು ಬರಿ ಎಲುದೊಗಲ ದೇಹ
ಮಾತು ಹಳ್ಳಿಯದು
ಮನಸು ದಿಲ್ಲಿಯದು
ಹಳ್ಳಿಗೂ ದಿಲ್ಲಿಗೂ ಸದಾ ಯುದ್ಧ
ಅಳೆಯಲು ಕೊಳಗ ಸಾಲದು
ತುಂಬಲು ಮನಸು ಸಾಲದು.

ದೋಣಿ ಮಾಸ

ಕಪ್ಪನೆಯ ಮಣ್ಣಲ್ಲಿ ಕಪ್ಪೆನ್ನು ಹರಿದಾಡಿ
ವಜ್ರಕಾಯದ ಕವಚ ಮೆಟ್ಟಿ
ನಡುಮನೆಗೆ ಬಂಟವಾದವಳು
ಐದು ಹೆಳ್ಳೆಗಳ ಮೀಟಿ
ಕುಂಕುಮವ ಸೀಟಿ
ಬರಬಿರಿದ ಭೂಮಾತೆ
ನಾನವಳ ಹೆಗಲ ಮೇಲೆ
‘ದೊಡ್ಡವ ನಾನು ನಿನಗಿಂತ
ನೋಡವ್ವ ಎಷ್ಟೆತ್ತರ!’
ದೊಡ್ಡ ದನಿ ತೆಗೆದು ಹೇಳುತ್ತಿದ್ದೆ
ಅವಳು ಕೈ ಬಿಟ್ಟರೆ ಸಾಕು

ಗಪ್ಪನೆ ತಲೆ ಹಿಡಿಯುತ್ತಿದ್ದೆ.
ಹಾಡ ಹೊಳೆಯಲೆ ಹುಟ್ಟಿದ
ಜೇಡ ಹುಳುವಂತೆ ಕಟ್ಟಿದ
ಇತಿಹಾಸವರಿಯದ ಇತಿಹಾಸ
ನನ್ನವ್ವ, ಭಾರತದ ಕೋಗಿಲೆ
ಏಸು ಕತ್ತಲೆ ಬೆಳಗು
ನಾನೇ ಕೊಳಗು

ಬೆಳಗಾದರೆ ಮಣ್ಣಲಿ ಹೂತು ಚಿಗಿವ ಜೀವ
ಬಲು ಪುಕ್ಕಿ
ದನ ಊರು ಸೇರಿದ ಮೇಲೆ
ಗೂಡು ಸೇರುವ ಚಿಂತೆ

'ಹಾಡು ಮಗನೆ ಹಾಡು
ನೀ ಹಾಡುವ ಹಾಡಿಗೆ
ಕತ್ತಲೆಯ ಹೊಟ್ಟೆ ಒಡೆಯಬೇಕು
ನಾ ಹೊರಬರಬೇಕು'

ಭರತಖಂಡದ ಮನುಕುಲ ಮುಂಡದ
ನಿಧಿ-ಪ್ರತಿನಿಧಿ
ನೆಲತಾಯ ಕೊರಳ ದನಿ ನಾನು
ಆರಸಿ ತಂದಿಹ ಅರಸಿಯ ಅಗಿ ನಾನು
ನಾ ನುಡಿದರೆ ಗಾಳಿ ಬೆಳಕು ನುಡಿವವು
ನಾ ಮುನಿದರೆ ತಮಂಧವೇ ಮಲಗುವುದು
ಅವಳ ಮಗಿಯೊಳಗಿನ ಬೀಜ ನಾನು
ಮೊಳಕೆಯೊಡೆಯುವ ಮೊದಲೇ
ಅಭಿಮನ್ಯುವಿಗೆ ಹಾಡ ಕಲಿಸಿದವಳು.

ತೀನಿ ಮಾಸ

ನನ್ನವ್ವೆಯ ಎದೆಯಲಿ
ಮಾಂಸವೆ ಇಲ್ಲದ ಬರೀ ಕರಳುಗಳು
ಖಮೇಲಿಯಲಿ ರಕ್ತ ಹರಿದಂತೆ
ಹಾಲನೂಡಿಸಿದವಳು ಪಾಂಡವರಿಗೆ

ನೆಲಕ್ಕೆ ಮೂಳೆಯ ಬಡಿ-ಬಡಿದು ತುಪ್ಪ ತೆಗೆದು
ಇಟ್ಟವಳು ನನ್ನ ಬಾಯಿಯಲಿ
ಒಡೆದ ಮೂಳೆಯ ತಾ ಸೀಪಿ
ನಾಲಿಗೆಗೆ ರಕ್ತ ಹರಿದು-ಮೀನ ಮುಳ್ಳಾದವಳು
ಸೆರಗಲಿ ಸೂರ್ಯನ ಮರೆಮಾಡೆನ್ನ ಕಾಯ್ದವಳು

ಈ ಮಣಕದ ಮೈಯನು ತಿಕ್ಕಿ ತಿಕ್ಕಿ
ಬಿಳಿ ಮಾಡಲಾಗದೆ ಸೋತು ಸುಣ್ಣವಾದವಳು
ತಾನೇ ಬಣ್ಣವಾದವಳು-ಕಣ್ಣಾದವಳು
ಜೋಡು ದಡಗಳ ಕಾಣುವ ಚೊಣ್ಣಕೆ ತೇಪೆ ಹಾಕಿ
ಹಳ್ಳದ ದಡದಲೆನ್ನ ಗೊಮ್ಮಟನನ್ನಾಗಿಸಿ
ಭಾರತ ಮಾತೆ ಬಾವುಟವ ಹಿಡಿದಂತೆ
ನನ್ನಂಗಿ ಚೊಣ್ಣವ ಬೀಸಿಬೀಸಿ ಆರಿಸಿ
ತನ್ನ ಸೀರೆಯ ಸೆರಗನು ಹರಿದು
ನನ್ನ ಚೊಣ್ಣಗೆ ಲಾಡಿ ಕಟ್ಟಿದವಳು

ಸಾದ ಹೇರು ಎಮ್ಮೆಯವಳು
ಕರು ಹಾಲುಂಬಾಗ ಮೈ ನವೆತ
ಕಚ್ಚಿದಾಗ ಪಕ್ಕನೆ ಒದೆತ
ಕೆನೆ ಹಾಲೆಲ್ಲ ನನಗೇ
ಅಕ್ಕ ಬಂದರೆ ಬೆಕ್ಕ ಓಡಿಸಿದಂತೆ
ನನ್ನವ್ವೆಯ ಸ್ಥಾನಕ್ಕೆ ಅವಳದೂ ಸ್ಪರ್ಧೆ ಚಕ್ರದಲಿ
ಮಗಳೇ,
ತಾಯಾಗುವ ಮೊದಲು ಮಗುವಾಗು
ಕಾಯಾಗುವ ಮೊದಲು ಹಾಡಾಗು
ಹಣ್ಣಾದ ಮೇಲೆ ಹೆಣ್ಣು ಮಣ್ಣು
ಕಣ್ಣೀರಲಿ ಇಳೆ ಮೇಲೆ
ಬಾಳೇ ನೀ ಕೊಟ್ಟ ಮೇಲೆ.

ಚಿಕ್ಕಾ ಮಾಸ

ಬಳುವಳಿಯ ಎಮ್ಮೆಯನು ಮಾರಿ
ಕಟ್ಟಿಹಾಕಿದಳು ಕರಿಹಲಿಗೆ ಬಳಪಕ್ಕೆ
ಹೇಸಿಗೆ ಕಂಡಂತೆ ಕಲ್ಲನೇರುವ ಗುರುವರ್ಯ

ಯಾವ ಮೂರತಿಯ ಮಾಡಿ ಬಿಲ್ವಿದ್ಯೆ ಕಲಿಯಲಿ
ಬದುಕು ಕಲಿತಳು ಅಕ್ಕ
ಸುಪಲಿಯಲಿ ಮಣ್ಣು ಕೇರಿ ತಕ್ಕ
ನಾನು ಬರೆಯುತ್ತಿದ್ದೇನೆ ಕನ್ನಡ
'ತಾಯಿ' ಎಂದಲ್ಲ 'ಅಮ್ಮ' ಎಂದಲ್ಲ
'ಅವ್ವ' ಎಂದಲ್ಲ 'ಯವ್ವ' ಎಂದು.

ಹೊತ್ತ ಹೊರೆ ಮೀರಿ ಕತ್ತಲಲೂ ಕಾಣುವ
ಚಂದ್ರಮಿಯ ಮುಖಿ-ಚಂದ್ರ ಅಮಾವಾಸೆ ಕೂಡಿದ್ದ
ಒಳಗೊಳಗೆ ಪೆದರು ಬೆವರು
'ಯವ್ವ' ಎಂದು ಕರೆಯುತ್ತ
ಮರುದನಿಗೆ ತಡಕಾಟ
'ಯಪ್ಪಾ' ಎಂದಾಗ
ಒಡಿ, ಬಾಚಿ ತೊಡೆಗಳ ತಬ್ಬುತ್ತಿದ್ದೆ
ನಡುಗುತ್ತಿತ್ತು ಹೊರೆ, ಬಲವಿದ್ದರೆ ಎದುರುಗೊಳ್ಳಬಹುದಿತ್ತು
ನಿಟ್ಟುಸಿರ ಸುಯ್ಯಲು
ಮೆತ್ತನೆಯ ಕತ್ತು ಒತ್ತಾಗ
ರಾಡಿಯಲಿ ಎದ್ದು ಬಂದ ಮಣ್ಣು ವಾಸನೆ
ಕೈಗೆ ಜಾರುಬಂಡಿಯಾಟ
ಉಸಿರು ಸರಳಾದಾಗ
'ಶಾಲೆಗೆ ಹೋಗಿದ್ದೆಯಾ ಗುಬ್ಬಿಣ್ಣ?'
ಶಾಲೆ ಬಂದೀಖಾನೆ
ಮಡಿಗೆ ನೀರು ತಿರುವಿದಂತೆ ಮಾತು
ಅವಳೋ ಮೀನ ಹಿಡಿವ ಬಲೆ.

ದೇವರಿಗೆ ಜಿನಗಿಯ ಮೀಸಲು ಹಿಡಿದು
ಪಾದಯಾತ್ರೆ ಜಾತ್ರೆಗೆ ತುಪ್ಪ ಒಪ್ಪಿಸಿ
ಪಾಸು ಮಾಡಿಸಲು ಹರಕೆ ಹೊತ್ತು
ಬಳಪ ರಪ್ಪಾಗಲೂ ಹೊಡೆತ
ಹಾಲಪುಡಿ-ರವೆ ಕದ್ದವರ ತೋರಿದರೂ ಬಡಿತ
ಒದೆಯಲ್ಹೋಗಿ ಒದಿಸಿಕೊಂಡಪ್ಪೆ ರಾಶಿ.

ಅಕ್ಷರದ ಅರಿವೆ ಚಂಡನು ಹೊಲೆದು
ಪುಟಿಸಿ ಬಿಟ್ಟಿಹಳು ಜನಾರಣ್ಯದಲಿ

ಪುಟಿಯುತ್ತಲೇ ಇದೆ
ಇದು ಬರಿ ಗಾಳಿ ತುಂಬಿದ ಚೆಂಡಲ್ಲ
ಅವ್ವೆಯ ಅನನ್ಯ ಪಯಣದ ಆಗರ.

ಪಂಜಾ ಮಾಸ

ಈ ಮಣಕಕ್ಕೆ ಗೂಟಕ್ಕೆ ಬಿಗಿವಾಸೆ
ಕಟ್ಟಿದರೆ ಗೂಟವೇ ಕಿತ್ತೋಡುವ ಹೆದರಿಕೆ
ಬಾಡ ಬೇಡುವ ರುಚಿಯಿಲ್ಲದ ನಾಲಿಗೆ
ಕಣ್ಣೋ ಕೆಟ್ಟ ಮೊಟ್ಟೆ
ಮಾಡಿಸಿಕೊಂಡು ತಿನ್ನುವ ವಯಸ್ಸು ಮಾಡಿಹಾಕುತ್ತಿರುವೆ.

ನೀ ಬೆಳೆಸಿದ ಬಳ್ಳಿಗಳು ಕಾಯ ಬಿಟ್ಟಿವೆ
ಎತ್ತಿಕೊಂಡು ಬಂದ ಕರು
ಮನೆಯ ಕರುವಂತಲ್ಲ
ಮೊದಲು ಹೊಟ್ಟೆಯ ಕರು ತಾ
ನಂತರ ಹೊತ್ತಕರು ತಾ
ಹೊತ್ತ ಹರಕೆಗಳೇಸು, ಸುತ್ತಿದ ಗುಡಿಗಳೇಸು
ಆ ದೇವರ ಗುಡಿಗೆ ಮುಳ್ಳು ಬಡಿಯಬೇಕು
ಸೋತೆ, ಎಷ್ಟು ದೂರ ನಡೆಯಲಿ
ಎಡಗೈ ಊಟದ ಹರಕೆ ಉಳಿದು
ಎಡಗೈ ಬಲಗೈಯಾಗಿದೆ
ನಿಮ್ಮಪ್ಪ ನಿನ್ನ ವಯಸ್ಸಿಗೆ ಮೂರು ಹಡೆದಿದ್ದ
ಮೊಮ್ಮಗನಿಗೆ ಹೆಸರಿಟ್ಟು ಕಣ್ಣು ಮುಚ್ಚುವಾಸೆ

ಬಾಸಿಂಗ ಕೂಡಿ ಬಂದರೆ ಸಾಕು
ದಂಡೆಗೆ ನಾನಿರುವೆ ದುಂಡಿ ತಾ
ಮದುವೆಯಲಿ ಮುಂಡೆಗೇನು ಕೆಲಸ
ಕಟ್ಟಿಕೋ ನೀನೆ ಗುದ್ದಿ
ನಿನ್ನ ಕಾಲ ಬೀಳುವೆನೊ ಯಪ್ಪಾ
ಸೆರಗೊಡ್ಡಿ ಕೇಳ್ವಾ? ಅಳಿಸಬೇಡಾ
ನಿನಗಾಗಿ ಬೇಡಾ ನನಗಾಗಿ ಆಗೋ.

ಊರುಕೇರಿಯ ಮಾಸಗಳ ತೆಗೆದು
ಏಸು ಹಿತ್ತಲದಲಿ ಹೂತಳು
ಮೈನೆರೆದ ಹಣೆಗೆ ದಂಡೆಯ ಕಟ್ಟಿ
ಹಾಡಿ ಡಂಗುರವ ಸಾರಿದಳು
ಮನೆ ಅಂಗಳದ ತಗ್ಗು ದಿನ್ನೆಗೆ ಮದ್ದು ಮಾಡಿ
ರಂಗೋಲಿ ಹಾಕಿದಳು
ಮೆರವಣಿಗೆಯ ಹಾಡಿನಲಿ ಐರಣಿಯ ತಂದು
ಗುಗ್ಗರಿಯ ತಿಂದು ಹೆಸರಿಟ್ಟಳು
ಊರು ತಾನಾಗಿ ಕೇರಿಯೂ ತಾನೇ ಆಗಿ
ಸುತ್ತ ಹತ್ತೂರಿಗೆ ಎಲ್ಲಮ್ಮನಾದಳು.

ಹೊಲತಿ ನೀನೋ ನಾನೋ?
ಮುಟ್ಟದಿರೆನ್ನಲು ನಿನ್ನ ತೊಗಲೇನು ಹೊನ್ನಿನದೇನು?
ಹೊಟ್ಟೆಯೊಳಗೆ ಹೊಲಸಿಲ್ಲೇನು?
ಮೊಲೆಯಲಿ ಒಂದ ಬರುವುದೇನು?
ನೀ ಹೊರಗಾದರೆ ಹಾಲು ಬರುವುದೇನು?
ತಿನ್ನುವುದು ಮೇಲಿಂದಲ್ಲದೆ ಕೆಳಗಿಂದೇನು?
ನಿನಗಿರುವುದೆಲ್ಲ ನನಗಿದೆ ಮುಟ್ಟಿ ನೋಡು
ಕೇರಿಯಲಿ ಆರಿವೆ ತೊಳೆವಾಗ
ಬಾವಿಯಲಿ ನೀರ ತುಂಬಾಗ
ಕದನವ್ವೋ ಕದನ ಮಾತು ಮಥನದ ಹದನ

ಘೋರ ಬಯಲಿನ ನಡುವೆ ಒಂಟಿ ಹಕ್ಕಿಯಾಗಿ
ಮಣ್ಣಲಿ ಮಣ್ಣಾಗಿ ದುಡಿವಾಗ, ಶುದ್ಧ ಜೀತದ ಜೀವ
ನೆರೆಹೊಲದ ನಿಂಗಯ್ಯ, ಸರಿಹೊಲದ ಸಂಗವ್ವ
ಎತ್ತಿ ಕೈಗೆ ಬಿಟ್ಟಿದ್ದ ತಿಂದು
ಎತ್ತಿ ಹಾಕಿದ ನೀರು ಕುಡಿದು
ಅಲ್ಲೇ ಕೈತೊಳೆದು ಒರೆಸಿಬಿಡುವವಳು
ತಿರಿದದ್ದು ಮಕ್ಕಳಿಗೆ ತಿನಿಸಿ ತಾ ತಿನುವವಳು

ಹೆಣ್ಣಾದರೇನು ಮಣ್ಣ ಸೇರಿದ ಮೇಲೆ
ಬೂದಿಯಾಗಿ ನೆರಳಾಗಿ ಹೂ ಚಿಗುರ ಬಿಡಬೇಕು

ಅವರ ಪಾಪ ಅವರ ಪುಣ್ಯ ಅವರ ಸುತ್ತ
ಕಟ್ಟು ಜೋಳಿಗೆ ಎರಡು
ಕೊಟ್ಟದ್ದು ಬೈಸಿಕೊಂಡದ್ದು ಬೆನ್ನ ಜೋಳಿಗೆಗೆ
ಪಡೆದದ್ದು, ಬೈದದ್ದು ಎದೆಯ ಜೋಳಿಗೆಗೆ ಹಾಕು
ಇದ್ದರೆ ಕೊಡು ಇಲ್ಲದಿದ್ದರೂ ಬೇಡದಿರು
ಆಸೆ ಬಿಸಲ್ಗುದುರಿ, ಹಾಸಿಗೆಯೊಳಗಿರಲಿ ಕಾಲು
ನಿನಗೆ ನೀನೆ ಮೇಲು, ಆಗು ನೀ ಹಾಲು
ಹೆಪ್ಪಿಟ್ಟರೆ ಮೊಸರು ಕಡೆದರೆ ಬೆಣ್ಣೆ
ಕಾಸಿದರೆ ತುಪ್ಪ ಹೆರೆತರೆ ಗತುಪ್ಪ
ಆಗು, ನೀ ಆಗು, ನೀನು ನೀನೇ ಆಗು.

ಸಪ್ತ ಮಾಸಗಳು ತುಂಬಿರಲಿಲ್ಲ
ಆಗಲೇ ಹೊರಬಂದೆ ಸಿಂಪೆಯಿಂದ
ಏಸು ಸಮುದ್ರ ದಾಟಿ
ಯಾವ ಕರಡಿಯ ಕವಚ ಸೀಳಿ
ಹುಡುಕಿ ತಂದೆಯಪ್ಪಾ
ನನ್ನವ್ವ ಸುಂದರ ರಾಜಕುಮಾರಿ!

ಅಳುವ ಕಟ್ಟೆ ಒಡೆವ ಮುನ್ನವೆ
ಕೈಗೆ ಸಿಕ್ಕ ಚಪ್ಪಲಿಯನೆಸೆದು
ಅಳಬೇಡ ನೀನು
ಅತ್ತು ಅತ್ತು ಮಾವನ ನುಂಗಿದೆ
ಮಾಸ ತುಂಬುವುದರಲ್ಲಿ ಮುಂಡೆ ಮಾಡಿದೆ
ಇನ್ನ್ಯಾರಿಗೆ ನುಂಗಬೇಕಿದೆ.
ಆ ರಾಜಕುಮಾರಿ ರಾಕ್ಷಸಿಯಾದುದು ಹೇಗೆ?
ಕನಸುಗಳ ಬೆಂಕಿಯಲಿ ಕರಕಾಗದೆ
ಆಸೆಗಳ ನೀರಿನಲಿ ಈಜಬಹುದಿತ್ತು
ರಾಜಾರಾಮ್ ಗಾಂಧಿ ಬೆಳಗಿನ ಭೂಮಿಯವಳು
ಮತ್ತೆ ಇಡಬಹುದಿತ್ತು ಹಣೆತುಂಬ ಕುಂಕುಮ.

ಮಣ್ಣಲ್ಲಿ ಮಣ್ಣಾಗಿ ನಿಮ್ಮಪ್ಪನಿದ್ದಾಗ ಇಡಲಿಲ್ಲ ಕುಂಕುಮ
ಬಾಚಲಿಲ್ಲ ತಲೆ, ಮುಡಿಯಲಿಲ್ಲ ಹೂ
ಕಳೆದ ಮೇಲೆ ಗುಳಬಾಳಿ

ಬೀಸುತ ಬೀಸುತ ಬೀಸುತ ಬೀಸುವ ಕಲ್ಲು–ಬೆಳಗ ಮಾಡಿದೆ
ಈಗ ನಾ ನಿನಗೆ ಭಾರವಾದೆನೆ ಮಗನೆ?

ಅತ್ತೇ ಅತ್ತಳು ಭೂಮಿಯೇ ಬಾಯ್ಬಿರೆದಂತೆ
ಸುಡವ ಕಂಬನಿಗೆ ಕಡಲ ಮೀನು ಕುದ್ದವು
ಗರಿದೆಗೆದ ನವಿಲು ನಲಿಯದೆ ಬಾಡಿತು
ಹೇಗೆ ಅಳೆಯಲಿ ಅವಳ ನಿಟ್ಟುಸಿರ ಧಾರೆಗಳ
ಕೊಳಗವಾಗಲಾರೆ ನಾನು ಅವಳಿಗವಳೆ ಕೊಳಗ
ಬರಲಾರಳವಳು ನಾನಿರುವ ದಂತಗೋಪುರಕೆ

ಬಿದ್ದೆ ನಾ ಬಿದ್ದೆ ಬಿದ್ದೇ
ಅವಳ ಹೆಗಲ ಮೇಲಿಂದ ಗಿರಿಕಂದರಗಳ ಆಳಕೆ
ನಾ ಚಿಕ್ಕವ ನಾ ಚಿಕ್ಕವ ಬಲು ಚಿಕ್ಕವ
ನಿನ್ನ ಕಾಲ ಕಿರುಬೆರಳ ಉಗುರಿಗಿಂತಲೂ ಚಿಕ್ಕವ ನಾ
ಎತ್ತಿಕೊ ನನ್ನ ಎತ್ತಿಕೊ
ಯವ್ವೀ, ಮೊದಲಂತೆ ಮೊಲೆಯುಣಿಸು
ತಿಳಿದು ತಿಳಿಯದೆಯೆ ಕೆಟ್ಟೆನು
ಕಣ್ಣು ಕುಕ್ಕಿಸುವ ಸೂರ್ಯನ
ನೀನುಟ್ಟ ದಟ್ಟಿಯಲಿ ಮರೆಮಾಡು
ಕೂಸು ಮರಿ ನಾನು
ತೇರು ನೀನು
ಏರಲಾಗದು ನನಗೆ
ಎತ್ತಿಕೊ ನನ್ನ ಎತ್ತಿಕೊ.

❑

# ಕಪ್ಪು ಕಾವ್ಯ

## ಮಾಂಸದ ಕೋಟೆ

ಉಸಿರುಗಟ್ಟಿ ಅಳುವವರ
ರಕ್ತ ಕಕ್ಕಿ ಸಾವವರ
ಬರೆದವರ ಕವಿತೆಗಳು
ಕೋವಿಯ ಗುಂಡುಗಳು

ದೇಶಕ್ಕಾಗಿ ಸತ್ತವರು
ಊರ ಹೊರಗೆ ಬಿದ್ದವರು
ಚುಕ್ಕೆಗಳ ಎಣಿಸಿದೋರು
ಮರಗಳಲ್ಲಿ ತೂಗಿದೋರು

ದಿಲ್ಲಿಯ ಕೆಂಪುಕೋಟೆಗೆ
ಗೋಡೆಯಾಯಿತು ನಮ್ಮ ಖಂಡ!
ಬಂಡೆ ಬಂಡೆಯಾಗಿ ನಿಂತವು
ಒಬ್ಬೊಬ್ಬರ ತಲೆಬುರುಡೆಗಳು!

ಹೆಣ ಹೆಣಗಳ ರಾಶಿಯ ಮೇಲೆ
ಬಡಿದಾಡುವ ಬಾವುಟದಲ್ಲಿ
ಕಾಣುವುದು ನಮ್ಮ ರಕ್ತ!
ಆಸ್ತಿ ಪಂಜರದ ಚಕ್ರ!

ಆಗಸ್ಟರ ಹದಿನೈದು
ನೀವ್ಹೇರುವುದು ಧ್ವಜವಲ್ಲ!
ನಾವೇರುವ ನೇಣುಗಳು
ನಿಮ್ಮ ಸೂತ್ರದ ಬೊಂಬೆಗಳು!

ಈ ನಾಡು ನಮ್ಮದೇನಲೇ?
ಈ ಭೂಮಿ ನಮ್ಮದೇನಲೇ?

ನಮ್ಮದಿದ್ದರೆ ಈ ನೆಲದಲ್ಲಿ
ನಾವೇಕೆ ಬರಲಿಲ್ಲ?

ಇಲ್ಲಿರುವ ನಗ ನಾಣ್ಯ
ನಮದೆಂದು ಹೇಳಲೇ?
ನಮದಿದ್ದರೆ ನಾಣ್ಯಗಳಲ್ಲಿ
ನಾವೇಕೆ ಮೂಡಲಿಲ್ಲ?

ನಾವೋದುವ ಓದು
ಓದೆಂದು ಹೇಳುವಿರೇ?
ಓದಾದರೆ ನಮ್ಮ ಜೀವನದ
ಅರಿವೇಕೆ ಬರಲಿಲ್ಲ?

ನನ್ನ ಬೆನ್ನ ಕರಿನೆರಳ
ನಂಬಿಕೆಯೇ ನನಗಿಲ್ಲ
ಹೆರವರ ಗೊಡವೆಗೆ
ನಾನೇನು ಹೇಳಲಿ?

## ದೇಶದ ಮಾನ

ಓ! ದೇಶ ನಾಯಕರೇ;

ನಾನು, ಎಲ್ಲೊ ಬಿದ್ದ
'ಬಾವುಟ'ದ ಅರಿವೆಯ ಹರಿದು, ತೊಳೆದು
ಬುತ್ತಿಯ ಕಟ್ಟಿಕೊಂಡು
ಊರಿನ ಕಸಗೂಡಿಸಲು ಹೊರಟಾಗ
'ಅಯ್ಯೊ ದೇಶಕೆ ಅಪಮಾನ!'
ಎಂದು ನನ್ನೊದ್ದಿರಿ ಹೊಡೆದಿರಿ ಬಡೆದಿರಿ
ಕೈಗೆ ಕೋಳ ತೊಡಿಸಿದಿರಿ
ಚಿಂತಿಸಲಾರೆ ಎಂದೆಂದು.

ಅದೇ ಬಾವುಟದರಿವೆಯ ಇನ್ನೊಂದು ತುಂಡಿಂದ
ನನ್ನವಳ ತೊಡೆ ದಡಗಳನ್ನು ಮುಚ್ಚಿರುವೆ

ಓ! ದೇಶದ ಶಾಸಕರೆ;
ಓ! ದೇಶದ ನಾಯಕರೆ;
ಕಿತ್ತಿಕೊಳ್ಳಿ ನಿಮ್ಮ ದೇಶದ ಮಾನ!
ತೋರಿಸಿ ವಿಶ್ವಕೆಲ್ಲ
ನಿಮ್ಮ ದೇಶದ ಮಾನ
ಕಣ್ಣುತುಂಬ ನೋಡಲಿ.

□

# ದೇವಿಯ ಸುಪ್ರಭಾತ

ನಮ್ಮ ದೇವರೊ ನಮ್ಮ ದೇವರೊ–ನಮ್ಮ ದೇವರೊ
ಕಣ್ಣ ಕಾಣದ ಕಿವಿಯ ಕೇಳದ
ಮಾತನಾಡದ ಮೂಗದೇವರೊ–ನಮ್ಮ ದೇವರೊ

ಇರಲು ಗಚ್ಚಿನ ಗುಡಿಯ ಕೇಳುದೊ–ನಮ್ಮ ದೇವರೊ
ಹೊಳೆಯ ನೀರನೆ ಸ್ನಾನಕ್ಕೆ ಕೇಳುದೊ–ನಮ್ಮ ದೇವರೊ
ಸಿಗದೆ ಹೋದರೆ;
ಮಳೆಯ ಬಾರದಂತೆ ಶಾಪ ಕೊಡುವದೊ–ನಮ್ಮ ದೇವರೊ

ಉಡಲು ಜರತಾರಿ ಸೀರೆಯ ಬೇಕೊ–ನಮ್ಮ ದೇವ್ರುಗೆ
ಕೊಡಲು ಬೆಳ್ಳಿಯ ಪಲ್ಲಕ್ಕಿ ಬೇಕೊ–ನಮ್ಮ ದೇವ್ರುಗೆ
ಸಿಗದೆ ಹೊದರೆ;
ಕೆಂಪು ಕಣ್ಣಲೆ ಕೆಂಡ ಕಾರುದೊ–ನಮ್ಮ ದೇವರೊ

ಮಡಿಯ ತೊಟ್ಟವರ ಪೂಜೆಯ ಕೇಳುದೊ–ನಮ್ಮ ದೇವರೊ
ನಿತ್ಯ ತುಪ್ಪದ ದೀವಿಗೆ ಕೇಳುದೊ–ನಮ್ಮ ದೇವರೊ
ಸಿಗದೆ ಹೋದರೆ;
ಮನೆಯ ಬಿಟ್ಟು ಓಡಿ ಹೋಗುದೊ–ನಮ್ಮ ದೇವರೊ

ಮಹಿಮೆಯ ಹೊಗಳಲು ಹಾಡವೆ ಬೇಕು–ನಮ್ಮ ದೇವ್ರುಗೆ
ಜೊತೆಗೆ ಚೌಡಿಕೆ ನಾದವು ಬೇಕೊ–ನಮ್ಮ ದೇವ್ರುಗೆ
ಸಿಗದೆ ಹೋದರೆ;
ಸೆಡುವ ಮಾಡು ತಾ ರೋಗ ತುಂಬುದೊ–ನಮ್ಮ ದೇವರೊ

ಚಾಮರ ಹಾಕಲು ಜೋಗತಿ ಕೇಳುದೊ–ನಮ್ಮ ದೇವರೊ
ಭಕ್ಷಣೆಗಾಗಿ ದಕ್ಷಣೆ ಕೇಳುದೊ–ನಮ್ಮ ದೇವರೊ
ಸಿಗದೆ ಹೋದರೆ;
ಹಾಸಿಗೆ ಹಾಸಿ ಕುಳಿತು ಬಿಡುವುದೊ–ನಮ್ಮ ದೇವರೊ

ಗಂಡ ವಯ್ದಿ ತಾ ಹೆಣ್ಣ ಮಾಡುದೊ–ನಮ್ಮ ದೇವರೊ
ಪೆಣ್ಣ ವಯ್ದಿ ತಾ ಗಂಡ ಮಾಡುದೊ–ನಮ್ಮ ದೇವರೊ
ಆಗದೆ ಹೋದರೆ;
ಸ್ವಪ್ನದಿ ಬಂದು ನುಂಗುವೆ ಎನುವದು–ನಮ್ಮ ದೇವರೊ

ಕುಡಿಯಲು ಜನಗಳ ರಕ್ತವ ಬೇಕೊ–ನಮ್ಮ ದೇವ್ರುಗೆ
ಕೋಣ ಕುರಿಗಳ ಬಲಿಯು ಬೇಕೊ–ನಮ್ಮ ದೇವ್ರುಗೆ
ಕೊಡದೆ ಹೋದರೆ;
ಹೋಳಿಗೆ ಪಾಯಸ ಬೇಡಿ ಅಳುವದೊ–ನಮ್ಮ ದೇವರೊ

ಆಸೆಜನ್ಯ ದೇವಕೆಲ್ಲ ಕೊಳ್ಳಿ ಹಚ್ಚಿರೊ–ನನ್ನ ಜನಗಳೆ
ವಿಶ್ವಮಾನವ ಎದೆಗೆ ಇಂದು ದೀಪ ಹಚ್ಚಿರೊ–ನನ್ನ ಜನಗಳೆ
ನೀರರಿದು ಹೋದರೆ;
ನಿಮ್ಮ ತಲೆಯ ನಡಿಗೆಯಲ್ಲಿ ದರ್ಶನವ ತುಂಬಿರೊ–ನನ್ನ ಜನಗಳೆ

□

## ಗೆಳೆಯನ ಹಾಡು

ಕಂಡಿರೇನು ಕಂಡಿರೇ
ನಮ್ಮ ಗೆಳೆಯನ
ಬೆನ್ನಿಂದೆ ಇರುವವನು
ಎದುರೆಂದಿಗೆ ಬರದವನು
ಹೊಟ್ಟೆಯೊಳಗೆ ಹುಣ್ಣಾಗಿ
ಹೂತು ಕುಂತೋನು

ಕಣ್ಣಿಗೆಂದು ಕಾಣದವನು
ಕಣ್ಣೀರ ತರಿಸುವವನು
ಇರುಳ ಬಾರದ ನಿದ್ದೆಯಲ್ಲಿ
ಜೋಡಾಗಿ ಇರುವವನು
ನಾವು ಸತ್ರೆ ಮಕ್ಕಳ ಹಿಂದೆ
ಓಡೋಡಿ ಹೋಗುವವನು

ಕಾಲ ಕಾಲ ಉರುಳಿದರು
ಕಾಲಿಲ್ಲದೆ ನಡೆವವನು
ನಮ್ಮಜ್ಜ ಮುತ್ತಜ್ಜರಲಿ
ಹೆಗಲನೇರಿ ಕುಣಿದವನು
ನಮ್ಮಕ್ಕಳ ಮರಿಮಕ್ಕಳ ಕೂಡ
ಕೂಡಿ ಆಡುವವನು

ಬಂಗಲೆಗಳಿಗಂಜಿ ಬಂದು
ಗುಡಿಸಲವ ಹೊಕ್ಕವನು
ಅಂಗೈಯ ಗೆರೆಯೊಳಗೆ
ತಂಬಿ ತುಂಬಿ ನಿಂತೋನು
ಕಂಡ ಕಂಡಲ್ಲಿ ಎಲ್ಲಾ
ಕೈಯೊಡ್ಡಲು ಹಚ್ಚಿದೋನು

ತಿಪ್ಪೆಯ ಎಂಜಲಕೆ
ಎಳೆದೆಳೆದು ಒಯ್ಯುವನು
ಕಾಗಿ ನಾಯಿ ಹಂದಿ ಜೊತೆಗೆ
ಒಂದೆ ಮಾಡಿ ಬಿಟ್ಟವನು
ಅನ್ನದ್ವೈರಿ ಹಸುವಣ್ಣ
ಇವನೆ ನಮ್ಮ ಗೆಳೆಯಣ್ಣ

## ನನ್ನ ಜನ

ನನ್ನ ಜನ ನನ್ನ ಜನ ನನ್ನ ಜನ ನನ್ನ ಜನ
ನನ್ನ ಜನಃ ನನ್ನ ಜನಃಃ

ಬೆವರನೆಲ್ಲವನು ನೆಲಕೆ ಬಿತ್ತಿ
ಉಪ್ಪ ಋಣವೆಂದು ಅಗ್ಗಿ ಏರಿದವರು
ಹದ್ದ ಕಣ್ಣಿಗೆ ಖಂಡವಾಗಿ
ಉಟಿಗೆ ತೊಡುವುತಾ ಶಿಲುಬೆಗೇರಿದವರು

ಅರಿವನಿಲ್ಲದ ಗುರು ಬಳಿ ಹೋಗಿ
ತಲೆಯ ದಿಂಬಾಗಿ ತೊಡೆಯ ಕೊಟ್ಟವರು
ಒಡಲಬೆಂಕಿಯಲಿ ಕೇಳಿದ್ದ ನೀಡಿ
ಶಾಪವ ಹೊತ್ತು ಎಲ್ಲ ಮರೆತವರು

ಅರಿವೇ ಗುರುವು ಎಂದು ಹೇಳದೆ
ಮಣ್ಣ ಪುತ್ತಳಿಗೆ ಗುರುವೆಂದವರು
ತೊಗಲಗುರುವಿನಿಂದ ಉಗಿಸಿಕೊಂಡವರು
ಬೆರಳ ಕೇಳಿದರೆ ಕೊರಳ ಕೊಟ್ಟವರು

ತಾವು ಹಸಿದರೆ ದೇವ ಹಸಿದನೆಂದು
ಉಂಬು ಅಂಬಲಿ ಎಡೆಮಾಡಿ ಕೊಟ್ಟವರು
ಕಣ್ಣಕಿತ್ತಿ ಗುಳಿಕಲ್ಲಿಗಟ್ಟಿದವರು
ಕಡು ಭಕ್ತಿಯಲಿ ಕುರುಡರಾದವರು

ಶರಣು ಶರಣೆಂದ ತಪ್ಪಿಗೆ
ತೊಡೆದೊಗಲಲ್ಲಿ ಮಚ್ಚೆ ಹೊಲೆದವರು
ಧರ್ಮದೆಳೆಯನೆ ಕತ್ತರಿಸಲೋಗಿ
ಆನೆ ಕಾಲಿನಲಿ ಆಹುತ್ಯಾದವರು

ಕಾಡಗಲ್ಲ ಹೊತ್ತು ಗುಡಿಯ ಕಟ್ಟಿದವರು
ಕಾಲೆದೆಗೆ ಕೊಟ್ಟು ದೇವ್ರ ಒಳಗೆ ಇಟ್ಟವರು
ಕಲ್ಲುದೇವರ ದರುಶನಕೆಂದು
ಹಿತ್ತಲದೊಳಗಿನ ಕಿಂಡಿಯ ಹುಡುಕಿ ಕಾದು ನಿಂತವರು

ಮೂಲೆ ಒನಕೆಯನೆ ಖಡ್ಗವ ಮಾಡಿ
ಕಿಂಡಿಯ ಕಾಯುತ ನಾಡನುಳಿಸಿದವರು
ಇದ್ದು ಸತ್ತರೆಂದು ಇತಿಹಾಸದಲಿ
ಪುಟ ಪುಟದೊಳಗೆ ಬರೆಸಿಕೊಂಡವರು.

□

## ಹೇಳ್ತೀನಿ ಕೇಳಬಾರ

ರಾತ್ರೆಲ್ಲ ಕುಂತ ಹಾಡೊಂದ ಬರದ್ಯಾ
ಹೇಳ್ತೀನಿ ಕೇಳ ಬಾರ
ಹಾಡಲ್ಲ ಇದು ಹಾಡ್ಯೈತಿ ನಮ್ಮ
ಜನಗಳದು ತಿಳಿಯ ಬಾರ

ಶಿವ ಶಿವ ಅಂತ ಎದ್ದೀರಿ ಈಗ
ನಿಮಗ್ಗೊಂತ ಹಾಡಿನ ಚಿಂತಿ
ಹಾಡಲ್ಲಿ ಇಟ್ಟು ಜಳಕಕ್ಕೆ ಹೋಗ್ರಿ
ಆರ್‍ತಾವ ಕಾದ ನೀರ

ಆರಿದ ನೀರ ಕಾಸಿದರ ಆಯ್ತು
ಕಳಿಬ್ಯಾಡ ಹೊತ್ತ ಬಾರ
ಒಮ್ಮೋದ ಭಾವ ಮತ್ತೊಮ್ಮೆ ಬರದು
ಕಿವಿ ತಗದ ಕೇಳಬಾರ

ದಿನ ಕೇಳಿ ಕೇಳಿ ಕಿವಿ ತೂತ ಬಿದ್ದ
ಆಗ್ಯಾದ ಜೇರಗಿಂಡಿ
ಊರಮಂದಿ ರಾಡಿ ನಮಗ್ಯಾಕ ಬೇಕ
ನಮದಷ್ಟ ತೊಳಿದ್ರ ಸಾಕ

ಹರದ್ಹೋದ ಹೂರಣ ಹೋಳಗಿಯ ಹಂಗ
ನಮ್ಮ ಬದುಕೇನ ಇಲ್ಲ
ನನ್ನವರ ಬದುಕಿಗೆ ಅಣಕಾಡ ಬ್ಯಾಡ
ಬ್ಯಾಸರಿದ್ರ ಬೆನ್ನತೋರ

ಅಣಕಂತ ಅಣಕ ಅಣಕೇನ ಬಂತು
ನನ್ನ ಮಾತಿನೊಳಗ ಈಗ

ನಿಮ್ಮ ಹಾಡ ವಯ್ದು ಒಲಿಯಾಗ ಇಟ್ರೆ
ಉರಿದುಲ್ಲ ಒಲಿಯ ಕೂಡಾ

ಮದುವಿಯ ಮುನ್ನ ನಾ ಬರದ ಹಾಡ
ಕದ್ದ ಕದ್ದ ಓದತಿದ್ದಿ
ಇವು ಹಾಡ ಅಲ್ಲ ಮಹಾಕಾವ್ಯ ಜೋಡಿ
ಸರಸಮ ಅನ್ನತಿದ್ದಿ

ಆಗಿನ ಮಾತು ಆಗಾಗಿ ಹೋಯ್ತು
ಈಗ್ಯಾಕ ಬೇಕ ಅದುವು?
ನಿಮ್ಮ ಹಾಡೆಲ್ಲ ಹಾಳಿಯ ಬಳಗ
ಅಪಕ್ತ ಅನುವು ಏನು?

ನಮ್ಮ ನೋವ ಹರ್ದ ಪರಿಪಲ್ಲ ಮಾಡಿ
ಹಾಡೊಳಗ ತುಂಬಿನೀಗ
ಕಗ್ಗತ್ತಲೋಗಿ ಬೆಳದಿಂಗಳಾಗೆ
ಕರಿಹರ್ದ ಎತ್ತ ಆಗ

ಕ್ರಾಂತಿಯ ಮಾತು ಬರಿ ಹಾಡಿನೊಳಗ
ದಿನದಾಗ ಇಲ್ಲ ಜೀವ
ಕ್ರಾಂತೆಂಬ ಭ್ರಾಂತಿ ನೀವ್ಹರದ ಬಗೆದ
ಬಿಟ್ಟುಬರ್ರಿ ಗೂಡಿನೊರಗ

ಗೂಡೊಳಗಯಿದ್ದು ಕೋಳಿ ಚಿಂತಿಮಾಡೊ
ಗಂಡೇನಲ್ಲ ಪೋರಿ
ಹೊಸ್ತಲ ದಾಟಿ ಹೊರಗ ಬಂದ ನೋಡ
ನಿಂತಾವ ಅಂಗಳಕ ನೀರ

ಆ ಮುಗಿಲ ಆ ಬುಕ್ಕಿ ಈ ಹೂವ ನೋಡಿ
ಆ ನೀರ ಹಕ್ಕಿಗಾನ
ನೂರೊಂದ ಕನಸಿಗೆ ಈ ಮಾರಿ ನೋಡಿ
ಮಾಡಬಾರ್ದ ಜೀವದಾನ

ಮೂಕಂತ ಹೇಳಿ ಜೀವದಾನ ಮಾಡಿ
ಮಾಡ್ಯಾರ ಮಕ್ಳ ಖೋಡಿ
ಕನಡ್ಯಾಗ ನಿಂತ ನಿಜರೂಪ ತಿಳದ್ರ
ತಿಳದೀತ ಮಾಡಿದ ಮೋಡಿ

ನಮ್ಮರೂಪ ಅಂದ್ರ ನಿಮಗೆ ಬಾಳ ಮುಳ್ಳ
ಬರಿಯಂದ್ರ ಹ್ಯಾಂಗ ಬರದೀರಿ
ನಿಮ್ಮ ಜನರು ಆಯ್ತು ನಿಮ ಕ್ರಾಂತಿ ಆಯ್ತು
ಅದರೊಳಗೆ ನಮ್ಮ ಮರತೀರಿ

ಬರಬರದ ನಿಟ್ಟೆ ಹಚ್ಯಾರ ಎದಿಮಟ್ಟ
ನಿಮ್ಮಾಯೆಕಿನ್ನ ಬೇಕ?
ನಿಮ್ಮಿರುವ ಹೂವಾಗ ನಮ್ಮಿದರುವ ಮುಳ್ಳಾಗ
ಬ್ಯಾಡಾವುದು ಈ ನೆಲಕ?

ಒಂದಾರ ಹಾಡ ಹಾಡಾಕ ಬೇಕ
ನಮ್ಮ್ಯಾಲ ಇಂದ ನೀವು
ಹಾಡದಿದ್ರ ನೀವು, ಗಂಟುಮೂಟೆಯಲ್ಲ
ಕಟ್ಟಿವೆ ತವರಿಗೆ ನಾನು

ಒಂದ್ಹಾಡ ಯಾಕ ಹತ್ಹಾಡತೀನಿ
ಹೊತ್ತಲ್ಲ ಅದಕ ಈಗ
ರಾತ್ರೆಲ್ಲ ಕುಂತ ಅತ್ತತ್ತ ಬರದೀನಿ
ಕೇಳದಿದ್ರ ಕಟ್ಟಿ ಗಂಟ.

## ಮುನಿಸು

ಕತ್ತಲಲ್ಲಿ ಕತ್ತ ವಗೆದು
ಕಪಡಿಕಣ್ಣ ಮುಚ್ಚಿದಾಗ
ಕಣ್ಣ ತೆರೆದೆವೊ। ನಾವು ಕಣ್ಣ ತೆರೆದೆವೊ
ಬಣ್ಣ ನೋಡಿ ಬೆರಗನಾಗಿ
ಬುರುವಿಗಾಗಿ ಬಾಯಿ ತೆಗೆದು
ಬರಿದನಾದೆವೊ। ನಾವು ಬರಿದನಾದೆವೊ

ಮೂಡಣಲ್ಲಿ ಸೂರ್ಯ ಹುಟ್ಟಿ
ಮೋಡದಲ್ಲಿ ಮರೆಯನಾಗಿ
ಮೋಸಮಾಡಿದೊ। ನಮ್ಮ ಮೋಸಮಾಡಿದೊ
ಮುಳ್ಳಬೇಲಿ ಸುತ್ತಹಾಕಿ
ಮೂಡಲ್ಹರಿಸಿ ಹಗಲಿನೊಳಗೆ
ಮೂಕಮಾಡಿದೊ। ನಮ್ಮ ಮೂಕಮಾಡಿದೊ

ಹಾಡು ಹಗಲಿನಲ್ಲಿ ನಾವು
ಹಾಗಕಾಗಿ ಬಾಯಿಬಿಟ್ಟು
ಹಾರಿಹೋದೆವೊ। ನಾವು ಹಾರಿಹೋದೆವೊ
ಹಾಂ ಬ್ರೂಂ ಮಂತ್ರದಲ್ಲಿ
ಹಾದಿತಪ್ಪಿಹೋಗಿ ನಾವು
ಹಾಳಾದೆವೊ। ನಾವು ಹಾಳಾದೆವೊ

ಕಾಲನ್ಹೆಜ್ಜೆ ಗೆಜ್ಜೆ ಎಣಿಸಿ
ಕಾಲಕಾಗಿ ಕಾದುಕಾದು
ಕಾಲು ಸೋತವೊ। ನಮ್ಮ ಕಾಲು ಸೋತವೊ
ಕಾಳ್ಗಿಚ್ಚಾಗಿ ನಾವು ಕಾಕಿನಿಂದ ಆಡಿದಾಗ
ಕಾಣೆಯಾದೆವೊ। ನಾವು ಕಾಣೆಯಾದೆವೊ

ಎಂದು ರಕ್ತಸಾವ ಕಂಡೆಯಿಲ್ಲ
ಸಾವನೋವ ಉಂಡೆಯಿಲ್ಲ
ಸಾವೇನು ಗೊತ್ತು ನಿನಗೆ। ಸಾವುದೇನು ಗೊತ್ತು?
ಎಲೆಯ ಮೇಲೆ ಬಿದ್ದ ಮಂಜು
ಸಾಬಾನಂತೆ ನುಂಗಿ ಕುಂತು
ಸಾದಿಜನಕೆ ದಾನಶೂರ। ನಿಮ್ನಜನಕೆ ಮೌನಶೂರ.

❒

## ಸ್ಮಶಾನದಿಂದೊಂದು ಪತ್ರ

ಪ್ರಿಯ ಮೊಮ್ಮಗನಿಗೆ
ನಿಮ್ಮಲ್ಲಿಯ ಆಗು-ಹೋಗುಗಳನ್ನು ಕಂಡು
ಈ ಪತ್ರ ಬರೆಯುತ್ತಿರುವೆ
ಇಲ್ಲಾ, ಬರೆಸುತ್ತಿರುವೆ.

ಮೆಟ್ಟು ಮೂಗು ಮಾಡುವ ಉಳಿಯಾಣೆ
ಕುರುಮ ಕೊಯ್ಯು ರೆಪ್ಪೆಗೆಯಾಣೆ
ಅಡಿಗೊಡ್ಡ ಸಂತಾನದಾಣೆ
ಕೊಡತಿ ದಾರ ಮೇಣ ಚಕ್ಕೆಯಾಣೆ
ಊರಕರಿಯ ಮಚ್ಚೆಯಾಣೆ

ಅಂಗಾಲು ಮುಚ್ಚಿಕೊಳ್ಳಲು
ಮೆಟ್ಟು ಹೊಲೆಯುವ ನಮ್ಮ ಕೈಗಳು
ಕೈ ತುಂಬ ಬೀಜ ಕಾಣಲಿಲ್ಲ
ಮರುವಟ್ಟೆ ಬಡೆದುಡುವ ನಮ್ಮ ಪಾದಗಳು
ಹೊಸಜೋಡು ಉಡಲಿಲ್ಲ
ಜೀವಂತ ದನಗಳ ಕೊಳ್ಳುವ ಶಕ್ತಿ ಇರಲಿಲ್ಲ
ಗೋರಿ ಸೇರಿದ ಕೋಣಕೆ
ಮದುಕಿಯ ಮುಡುಪು ಕಟ್ಟಿದ್ದೇನೆ.

ಹೆಣಗಳ ಮೇಲಾಡುವ ಪಾದಗಳು
ನನ್ನ ತೊಡೆಯ ಮೇಲಿಟ್ಟು ಸಾಚಾ ಹಾಕಿದ್ದೇನೆ
ಆ ಪಾದದ ಗೆರೆಗಳು
ತೊಡೆ-ಎದೆ ಮೇಲೆ ಮಾಸದೆ ಉಳಿದಿವೆ
(ನೀನು ಇಲ್ಲಿಗೆ ಬಂದಾಗ ತೋರಿಸುವೆ).

ಗೋಡೆ ಪಡಕ ಲಳಗುಂಡಿ ಇಲ್ಲದ
ಬೀದಿಯ ನನ್ನಂಗಡಿ

ಬೇವುಮರದ ಬೊಡ್ಡೆ
ಅದೇ ಸಿಂಹಾಸನ!
ಇದು ರಾಮರಾಜ್ಯದ ಸಂಕೇತ
ಇಲ್ಲಿ ಬರುವ ಎಕ್ಕಡಗಳೆಲ್ಲ ನನ್ನ ಪ್ರಜೆಗಳು
ಜಾತಿ-ಲಿಂಗ-ವರ್ಗ-ವರ್ಣಬೇಧ
ಮಾನವರಂತೆ ಇಲ್ಲಿಯೂ ಇದೆ
ಆದರೆ
ಕುಲೀನ ಮಾನವರಂತೆ ಇಬ್ಬಗೆಯ ನೀತಿದಲ್ಲ!
ಬಾಗಿಲ ಹೊರಗಿದ್ದೇ
ವಿಚಾರಿ ಬಿತ್ತರಿಸಿ ಖಂಡಿಸಿ-ಮಂಡಿಸುವ
ಸಮತಾವಾದದ ಸಮತಾವಾದಿಗಳು
ನನ್ನ ಪ್ರಜೆಗಳು.

ನಾನು ಪಾಳೆಗಾರ!
ತಲೆ-ತಲಾಂತರದಿಂದ ಆ(ಅ)ಳುತ್ತ ಬಂದವರು
ನಮಗೂ ಬಿರುದುಗಳಿವೆ ದತ್ತಿ-ಸನಗುಗಳಿವೆ
ಅಕ್ಷರಗಳಿಂದ ಬರೆಯದೆ
ಅವತಾರ ನೋಡಿದರೆ ಸಾರುವಂಥವು!

ನಿನ್ನ ಗೋರಿಯಿಂದ ಇಣುಕಿದೆ
ನನ್ನ ಸಿಂಹಾಸನ ಪಲ್ಲಟವಾಗಿದೆ!
ಗೋಡೆ ಗೋದ್ರೇಜ್ ಬಾಗಿಲು ಕೀಲಿಗಳು....
ಮಾಜಿಯಾಗಿರುವ ನನ್ನ (ನಿನ್ನ) ಪ್ರಜೆಗಳು
ಅಡಿಗೆ ಮನೆಗೆ ಹೋಗಿದ್ದರೂ ಸಮತಾವಾದಿಗಳೇ!
ಜೀವಂತ ಹೆಣಗಳಾದ
ನಿಮ್ಮ ಬಾಳಿಗಿಂತ
ನನ್ನ ಭಾವಿ ಪ್ರಜೆಗಳೇ ಮೇಲು!

ಪೂರ್ವಜರ ಬಿರುದಾವಳಿಗಳ
ಅಕ್ಷರಶಾಸನದ ಕಲಮಿನ ಸನದ್ಹಿಡಿದು
ನೀನು, ದತ್ತಿ ಕೊಡಿರೆಂದು ತಿರುಗುವುದು ನೋಡಿದರೆ
ನನ್ನಾಯುಧಗಳನ್ನು ಜೊತೆಗೆ ತರಬಾರದಿತ್ತು
ಪಶ್ಚಾತ್ತಾಪ ಪಡುತ್ತಿದ್ದೇನೆ
ನಿನ್ನ ಶೀಲಪತ್ರ ಕಳೆದುಕೊಂಡಾಗ

ಸನಗು-ದತ್ತಿಗಳು ಸಿಕ್ಕದೆ ಹೋದಾಗ
ಸಲಕರಣೆಗಳೆಲ್ಲ ಕಾದಿಟ್ಟಿರುವ
ತುರ್ತುಪರಿಸ್ಥಿತಿ ಬಂದಾಗ
ಪತ್ರ ಬರೆ
ನೇಣು ಹಾಕಿಕೊಳ್ಳಬೇಡ.

ಇತಿ
ನಿನ್ನ ಮುತ್ಯಾ
(ಈ ಹೆ.ಗು. ರುಜು ಇದೆ)

# ಮೂಕನಿಗೆ ಬಾಯಿ ಬಂದಾಗ

# ಒಂದಽ ದನಿ

ಚೀರತೀನಿ, ಬರಿತೀನಿ
ಬರಿತೀನಿ, ಚೀರತೀನಿ

'ರನ್ನ' ನಿನ್ನ ಭಾಂಡಾರ ಮುದ್ರೆನ ವಡದ,
ಅದರ ನಾನು
'ದುಶ್ಯಾಸನ ಸೀರಿ ಸೆಳದ್ಹಂಗ'
ನಿನ್ನ ಸೀರಿ ಸೆಳಿತೀನಿ
ಮಾನಾ ಕಳಿಯಾಕಲ್ಲ;
ಮುಚಗೊಳ್ಳಾಕ.

ದೇವ್ರಲಿಪಿ ಕಲ್ಯಾಕಾಗದಿದ್ರು
ಮಾನವ ಲಿಪಿ ಕಲ್ತೀವಿ, ಕಲ್ಯ್ಸಾಕತ್ತೀವಿ
ಯಾಳ್ಯಾ ಬಂದೈತಿ
ನಾವು ಒಂದಿನಾ
ಗುಡ್ಯಾನ ಕಲ್ಲಾಗೆಲ್ಲಾ
ಗಂಟಿ ಹಿಡದ ಪೂಜಾರಿಯ್ಹಂಗ
ನಿಂದರಸಿ ಮುಂಗೈ, ಹಿಡದ ಕೇಳತೀವಿ
ದಕ್ಷಣಾ ಅಲ್ಲಾ
ನೀವು ಮನಷೇರಾ? ಅಂತ.

□

# ಒಂದ ವಿಚಾರ

ಕರಿ ತಲಿಗಿ ಬಿಳಿ ಟೊಪಗಿ ಹಾಕಿ
ಬಿಳಿ ಕಾಲಿಗಿ ಕರಿ ಮಚ್ಚಿ ಹಾಕಿ
ಟೊಂಕದ ಮ್ಯಾಲಿ ಕೈಯಿಟ್ಟ
ಕಟಗಿಗಿ ಗುದ್ದಿ-ಗುದ್ದಿ
'ನಿಮ್ಮನ್ನು ಉದ್ಧಾರ ಮಾಡತೀವಿ'
ಅನ್ನೋ ಕೋತಿಗೊಳಗಿ
ಬೈತಿವಿ, ಬೈಯೂನು.

ಈಗ,
ನೀವ ನಮ್ಮಂಗ ಸೋಗ ಹಾಕಿ
ರಂಗಮಂಟಪದ ಮ್ಯಾಗ
ಬಿಳಿ ಪರದಾ ಮ್ಯಾಗ ಬಂದು
ನಮ್ಮ ಬದಕ
'ಹೂರಣದ ಹೋಳಿಗಿ ಹರದ್ಹಂಗ'
ಹರದ ತೋರಿ.
ನಗವರ ಜೋಡಿ ನಕ್ಕು
ಅಳವರ ಜೋಡಿ ಅತ್ತು
ನಮ್ಮ ಜೀವನಾನೇ ಪಣಕ ಹಚ್ಚಿ
ಪ್ರಸಸ್ತಿ ಜೋಡಿ ಹಾರ ತುರಾಯಿ ತಗೊಂಡು
ಹಲ್ಲ ಕಿರಿದು ಕೈ ಜೋಡಸತಿರೆಲ್ಲಾ
ಇದು ಒಂದ ರೀತಿ ಶೋಷಣೆ ಅಲ್ಲಾ?

□

## ಕುತ್ತು

ಹುಟ್ಟಿ ಬಾರ್ದದ್ರೆಪ್ಪೋ ಹುಟ್ಟಬಾರ್ದ
ಏಳೇಳ ಜನ್ಮದಾಗ ಈ ಭೂಮಿ ಮ್ಯಾಗ
ಹೊಲಿ ಮಾದಿಗ್ರಾಗಿ ಹುಟ್ಟಬಾರ್ದ.

ನಮ್ಮ ಬಾಯಾಗಿನ ಉಗ್ಳು ಉಗಳಬೇಕಂದ್ರ
ಜಾತಕಾ ಕೇಳದ್ಹಂಗ ಇವ್ರುಗಿ ಕೇಳಬೇಕಂತ,
ಕೇಳಿದ್ರ....
'ಕೊಳ್ಯಾಗ ಗಡಗಿ ಕಟಗೊಂಡು ಉಗುಳಕೊರ್ರಿ' ಅಂದ್ರು
ಸೂರ್ಯ ನೆತ್ತಿ ಮ್ಯಾಗಿರಲಾಕಾಗ್ನ ಊರಾಗ ಹೋಗ್ಬೇಕು
ಯಾಕಂದ್ರ; ನಮ್ಮ ನೆಳ್ಳ ಅವ್ರ ಮ್ಯಾಗ ಬಿತ್ತಂದ್ರ
'ಮುಡಚ್ಚಟ್' ಆಕ್ಕೈತೆಂತ
ಕಸಾ ಹೊಡ್ಯಾಕ ಹೋಬೇಕಂದ್ರ
ಕೈಯಾನ ಬಾರಗಿ ಎತ್ತಿ ಹಿಡ್ದ 'ನಾವು ಬರ್ತಿವಿರಪ್ಪೋ' ಅಂತ
ಒದರಕೊಂತ ಒಂದು ಸುತ್ತ ಓಡಿ ಬಂದಮ್ಯಾಲ
ಇವ್ರ ಇಟ್ಟ ಪ್ರೋತಿನಾ ಬಳಿಬೇಕು,
ಬಾವ್ಯಾಗಿನ ನೀರು ನಾವ ಸೇದ್ಕೊಬಾರ್ದ?
ದನದ ಅಡ್ಡೇದಾಗ ಸರ್ಕಾರದೋರು ಬಾಂವಿ ಕಟ್ಸಿಸಿ ಕೊಟ್ರು
ಅವರಾಗೆ ಬಂದು ಎತ್ತಿ ನೀರ್ಹಾಕೋ ಮಟಾ
ನೀವು ಸೇದ್ಯಾಕ್ರಿ, ನೀವು ಜಗ್ಯಾಕ್ರೆಂತ
ಬಾಯಿ-ಬಾಯಿ ಬಿಡಬೇಕು,
ಕಲ್ಲು ಮಣ್ಣು ಹೊತ್ತ ನಾವು ಕಟ್ಟಿದ ಗುಡ್ಯಾಗ
ನಾವು ಕಾಲಿಡಬಾರ್ದ,
'ಬಾ' ಅಂಗಡ್ಯಾಗ ಹೊಕ್ರ
ಚಂಡ ಹಿಡ್ದ ಹೊರ್ಗ್ಯಾಕ ವಗಿತಾರ
ಮನ್ಯಾಗ ದನಾ ಸತ್ರ
ಹಲಗಿ ಬಡ್ಯಾಕ, ದುಣಿ ತೋಡಾಕ ಒಳಗ ಕರಿತಾರ
ಹೇತ ಹೇಲ ತಲಿಮ್ಯಾಗ ಹೊರ್ಸಿ

ಕಟ್ಟಿ ಮ್ಯಾಗ ನಿಂತ, 'ಎಲಿ' ಹಾಕೊಂತ ಕ್ಷೇಮಾ ಕೇಳ್ತಾರ
ಆದ್ಕೆ ಹೇಳುದೂ

ಹುಟ್ಟಿ ಬಾರ್ದದ್ರೆಪ್ಟೋ ಹುಟ್ಟಬಾರ್ದ
ಏಳೇಳ ಜನ್ಮದಾಗ ಈ ಭೂಮಿ ಮ್ಯಾಗ
ಹೊಲಿ ಮಾದಿಗ್ರಾಗಿ ಹುಟ್ಟಬಾರ್ದ. □

## ಓಕಳಿ

(ಓಕಳಿ ಅಂದರ ಹೋಳಿ ಹುಣ್ಣಿವ್ಯಾಗ ಬಣ್ಣಾ ಆಡುದು ಅಂತಲ್ಲಾ. ಇದೊಂದು ಸಂಪ್ರದಾಯದ ಆಟ. ವರ್ಷಕ್ಕೊಮ್ಮೆ ಹಣಮಂತ ದೇವರ ಗುಡಿ ಎದರ, ಹೊಂಡದ ಮುಂದ, ಒಂದು ಕಡೆ ಕೆಳಜಾತಿ ಹೆಂಗಸರ ನಿಂತರ, ಇನ್ನೊಂದು ಕಡೆ ಮೇಲ ಜಾತಿ ಗಂಡಸರು. ಇವರು ಹೊಂಡದನ್ ನೀರು, ಜೋಳಗಿಲೆ ತಂದು ಹೆಣ್ಣಾ ಮಕ್ಕಳಿಗಿ ಹೊಡಿತಾರ, ಹೆಣ್ಣಾ ಮಕ್ಕಳು ಜಬರಿಲೆ ಇವರಿಗಿ ಹೊಡಿತಾರ, ಇದೊಂದು ಆಟ. ಇದನ್ನ ಈಗೂ ವಿಜಾಪೂರ ಜಿಲ್ಲಾದಾಗ ಕಣ್ಣಾತುಂಬ ನೋಡಾಕ ಸಿಗತೈತಿ.)

ಬಾಲಾ ಇದ್ದು ಬಾಲೇರ ಆಳ್ದ ಹೋದ
ಬಾಲಾ ಹನುಮಂತ
ಇವ್ನ ಹೆಸರಲೆ ಬಸವೇರ ಬಿಡಾಕ ಹಚ್ಚಿ
ತಮ್ಮ ಬಾಲಾ ಹೆಗಲಮ್ಯಾಗ ಹಾಕ್ಕೊಂಡು
ನಮ್ಮನಿ ಬಾಗಲದಾಗ
ಬಿಡಾಕ ಬರತಾರ, ಕಾಲ್ಮುರಿ.

ವರ್ಷಕ್ಕೊಮ್ಮೆ ಹನುಮಂತನ ಹೆಸ್ರಲೆ
ಓಕುಳಿ ಆಡಾಕ ಹಚ್ಚತಾರ
ಹೊಂಡದಾಗ ನೀರು ತುಂಬಿ
ದೇವ್ರ ಹೆಸ್ರಲೆ ಅರ್ಷಿಣ-ಕುಂಕುಮ ಹಾಕಿ
ಬಾಪಿ ಜೋಳಗ್ಯಾಗ ನೀರ ತುಂಬಿ
ಮಾರಿಗಿ ಹೊಡ್ದ, ಮೈ ತೊಯ್ಸಿ
ಮಲಿ, ದಡ ನೋಡತಾರ
ಲಕ್ಕಿ ಜಬರಿಲೆ ನಾಲ್ಕ ಥಳಿಸಕೊಂಡ
ಎಂಟದಿನ ಆರ್ಷಿಗಾ ಹಚ್ಚಿ
ಉಸಗಲೆ ಕಾಸಗೊದ್ರು ಪರವಾಯಿಲ್ಲ,

"ಬಾರಃ ಗಂಗಿ, ಬಾರಃ ಹಣಮಿ, ಬಾರಃ ಎಲ್ಲಿ
ಇವತ್ತ ನಮಗೈತಿ ನಿಮಗೈತಿ ಕುಸ್ತೆಂತ"
ಬಳಿ ಉಟಗೊಂಡ ಛೀಲ್ಯಾ ಗಂಡಸರು
ನಮ್ಮ ಅಕ್ಕ-ತಂಗೇರಗಿ, ಹೆಂಡ್ರು-ಮಕ್ಕಳಿಗಿ, ತಾಯಿದೇರಗಿ ಕರಿತಿದ್ರಿ
ಇವತ್ತ;

ನಾವು ಅಂಡಗಚ್ಚಿ ಹಾಕಿ ನಿಂತೀವಿ, ಕಳ್ಸತಿರ್‍ಯಾ?
ನಿಮ್ಮಂಡ್ರು- ಮಕ್ಕಳಿಗಿ; ಅಕ್ಕ-ತಂಗೇರಗಿ
ನೀವು ಬರ್‍ರಿ,
ನಾವು ಆಡಿಸ್ತೀವಿ ಓಕಳಿ.

## ಜೋಗತಿ ಕಲ್ಲು

ಬರ್ತಾವ್ರ, ಬರ್ತಾವ್ರ
ನಾವು ಹೊಲ್ದ ಕಾಲ್ಮರಿ
ನಮ್ಮ ಕೇರ್‍ಯಾಕ ಬರ್ತಾವು
ಬೆಳ್ಳಿ ಬೆಕ್ಕಿ ಜೋಡಿ ಮಟಾ ಮಾಯಾಕ್ಕಾವು.

ಹಾಂದ್ರಾ ಕಂಡ್ರ
ಹಗಲ್ಹೊತ್ತ ಹ್ವರಾಗ ಎಳದು
ರಾತ್ಹೊತ್ತ ಹಾಸಿ-ಮಲಗಿ
ನೆತ್ತಿ ಮ್ಯಾಲಿ ಕತ್ತಿಯಿಟ್ಟು, ನ್ಯಾಯ ಮಾಡಿ
ಮಲಿ-ಮೂಗು ಕೊಯ್ದವರ ಕಾಲ್ಮರಿ
ನಮ್ಮನಿ ಬಾಗಲಕ ಬರ್ತಾವ್ರ,
ಬರ್ತಾವ್ರ, ಬರ್ತಾವು......

ಕಟಿಗೊಂಡ ಹಂಗ್ತೆ
ಅಳ್ಳಾರದ ಷಂಡ ಗಂಡಸರು
ನಮ್ಮನಿ ಹೆಂಡರ ಪಿಂಡದಾಗ
ಹೆಂಡಾ ಬಿಟ್ಟು, ಹೆಜ್ಜಿ ಬೆಳಸಾಕ
ನಾ ಮುಂದ, ನೀ ಮುಂದಂತ, ಕಾಲ್ಮರಿ
ನಮ್ಮನಿ ಬಾಗಲಕ ಬರ್ತಾವ,
ಬರ್ತಾವು, ಬರ್ತಾವು.......

ಹೊಟ್ಟಿಗ್ಹಿಟ್ಟ ಕಾಣದ
ಆಳು ಕೂಸಿಗೊಮ್ಮೆ, ಬಂದ ಮಿಂಡಗೊಮ್ಮೆ
ಎದಿ-ಪಡಾ ಕೊಟ್ಟು, ನಿಮ್ಮ,
ನಿಮ್ಮ ಹೆಂಡರ ಸುಖಕ್ಕ ನೇಣುಬಿದ್ದು
ಜೋಗತಿ ಕಲ್ಲಾಗಿ ನಿಂತ್ರು, ಕಾಲ್ಮರಿ
ನಮ್ಮನಿ ಬಾಗಲಕ ಬರ್ತಾವು,
ಬರ್ತಾವು, ಬರ್ತಾವು.......

□

## ಮಂಗಳಾರತಿ

ನಾರಿ ನಿನ್ನ ಮೈ ಬಣ್ಣ
ನೂರೊಂದು ತರ ತರ
ನಾನೊಂದು ನಾಲಿಗಿಲೆ
ನಾನ್ಯಾಪರಿ ಬಣ್ಣಿಸಲ್ಯೆ    ॥ ಪಲ್ಲ ॥

ತಪ್ಪಲ ಕಾಡುಂಟು
ತುಪ್ಪದ ನೆಲವುಂಟು
ತಪ್ಪೆಜ್ಜೆ ಇಟ್ಯಾಗ
ದಪ್ಪಾನೆ ಹುಲಿ ಬಂತು
ತೆಪ್ಪಾಗ ನಿಂತಾಗ
ನಾನ್ಯಾಪರಿ ಬಣ್ಣಿಸಲ್ಯೆ
ನಾರಿ ನಿನ್ನ ಮೈ ... ...

ಹೊಳೆ ಸಾಲ ನಾಡಾಗೆ
ಹೊಳೆಯಾಚೆ ನೀನಾದೆ
ಹೊಳೆಯೊಳಗೆ ನಾನು
ಹೌಹಾರಿ ನಿಂತಾಗ
ಹೋಳಾಗು ನಿನ ಕಂಡು
ನಾನ್ಯಾಪರಿ ಬಣ್ಣಿಸಲ್ಯೆ
ನಾರಿ ನಿನ್ನ ಮೈ ... ...

ಹೆಡೆದವ್ವನೆನುವರು
ಹರ-ಹರದ ತಿನ್ನುವರು
ಹಚ್ಚಡದಾಗೆ ಹಡ್ಡೆಡ್ಡಿ ಹೂಳುವರು
ಹಚ್ಚಡ ಬಾಯಿದೆಗೆದು
'ಹುಂ' ಮೆಂದು ನುಂಗಾಗ
ನಾನ್ಯಾಪರಿ ಬಣ್ಣಿಸಲ್ಯೆ
ನಾರಿ ನಿನ್ನ ಮೈ ... ...

ಕಾಣುವ ಕಣ್ಣುಂಟು
ಕೇಳುವ ಕಿವಿಯುಂಟು
ನುಡಿಯದ ಬಾಯಿಗೆ
ನಾರೋ ನಿನ್ನ ಮೈಯಿಗೆ
ಆರತಿಯಲ್ಲ; ಮಂಗಳಾರತಿ ಎತ್ತುವೆ.

ನಾರೋ ನಿನ್ನ ಮೈ ಬಣ್ಣ
ನಾನ್ಯಾಪರಿ ಬಣ್ಣಿಸಲ್ಕೆ
ನೂರೊಂದು ತರ ತರ
ನೂರೊಂದು ತರ ತರ.

## ಬಾಡಗಿ ಜನಿವಾರ

ನನಗ ನೆಪ್ಪೈತಿ
ಇನ್ನಾ ಅಕ್ಕಲದಾಡಿ ಬಂದಿರಲಿಲ್ಲ
ಮಂತ್ರಾಲಯಕ ಹೋಗಿದ್ಯಾ,
ಹಾಕಿದ್ಯಾ, ನಾನು ಆವಾಗೊಮ್ಮೆ
ಬಾಡಗಿ ಜನಿವಾರ.

ಗೆಳ್ಯಾ,
ಲಂಗೋಟಿ ಗೆಳಿಯಾಂತು ಅಲ್ಲಾ
ಮೂರು ತಾಸಿನ ಮಂತ್ರಾಲಯದ ದಾರಿ ಗೆಳಿಯಾ,
ಅವ ನನ್ನ ಹಚಗೊಂಡಾ
ನಾನು ಅವ್ನ ಹಚಗೊಂಡ್ಯಾ.

ಜೋಡಿ ಜಳಕಾತು
ಗುಡಿ ಸುತ್ತ ಹರದಿದ್ದೂ ಆಯ್ತು,
ಗೆಳ್ಯಾ, ರಾಯರ ಪೈಕಿ
ಪ್ರಸಾದಕ, ಒಡಿಬೇಕಾಯ್ತಿ, ಒಡಿಲಿಲ್ಲ.

ಮೊದ್ಲ ಮೈ ಮ್ಯಾಗಿನ ಅರ್ಧಿ ತಗಸಿದ್ರು
ಚಡ್ಡಿಯೊಂದ ಬಿಟ್ಟ;
(ಬರೆಮೈಲಿದ್ರ ಜನಿವಾರ ಕಾಣ್ತದಂತ ಇರಬೇಕು)
ನನ್ನ ಕೊಳ್ಳಾಗ್ಹೊಂದು ಜನಿವಾರ ಹಾಕಿ
'ಸುಮ್ಮ ಬಾ, ಬಾಯಿ ಮುಚ್ಚಿ ನನ್ನ ಹಿಂದ' ಅಂದ
ಒಲ್ಲೆಂದ್ರು ಕೇಳ್ಳಿಲ್ಲ.

ಬಾಗಲಕ
'ವೀರಬಾಹುಕ ಖಡ್ಗ ಹಿಡಕೊಂಡು ನಿಂತ್ಹಂಗ'
ಡೊಣ್ಣಿ ಹಿಡಕೊಂಡ ನಿಂತಿದ್ದ
ಜನಿವಾರ ತಾತಗೆ
ಕುಲ-ಗೋತ್ರಾ ಹೇಳಿ ಒಳಗ್ಹೋಗಿ ನಿಂತ.

ನಂದ ಕೇಳ್ದ
'ನನ್ನ ತಮ್ಮ್ಂದ'
ಅದ್ನು ಬಿಡ್ಲಿಲ್ಲ ಮುತ್ಯಾ
'ನಿನ್ನ ಗೋತ್ರಾ?' ಅಂದಾ
'ಪಕ್ಕಾ ಗೌರ್ಮೆಂಟ್ ಬ್ರಾಹ್ಮಣ' ಅಂದ್ಯಾ.

ಮುತ್ಯಾ ಬಡಗಿ ಮ್ಯಾಗೆತ್ತದ,
ಬಂದ ಬೆನ್ನ ಕೊಟ್ಟ
ರಾಘವೇಂದ್ರಲ್ಲಾ,
ನನ್ನ ಗೆಳೆಯಾ!
ಮೂರ ತಾಸಿನ ಗೆಳಿಯಾ ಆದ್ನೆಲ್ಲಾ ಅವ್ನೆ
ಅದೇ ಗೆಳ್ಯಾ.

## ಒಡ್ಲ ಕಿಚ್ಚು

ಕತ್ತಿ ಮಸ್ಯಾಕತ್ತಿದ್ರ
ಏನ ಒಂದ ಘನಕಾರ್ಯಕ
ಹೊಂಟಾನಾ ಅಂತ ತಿಳಿಬೇಕು.
ದಲಿತರ್‍ಗಿ ಉದ್ಧಾರ ಮಾಡ್ತೀನಿ
ಅಂತ ಹೇಳಾಕತ್ತಿದ್ರ,
ಏನ ಒಂದು ಕ್ಯಾರಿಟ್ಯಾನಂತ ತಿಳಿಬೇಕು.

ಹೇಸಗಿಗಿ ವಾಸನೆ ಇರಲಿಲ್ಲಂದ್ರ
ತಾಟಿನ್ಯಾಗ ಹಾಕ್ಕೊಂಡೆನ ತಿಂತಿರಲಿಲ್ಲ,
ಹರಿಜನ್ರಿಗಿ ಮ್ಯಾಗಿನೋರು ತುಳಿತಾರನ್ನೋದು ತಿಳಿದಿದ್ರ
ಮ್ಯಾಗಿನವ್ರಗಿ ತಲಿಮ್ಯಾಲ ಕಾಲಿಡುದೇನ ಬಿಡತಿರಲಿಲ್ಲ.

ಮನಸ್ಯಾ ಅಂದಮ್ಯಾಲ
ಬಾಗುದಂದ್ರ ಎಲ್ಲಿತನಕ?
ನೆತ್ತಿ ನೆಲ್ಕ ಹತ್ತುತನ್ಕ
ತಡಕೊ ತಡಕೊ ಅಂದ್ರ
ಎಲ್ಲಿತನಕ ತಡಕೋತಾರ?
ಪಿತ್ತ ನೆತ್ತಿಗೇರತಂದ್ರ
ಹೆಗಲ ಬಾರಕೋಲ ಕೈಯಾಗ ಬರ್‍ತದ.

ಸೊಣ್ಣ ಹಾರಿ ಬಂದ ಬಾಯಿಗಿ
ನೀರ ಹಾಕಂದ್ರ, ಎಣ್ಣೆ ಹಾಕ್ತಾರ,
ನೀರ ಬೇಡ್ದ ಬಾಯ್ಗಿ, ಭಾವಿ ಕಂಡ ಮ್ಯಾಲ
ಎಣ್ಣೆ ಹಾಕದೊರ ಬಾಯಿಗಿ ಮಣ್ಣಾಕುದೇಷ್ಟೊತ್ತ?

ನಿಮ್ಮ ಮಾತನ್ಯಾಗಿರೊ ಶಕ್ತಿ
ನಮ್ಮ ತೋಳಾಗೈತಿ,

ನಿಮ್ಮ ನಡದಾಗಿರೊ ಶಕ್ತಿ
ನಮ್ಮ ಕಾಲಾಗೈತಿ,
ಎದ್ಯಾನ ಕದಾ ತಗದ್ರ
ಎಲ್ಲಾ ಐತಿ, ಇಟ್ಟಿ ಕಳ್ಳದ್ರ ವಿನಃ
ಹೇಳಿ ಕಳ್ಳಲಿಲ್ಲ.

ಮಾಡೇದ ಮನ್ಯಾಗ
ಮನಸ್ಕಾರಿದ್ರು ಮನಸ್ಸತ್ತ ಇರಲಿಲ್ಲ,
ಗಂಡಿನ ಗುಂಡೆದಿ ಕಂಡ್ರ
ಗಂಡಸ್ಥನ ಇರಲಿಲ್ಲ

ಎತ್ತದ ಮನ್ಯಾಗ
ಚಿತ್ರದ ದೇವ್ರ ಮುಂದ
ನೆತ್ತದ ದೀಪಾ ಹಚ್ಚುತಾರ
ಯಾಕಂದ್ರ:
ದಡದ ಬುಡಕ ಕುರ್ಚಿ ಐತಿ,
ಕೈಯಾಗೆ ಕತ್ರಿನೂ ಐತಿ

ಖೂನಿ ಮಾಡಿದ್ರು ನಡಿತೈತಿ
ಖೂನಿ ಮಾಡಿಸಿದ್ರು ದಕ್ಕತೈತಿ
ಯಾಕಂದ್ರ:
ಅಪ್ಪಗೊಳ ಹತ್ತ ದುಡ್ಡ ಐತಿ.

ಗೌಡ್ರಿತ್ರು, ಗೌಡ್ರ್ಗಿ ಮೀಸಿದ್ದು
ಊರಿತ್ತು, ದನಾ ಇದ್ದು,
ಊರ ಊರಾಯ್ತಿ, ದನಾ, ಜನ ಆಯ್ತಿ
ಗೌಡ್ರು, ಗೌಡ ಆಗಿದ್ದ
ಆದ್ರ ಮೀಸಿರಲಿಲ್ಲ

ಮೀಸಿ ಉದ್ದ ಇದ್ದಂವ
ಲಿಂಬಿ ಹಣ್ಣಿಟ್ಟು ಹ್ಯಾಂಗ ಕುಣ್ಸೆದ್ರು ನಡಿತೈತಿ,
ಕೊದ್ಲ ಉದ್ದ ಇದ್ದಕಿ
ತುರಬಾ ಹ್ಯಾಂಗ ಕಟ್ಟಿದ್ರು ನಡಿತೈತಿ,

ಹಿಡ್ದಮೀಸಿ ಬೋಳ್ಸಗೊಂಡವ್ರ ಬಾಳೆ
ಗಂಡ ಸತ್ತ ಬೋಳಿ ಬಾಳೆ
ಎರಡು ಒಂದೆ.

ಚಿಟ್ಟಿ ಮಳಿ ಹತ್ತಂದ್ರ
ನಮ್ಮನಿ ಸೋರಿ ಬಚ್ಚಲಾಕೈತಿ,
ಗೌಡಸ್ಯಾನಿ ಮನಿ ಗಟ್ಟಿಂದಾದ್ರು
ಹನಿ-ಹನಿ ಸೋರತೈತಿ
ಯಾಕಂದ್ರ;
ಎಲ್ಲಾರ ಮನ್ಯಾನ ದೋಸೆ ತೂತ.

ಧಾರಣೆ ಇಳ್ದ ಮ್ಯಾಲಿ
ಶಂಖಾ ಹೊಡೋದು ರೈತನ ಕೆಲ್ಸ,
ಸತ್ತ ಹೆಣಾ ಮಣ್ಣಾದ ಮ್ಯಾಲಿ
ಆಯೋಗ ನೇಮ್ಸೋದು ಸರ್ಕಾರ ಕೆಲ್ಸ.

ರೈತರ ಬೆಳುವಳ್ಯಾಗ
ಕುತ್ಗಿ ಹಿಚಕೂದು ಸರ್ಕಾರ,
ದೇಶದ ಬೆನ್ನೆಲ್ಬು ಅನ್ನೋದು ಸರ್ಕಾರ
ಬೆನ್ನೆಲ್ಬು ಮುರೋದು ಸರ್ಕಾರ

ಹೊಲ್ದ ಭಾವಿ ಹಡ್ಗಿಸ್ತೇನಂತ
ಸಾಲಾ ತಗ್ಗಿ
ಮಗನ ಮದ್ವಿ ಮಾಡೋದು,
ಮಗಳ ಮದ್ವಿ ಮಾಡಸ್ತೀನೆಂತ
ಹೊಲಾ ಮಾರಿ
ಕೋರ್ಟ ಮುಂದ ತೆಗ್ಗ ಹಡ್ದದು.

## ಮ್ಯಾಗಿನವ್ರು

ರಾಮಾಯಣ ಕುಲಗೆಡಲಾಕ
ಸೀತಾನೆ ಕಾರಣ,
ಹಿಂದುಧರ್ಮ ಕುಲಗೆಡಲಾಕ
ಮ್ಯಾಗಿನವ್ರ ಕಾರಣ.

ಇಲಿಯಾಗಿ ಬೆಕ್ಕಿನ ಜೋಡಿ
ಚಕ್ಕಂದ ಆಡ್ಬಹುದು,
ನಿಂಗಾ ಕಂಡಲ್ಲಿ ನೀರೆರವ್ರ ಜೋಡಿ
ಚಕ್ಕಂದಾಡಂದು ಸಾದ್ದಿಲ್ಲಾ.

ಮಠದ ಭಾವಿ ಮುಂದ
ಗುಟಕ ನೀರ ಬೇಡಿದ್ರ
ಹೆಡ್ಕ ಹಿಡ್ದ ಹೊರಾಗ ಒಗಿತಾರ,
ಮನ್ಯಾಗ ದನಾ ಸತ್ತ
ಹೊತಗೊಂಡ ಹೋಗಾಕ
ಬೆಣ್ಣಿ ಹಚ್ಚಿ ಒಳಾಗ ಕರಿತಾರ.

ಜನಿವಾರ ಹಾಕಿದ ಜಂಗಮಗ
ಮುಟ್ಟಿದರೆ 'ಮುಡಚಟ್'ಂತ್'
ಯಾಕಂದ್ರ;
ಮಡಿ ಇರ್ತಾರಂತ,
ಮುಳಗಿಮುಳಗಿ
ಎಲ್ಲ ಎದ್ದಿರ್ಯೋ ಅಂದ್ರ
ಹೊಲೇರ ಹಣಮ್ಯಾನ ಭಾವ್ಯಾಗಂತ.

ಹೆಂಡದಂಗಡಿ ಕಂಡ್ರ
ನಿಲ್ಗಿ ಮ್ಯಾಗ ಹಿಡ್ದ
ಮೂಗ ಮುಚಗೊಂಡ ಹೊಕ್ಯಾರ,
ಯಾರಿಲ್ಲದಾಗ ಸಿಕ್ರ
ಕೊಳ್ಳಾನ ಜನಿವಾರ ಕಿವಿಗಿ ಹಾಕಿ
ಕಣ್ಣ ಮುಚ್ಚಿ 'ಗಟಕ್'ನ ಕುಡಿತಾರ.

ಬಗಲಾಗಿರೊ ಜನಿವಾರ
ಹೊರಕಡಿಗಿ ಹೋಂಟಾಗ ಕಿವಿ ಮ್ಯಾಗ ಬರ್ತದ
ಯಾಕಂದ್ರ;
ಅದು 'ಮುಡದಾರ' ಆಕ್ಕೈತ್ತೆಂತ.
ಎದಿಮ್ಯಾಗಿರೊ ಲಿಂಗ
ಗೂಟದ ಮ್ಯಾಗ ಜೋತ್ಯಾಡತಿತ್ತು,
ಯಾಕಂದ್ರ;
ಅವತ್ತು ಒಲಿ ಮ್ಯಾಲಿ ಮೂಳೆ ಕುದಿತಿತ್ತು.

ಅಪ್ಪಗೋಳ ಕಾಲ ತೊಳ್ದ
ನೀರ ಕುಡದ್ರೆ, 'ಪಾದೋದಕ' ಅಂತ,
ದಲಿತ ಊರಾಗ ನಿಂತ ಉಚ್ಚಿ ಹೊಯ್ದಿರ
ನಳಕಿನೇ ಕೊಯಿತ್ತಿದ್ದರಂತ, ಮ್ಯಾಲಿ ದಂಡಾನೂ ಕಟ್ಟುತ್ತಿದ್ದರಂತ,

ಹೇತ ಹೇಲು ನಮ್ಮ ತಲಿಮ್ಯಾಲ ಹೊರ್ಸಿದರ
ಅವ್ರ ಕುಂಡಿಗಿ ಯಾವ ದಂಡಾನು ಇಲ್ಲಂತ,
ದೇಪ್ರ ಕೊಟ್ಟ ಕೊಳವ್ಯಾಗ  ಹೂಸ ಹೋದ್ರ
ಕುಂಡಿಗಿ ದಂಡಾ ಕಟ್ಟೆ ತೊಗಲ ಕೊಯಿತ್ತಿದ್ರಂತ.

ಮನು ಬರ್ದ ಮಾತ ನೆಪ್ಪಾದ್ರ
ಮೈಯಾನೆ ರಕ್ತೆಲ್ಲ ಕುದಿತದ,
ಪರಿಸರ ಹ್ಯಾಂಗಿತ್ತು ಅಂತ ವಿಚಾರ ಮಾಡಿದ್ರ
ಮೈಯಲ್ಲಾ ಬೆವಿತದ.

ಗಂಗಾ ಸ್ನಾನ, ತುಂಗಾ ಪಾನ ಮಾಡಿದರ,
'ಪೀಡಾ ಹೋಳಿ ಆಚಾಕಂತ'
ತೀರ್ಥಯಾತ್ರಾಕ ಹೋಗಿ ತಲಿ ಬೋಳ್ಸಗೊಂಡ ಬಂದ್ರ,
'ಪಾಪ ಪರಿಹಾರ' ಅಂತ
ಮಠದ ಭಾವಿ ಮುಟ್ಟಿದರ ಹಿಡ್ದ ತಲಿ ಬೋಳಸ್ತಾರ
ಇದು ಯಾವ ಪರಿಹಾರ?

ಮೂಗ ಮುಚ್ಚಿ ಜಪಾ ಮಾಡವ್ರ ಮನ್ಸಂಧ್ರ
ನೆತ್ತಿ ಮ್ಯಾಗ ಚೇಳ ಇಟಗೊಂಡ
ಜಪಾ ಮಾಡದ್ದಂಗ,
ರಾಜಕಾರಣಿ ಮಾತಾಡೊ ನಾಲ್ಗೆಂದ್ರ
ಬಾಟಾ ಅಟ್ಟಿದ್ದಂಗ.

ಗುಡ್ಯಾಗ ಸಾಲಿ ಕಲ್ಯಾಗ
ಹೊರಾಗ ಕುಂದ್ರಿಸಿ
ಹೊಲ್ಯಾಂತ
ಬಡಗಿಲೆ ಮುಟ್ಟಿ ಕಲ್ಸಿತ್ತಿದ್ರು,
ಸಾಲಿ ಮುಗ್ದ ಮ್ಯಾಲ, ಕುರ್ಚಿ ಸಿಕ್ಕ ಮ್ಯಾಲ
ಹರಿಜನಾಂತ ತಿಳದ್ರು, ಕೈ ಜೋಡ್ಸಿ
'ಬರ್ರಿ' ಅಂತ ಒಳಾಗ ಕರಿತಾರ.

## ಪತ್ರಿಕೆ

ನ್ಯಾಯ, ನೀತಿ, ಧರ್ಮಂತ
ದಿನಾ ಹೊತ್ತ ಹೋಂಟ್ರ
ಹೊಡದ್ಯಾಡೊ ಪತ್ರಿಕೆ ಒಂದಿತ್ತು,
ಪ್ರಚಾರ ಬಾಳ ಆದ ಮ್ಯಾಲಿ
ಕೈಗಿ ರೊಕ್ಕ ದಕ್ಕದ ಮ್ಯಾಲಿ
ಸೂಳಿ ಸಾಕಿದ ನಾಯಿಯ್ಹಂಗ ಬೊಗಳತ್ತಿತ್ತು.

ಸಾಹುಕಾರ ಸುದ್ದಿ
ಹುಟ್ಟೋ ಪುರ್ಸೋತ್ತಿಲ್ಲದ
ಪೇಪರನ್ಯಾಗ ಬರತೈತಿ,
ಹರಿಜನ್ರ ಸುದ್ದಿ
ಬಾಯಾಗ ಮಣ್ಣ ಬಿದ್ದ ಮ್ಯಾಲಿ
ಪೇಪರ ಮೂಲ್ಯಾಗ ಹುಡಕಬೇಕ್ಯಾಗ್ತೈತಿ.

ಪೇಪರನ್ಯಾಗ
ಪ್ರಯಾಣ, ಪುಣ್ಯಸ್ಮರಣೆ, ಭವಿಷ್ಯಾ
ದಿನಾ ನೋಡ್ದಾಗೆಲ್ಲಾ ನನಗಳುಬರ್ತದ,
ಯಾಕಂದ್ರ:
ಎಂಥಾ ಬಾತಿಗಿ ಬಾರ್ದ ಸುದ್ದೆಂತ,
ಹರಿಜನ್ರಿಗಿ ರೊಕ್ಕಾ ಮಂಜೂರಾದ ಸುದ್ದಿ
ಪೇಪರನ್ಯಾಗ ಬಂದಾಗೆಲ್ಲಾ ನನಗ ನಗು ಬರ್ತದ
ಯಾಕಂದ್ರ:
ಇವತ್ತರ ಅವ್ರುಗಿ ನೆಪ್ಪಾತಲ್ಲಾಂತ.

❑

## ನರ್ತಿಸೆಲೆ ಶಾರದೆ

ನರ್ತಿಸು ನರ್ತಿಸೆಲೆ ಶಾರದೆ ನರ್ತಿಸು
ನೀನೆನ್ನ ನಾಲಿಗೆಯ ಮೇಲೆ ನರ್ತಿಸು ॥ ಪಲ್ಲ ॥

ತಾಡೋಲೆಗೆ ಮೈಗೊಟ್ಟು
ಅಲಗಕ್ಕೆ ಕಿವಿಗೊಟ್ಟು
ತಾಳ ಲಯ ಭಯಬಿಟ್ಟು
ನನ್ನವರ ಭಿಡೆ ಇಲ್ಲದ ಹಾಡಿಗೆ
ನರ್ತಿಸು......

ಬಿಸುಡದಿರು ವೀಣೆಯನು
ಮೀಟದಿರು ತಂತಿಯನು
ಮದಾಂಧರ ನೋವಿಗೆ
ನಾವು ಕುಣಿ ಕುಣಿದು ಪರಿಹರಿವ ನಾದಕೆ
ನರ್ತಿಸು......

ದಲಿತರ ಕೂಗಿಗೆ
ಶಬ್ದಿಲ್ಲದ ಹಾಡಿಗೆ
ನಿಟ್ಟುಸಿರ ಖಡ್ಗವನು
ಕಣ್ಣ ಧಾರೆಯಲಿ ಮಸೆಮಸೆವ ಶಬ್ದಕೆ
ನರ್ತಿಸು......

ಧಿಕ್ಕರಿಸಿ ನಡೆವ ಹೆಜ್ಜೆ
ದಾವಾಗ್ನಿ ತುಂಬಿದ ಕಣ್ಣು
ಝೇಂಕರಿಸಿ ಹೊಡೆಯುವ
ಕ್ರಾಂತಿಯ ಕಹಳೆಗೆ 'ಓ' ಗೊಟ್ಟು ದಲಿತರಿಗೆ
ನರ್ತಿಸು......

□

# ಅನುಬಂಧ - ೧ : ಕೃತಿಸೂಚಿ

ಅ) ಕಾವ್ಯ :

| | | |
|---|---|---|
| ೧. | ಮೂಕನಿಗೆ ಬಾಯಿ ಬಂದಾಗ | ೧೯೮೧ |
| ೨. | ಕಪ್ಪುಕಾವ್ಯ | ೧೯೮೫ |
| ೩. | ಮೂರನೆಯ ಕಣ್ಣು | ೧೯೯೬ |
| ೪. | ನಾದ ನಿನಾದ | ೧೯೯೯ |
| ೫. | ಸಿಲಿಕಾನ್ ಸಿಟಿ ಮತ್ತು ಕೋಗಿಲೆ | ೨೦೦೩ |
| ೬. | ಶ್ರೀ ಚಂಡಾಲ ಸ್ವರ್ಗಾರೋಹಣಂ | ೨೦೦೩ |

ಆ) ಕಾದಂಬರಿ : ಕತೆ

| | | |
|---|---|---|
| ೧. | ಕಾರ್ಯ | ೧೯೮೮ |
| ೨. | ಮುಗಿಯದ ಕತೆಗಳು | |

ಇ) ನಾಟಕ :

| | | |
|---|---|---|
| ೧. | ಮಸ್ತಕಾಭಿಷೇಕ | ೧೯೮೩ |
| ೨. | ಸಮುದ್ರದೊಳಗಣಉಪ್ಪು | ೧೯೯೯ |

ಈ) ಆತ್ಮಕಥೆ :

| | | |
|---|---|---|
| ೧. | ಗೌರ್ಮೆಂಟ್ ಬ್ರಾಹ್ಮಣ | ೧೯೯೮ |

ಉ) ವಿಮರ್ಶೆ-ಸಂಶೋಧನೆ

| | | |
|---|---|---|
| ೧. | ಆನೇ ಹೋಣೇ | ೧೯೮೩ |
| ೨. | ಜಾನಪದ ವ್ಯಾಸಂಗ | ೧೯೮೫ |
| ೩. | ಜಾನಪದ ಶೋಧ | ೧೯೯೦ |
| ೪. | ಭೂತಾರಾಧನೆ – ಸಾಂಸ್ಕೃತಿಕ ಮತ್ತು ಸಾಮಾಜಿಕ ಚಿಂತನ | ೧೯೯೧ |
| ೫. | ಕೊರಗ ಜನಾಂಗ : ವಿಶ್ಲೇಷಣಾತ್ಮಕ ಅಧ್ಯಯನ (ಸಹಬರವಣಿಗೆ) | ೧೯೯೧ |
| ೬. | ತುಳುವರ ಆಟಿಕಳೆಂಜ ಅಂತರ್ ದೃಷ್ಟಿಯ ಸಂಶೋಧನೆ | ೧೯೯೩ |
| ೭. | ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನ | ೧೯೮೯ |
| ೮. | ಕನ್ನಡಸಾಹಿತ್ಯ ಮತ್ತು ದಲಿತಯುಗ | ೧೯೯೯ |
| ೯. | ಪುರಾಣ, ಜಾನಪದ ಮತ್ತು ದೇಶೀವಾದ | ೧೯೯೮ |
| ೧೦. | ಅಂತರ್ಜಾತೀಯ ವಿವಾಹ ಎಷ್ಟು ಪ್ರಗತಿಪರ? | ೧೯೯೬ |
| ೧೧. | ದಲಿತ ಸಾಹಿತ್ಯ ಪ್ರವೇಶಿಕೆ | ೧೯೯೬ |
| ೧೨. | ದಲಿತ ಪ್ರಜ್ಞೆ : ಸಾಹಿತ್ಯ ಮತ್ತು ಸಂಸ್ಕೃತಿ | ೧೯೯೮ |
| ೧೩. | ಪುನಾಪ್ಯಾತ್ವ ಮತ್ತು ದಲಿತರತ್ತ ಸಾಗಬೇಕು | ೧೯೯೮ |

ಊ) ವಯಸ್ಕರ ಶಿಕ್ಷಣ ಕೃತಿಗಳು :

| | | |
|---|---|---|
| ೧. | ಜನಪದ ಆಟಗಳು | ೧೯೯೨ |
| ೨. | ತಾಳಿಕೋಟೆ ದ್ಯಾಮವ್ವ | ೧೯೯೫ |

ಎ) ಸಂಪಾದಿತ ಕೃತಿಗಳು :

| | | |
|---|---|---|
| ೧. | ಸಮಾವೇಶ (ಸಹ ಸಂಪಾದಕ) | ೧೯೮೮ |
| ೨. | ನಾಲ್ಕು ದಲಿತೀಯ ಕಾದಂಬರಿಗಳು | ೧೯೯೦ |
| ೩. | ಡಾ. ಅಂಬೇಡ್ಕರ್ ವಿಚಾರಧಾರ | ೧೯೯೧ |
| ೪. | ಅಂಬೇಡ್ಕರ್ ವಾದಸಂವಾದ | ೧೯೯೨ |
| ೫. | ಗೋಮಾಳದಿಂದ ಗಂಗೋತ್ರಿಗೆ | ೧೯೯೩ |
| ೬. | ದಲಿತ ಸಾಹಿತ್ಯ – ನೆಲೆ ಹಿನ್ನೆಲೆ | ೧೯೯೬ |
| ೭. | ಕನ್ನಡ ಗ್ರಂಥೋದ್ಯಮ | ೧೯೯೭ |
| ೮. | ಜಾನಪದ ಸೈದ್ಧಾಂತಿಕ ಪ್ರಶ್ನೆ ಮತ್ತು ದೇಶೀವಾದ | ೧೯೯೮ |
| ೯. | ಜಾನಪದ ಮೂಲತತ್ವಗಳು | ೧೯೯೯ |
| ೧೦. | ಕಾದಂಬರಿಗಳ ವಿಮರ್ಶೆ | ೨೦೦೦ |
| ೧೧. | ಮಲೆಯ ಮಾದೇಶ್ವರ | ೨೦೦೦ |
| ೧೨. | ಬೇವುಬೆಲ್ಲ - (ಸಹ ಸಂಪಾದನೆ) | ೨೦೦೧ |
| ೧೩. | ದಲಿತ ಮಾರ್ಗ | ೨೦೦೨ |
| ೧೪. | ಆನೀತಿ ಆರಾಧನ - (ಸಂಯುಕ್ತ ಕಾವ್ಯ) | ೨೦೦೨ |
| ೧೫. | ಕನ್ನಡ ವಿಮರ್ಶೆಯ ಮಾರ್ಗ | ೨೦೦೪ |

ಬಿ) ಮಾಲಗತ್ತಿಯವರ ಸಾಹಿತ್ಯ ವಿಮರ್ಶೆಯ ಕೃತಿಗಳು :

| | | |
|---|---|---|
| ೧. | ಕಾರ್ಯ ವಿಮರ್ಶಾಲೋಕ | ೧೯೮೯ |
| ೨. | ದಲಿತಪ್ರಜ್ಞೆ | ೨೦೦೦ |
| ೩. | ನೋವು ಹೆತ್ತ ಪ್ರೀತಿ | ೨೦೦೨ |

# ಅನುಬಂಧ-೨ : ವಿಮರ್ಶಾತ್ಮಕ ಅಭಿಪ್ರಾಯಗಳು : ಕಾವ್ಯ

೧. ಡಾ. ಮಾಲಗತ್ತಿಯವರ ಸಾಹಿತ್ಯವನ್ನು ವರ್ಗೀಕರಿಸಿರುವುದು ಅಂದ್ರೆ, ಕಾವ್ಯ, ಕತೆ, ಕಾದಂಬರಿ, ನಾಟಕ, ಸಂಶೋಧನೆ, ಆತ್ಮ ಕತೆ ಅಂತ ಮಾಡಿದ ವಿಮರ್ಶೆ ಪಾಶ್ಚಾತ್ಯ ಮಾದರಿಯದ್ದು. ನಾನೂ ಒಬ್ಬ ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದವನು. ನಾವು ಕೃಷಿಮಾಡುವುದನ್ನಾಗಲೀ, ದನ ಕಾಯುವುದನ್ನಾಗಲಿ, ಕುರಿ ಕಾಯುವುದನ್ನಾಗಲೀ, ಅಡಿಗೆಮಾಡುವುದನ್ನಾಗಲೀ, ಪೂಜೆ ಮಾಡುವುದನ್ನಾಗಲೀ ಬೇರೆ ಬೇರೆ ಅಂತ ಪರಿಗಣಿಸುವುದಿಲ್ಲ. ಅವೆಲ್ಲ ಒಂದೇ ಅಂತ ಭಾವಿಸ್ತೇವೆ. ಅವು ಅಷ್ಟು ಒಂದರೊಳಗೊಂದು ಹಾಸುಹೊಕ್ಕಾಗಿವೆ. ದಲಿತನಿಗೆ ಬದುಕು ಒಂದು, ಬರಹ ಒಂದು ಅಂತ ಇಲ್ಲ. ಯಾರು ಏನೇ ಹೇಳಲಿ, ವಿಮರ್ಶಕರಾಗಲಿ, ಸಾಹಿತಿಗಳಾಗಲಿ, ಮಾನವ ಶಾಸ್ತ್ರಜ್ಞರಾಗಲಿ ಬಾಯರೇ ಆಗಲಿ ಅವರು ಸಂಸ್ಕೃತಿಯ ಬಗ್ಗೆ ಮಾತನಾಡುವ ಯಾವುದೇ ಮಾತುಗಳು ಜಾನಪದದ ನೇರವಾದ ಅನುಭವ, ಅಧ್ಯಯನ ಇಲ್ಲದೆ ಆಡುವ ಮಾತುಗಳು ಎರವಲು ಪಡೆದ ಸಾಮಗ್ರಿಗಳಾಗುತ್ತವೆಯೇ ಹೊರತು, ಅವು ಜೀವಂತ ಸಾಮಗ್ರಿಗಳಾಗುವುದಿಲ್ಲ. ಹೀಗಾಗಿ ಡಾ. ಮಾಲಗತ್ತಿ ಅವರಿಗೆ ಜಾನಪದ, ದಲಿತ ಚಳವಳಿ, ಸಾಹಿತ್ಯ ವಿಮರ್ಶೆ, ಸಂಶೋಧನೆ ಎಲ್ಲವನ್ನೂ ಒಟ್ಟಿಗೆ ನೋಡೋದಕ್ಕೆ ಸಾಧ್ಯವಾಗಿದೆ. ಇದರಿಂದಾಗಿಯೇ ಅವರಿಗೆ ಜೀವಂತವಾದ ಸಾಹಿತ್ಯವನ್ನು ಕೊಡೋದಕ್ಕೆ ಸಾಧ್ಯವಾಗಿದೆ.

*– ಡಾ. ಬಿ. ಎ. ವಿವೇಕ ರೈ, ೨೦೦೦*

೨. ತಮ್ಮ ಮೊದಲನೆಯ "ಮೂಕನಿಗೆ ಬಾಯಿ ಬಂದಾಗ" ಸಂಕಲನದಲ್ಲಿ ಮಾಲಗತ್ತಿಯವರು ತಮ್ಮ ಅನನ್ಯತೆಯನ್ನು ಸಂಪೂರ್ಣವಾಗಿ ಜಾತಿಯ ನೆಲೆಯಲ್ಲಿ - ಎಂದರೆ ದಲಿತ ಸಮುದಾಯದ ನೆಲೆಯಲ್ಲಿ ಗುರುತಿಸಿಕೊಳ್ಳುತ್ತಾರೆ. ಅದ್ದರಿಂದಲೇ ಈ ಸಂಕಲನದ ಎಲ್ಲ ಕವಿತೆಗಳೂ ಜಾತೀಯ ಆಧಾರದಲ್ಲಿ ನಿರ್ಮಿಸಲ್ಪಟ್ಟ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಹುದುಗಿರುವ ಕ್ರೌರ್ಯ, ಶೋಷಣೆ ಮತ್ತು ಶೋಷಿತರ ವೇದನೆ ಹಾಗೂ ಕಿಚ್ಚು ಇವುಗಳನ್ನು ಅಭಿವ್ಯಕ್ತಿಗೊಳಿಸುತ್ತವೆ. ಆದರೆ ಕೂಡಲೇ ಇಲ್ಲಿ ಗಮನಿಸಬೇಕಾದ ಅಂಶರೆಂದರೆ, ಈ ಸಂಕಲನದ ಕವನಗಳಿಗೂ ಮತ್ತು ಅಂದಿನ (೭೦ ರ) ಸಂದರ್ಭದಲ್ಲಿ ಹೊರಬರುತ್ತಿದ್ದ ಇತರ ದಲಿತೀಯ ಕವನಗಳಿಗೂ ಇರುವ ವ್ಯತ್ಯಾಸ. ಸಾಧಾರಣವಾಗಿ, ೧೯೭೫ರಲ್ಲಿ ಹೊರಬಂದ ಸಿದ್ಧಲಿಂಗಯ್ಯನವರ "ಹೊಲೆ ಮಾದಿಗರ ಹಾಡು" ಸಂಕಲನ ಇತರ ದಲಿತ ಲೇಖಕರಿಗೆ ಮಾದರಿಯಾಗಿ ಆ ಕಾಲದಲ್ಲಿ ಬಂದ ದಲಿತ ಸಾಹಿತ್ಯದಲ್ಲಿ (ಮುಖ್ಯವಾಗಿ ಕಾವ್ಯದಲ್ಲಿ) ಅಬ್ಬರ, ಏರುದನಿ, ಸಿಟ್ಟು ಇವುಗಳೇ ಮುಖ್ಯವಾಗಿರುತ್ತಿದ್ದವು. ..... ..... ಸರಿಸುಮಾರು ಅದೇ ಕಾಲದಲ್ಲಿ (೧೯೮೦) ..... ಬಂದ "ಮೂಕನಿಗೆ ಬಾಯಿ ಬಂದಾಗ" ಸಂಕಲನದ ಹೆಚ್ಚಿನ ಸಫಲ ಕವನಗಳಲ್ಲಿ ನಾವು ಕಾಣುವುದು ಏರುದನಿಗೆ ಬದಲಾಗಿ ಕೆಳದನಿ, ವಾಚ್ಯಕ್ಕಿಂತ ವ್ಯಂಗ್ಯ ಮತ್ತು ಹೇಳಿಕೆ/ಘೋಷಣೆಗಳ ಸ್ಥಾನದಲ್ಲಿ ಧ್ವನಿಪೂರ್ಣ ರೂಪಕಗಳು.

ಮಾಲಗತ್ತಿಯವರೇ ಒಂದುಕಡೆ ಹೇಳುವಂತೆ"..... ..... ಸಾಮಾಜಿಕ ಪ್ರಜ್ಞೆ ಎಂಬ ತತ್ವದಡಿ ಬರೆದ ಬಹಳಷ್ಟು ಲೇಖನಗಳು ಕೈಕೊಡುತ್ತವೆ; ಮೋಸ ಮಾಡುತ್ತವೆ. ಲೇಖಕನ ತಲೆಯಲ್ಲಿ ಕ್ರಾಂತಿ ಇರುತ್ತದೆ. ಸಮಾಜದ ಮನಸ್ಸು ತೆಪ್ಪಗೆ ಬಿದ್ದಿರುತ್ತದೆ." ಈ ದೃಷ್ಟಿಯಿಂದ "ಜೋಗತಿಕಲ್ಲು", "ಪ್ರಶ್ನೆ", "ಒಕಳಿ", "ಕೆಸರು ಮೊಸರು" ಮುಂತಾದ ಕವನಗಳು ಅದೇ ಕಾಲದಲ್ಲಿ ಬಂದ ದೇವನೂರರ "ಮಾರಿಕೊಂಡವರು", "ಅಮಾಸ" ಮುಂತಾದ ಕಥೆಗಳನ್ನು ಹೋಲುತ್ತವೆ.

*ಸಿ. ಎನ್. ರಾಮಚಂದ್ರನ್, ೧೯೯೬*

೩. ಅವರ ಬರೆಹದ ಶಕ್ತಿ ಇರುವುದು ಅತ್ಯಂತ ವಿಶಿಷ್ಟವಾದ ಅನುಭವಗಳಲ್ಲಷ್ಟೇ ಅಲ್ಲ, ಆ ಅನುಭವಗಳನ್ನು ನಿರೂಪಿಸಲು ಬಳಸುವ ಚಿತ್ರಮಯ ಭಾಷೆಯಲ್ಲಿ. ಈ ಬರಹಗಳು ಒಮ್ಮೆ ಕವಿತೆಯಂತೆ ಮತ್ತೊಮ್ಮೆ ಪ್ರಬಂಧಗಳಂತೆ, ಬಹಳ ಸಲ ಕತೆಗಳಂತೆ ಓದಿಸಿಕೊಳ್ಳುತ್ತವೆ. ಮುಟ್ಟಿದರೆ ಮಿಡಿಯುತ್ತವೆ.

*ರಹಮತ್ ತರೀಕೆರೆ, ೧೯೯೫*

೪. ಮಾಲಗತ್ತಿ ಅವರ ಬರಹಗಳಲ್ಲಿ ಪ್ರತಿಭಟನೆ ಎಷ್ಟೇ ತೀವ್ರವಾಗಿ ಕಂಡುಬಂದರೂ ಅದು ಇತರರಿಗೆ ನೋವನ್ನುಂಟು ಮಾಡುವುದಿಲ್ಲ, ರೋಷ ದ್ವೇಷಗಳನ್ನು ಹೆಚ್ಚಿಸುವುದಿಲ್ಲ. ಬದಲಾಗಿ ವಿಚಾರಕ್ಕೆ ತೊಡಗಿಸುತ್ತದೆ, ಪ್ರಾಯಶ್ಚಿತ್ತಕ್ಕೆ ಪ್ರೇರೇಪಿಸುತ್ತದೆ.

*ಡಿ. ಕೆ. ರಾಜೇಂದ್ರ, ೨೦೦೦*

೫. ಈ ಹಿಂದೆ "ಹೊಲೆ ಮಾದಿಗರ ಹಾಡು" ಸಂಕಲನವು ಮೊದಲ ಬಾರಿಗೆ ಸಾಹಿತ್ಯಕ್ಷೇತ್ರಕ್ಕೆ ತೆರೆದು ತೋರಿಸಲ್ಪಟ್ಟ ಆ ಅದೇ ದೀನದಲಿತ ಲೋಕದ ವಿವರಗಳ ಉತ್ತರ ಕರ್ನಾಟಕದ ಆವೃತ್ತಿ ಇದಾಗಿದೆ. ಇವತ್ತಿಗೂ ಅಸ್ಪೃಶ್ಯತೆ ತನ್ನೆಲ್ಲ ಕರಾಳಮುಖಗೊಂದಿಗೆ ಜೀವಂತವಾಗಿರುವ ಗ್ರಾಮೀಣವಲಯದ ಚಿತ್ರಣ ಮಾಲಗತ್ತಿಯವರ ಕವನಗಳಲ್ಲಿ ದಟ್ಟವಾದ ವಿವರಗಳೊಂದಿಗೆ ಮೂಡಿಬಂದಿದೆ. ಇಲ್ಲಿನ ಎಷ್ಟೋ ವಿವರಗಳು ವಾಸ್ತವವಾಗಿ ಕಥಾಸಾಹಿತ್ಯದ ಚೌಕಟ್ಟಿನಲ್ಲಿ ದಾಖಲಾಗಬೇಕಿತ್ತೇನೋ ಅಂತ ನಡುನಡುವೆ ಅನ್ನಿಸತೊಡಗುತ್ತದೆ. ಅಲ್ಲಲ್ಲಿ ನಿಸ್ಸಹಾಯಕ ರೊಚ್ಚು ಮುಂದಾಗಿ, ಮಾತುಗಾರಿಕೆಯ ಗದ್ಯ ಅವತರಿಸಿ, ಕಾವ್ಯಾಂಶ ಗೌಣಗೊಳ್ಳುತ್ತಾ ನಡೆದಿರುವುದೂ ಉಂಟು.

*ಕಾಳೇಗೌಡ ನಾಗವಾರ, ೧೯೮೩*

೬. ದಲಿತರ ಭಾಷೆಯನ್ನು ಸೂರೆಗೊಂಡ ಕವಿಗಳಲ್ಲಿ ಇವರು ಮುಖ್ಯರು. ... ... ಆಕ್ರೋಶದ ರಭಸದಲ್ಲಿ ಸೂಕ್ಷ್ಮತೆಯನ್ನೂ, ವೈಚಾರಿಕತೆಯ ಒತ್ತಡದಲ್ಲಿ ಕಲಾತ್ಮಕತೆಯನ್ನೂ ಅರವಿಂದರು ಕಳೆದುಕೊಂಡಿಲ್ಲ. "ಕಪ್ಪು ಕಾವ್ಯ" (೧೯೮೪) ದಲ್ಲಿ ರೋಷಕ್ಕಿಂತ ಹೆಚ್ಚಾಗಿ ವಿಷಾದ ಮಡುಗಟ್ಟಿದೆ. ... ... ಇವರ ಕಾವ್ಯ ಸುಲಭವಾಗಿ ಹಾಡುವಿಕೆಗೆ ಮೈ ಒಡ್ಡುತ್ತದೆ.

*ಪುರುಷೋತ್ತಮ ಬಿಳಿಮಲೆ, ೧೯೮೯*

೭. ಮಾತು ಸ್ಥಿತಿಗಳನ್ನು ಮೀರಿ ಧೇನಿಸುವ ನೆಲೆಯನ್ನು "ಮೂರನೆಯ ಕಣ್ಣು" ಸಂಕಲನದಲ್ಲಿ ನೋಡಬಹುದು. ಹಿಂದಿನ ಸಂಕಲನಗಳ ಸ್ವರೂಪಕ್ಕಿಂತ ಭಿನ್ನವಾದ ಸಾಧ್ಯತೆಗಳನ್ನು ಹೊಂದಿರುವ ಈ ಸಂಕಲನ ಬದಲಾದ ಬದುಕಿನ ಸಾಧ್ಯತೆಗಳನ್ನು ಗಮನಿಸಿರುವುದು ಅವರ ಸಮಕಾಲೀನತೆಗೆ ಸಾಕ್ಷಿಯಾಗಿದೆ. ಹೊಸ ಆರ್ಥಿಕನೀತಿ ಒಡ್ಡಿದ ಬಿಕ್ಕಟ್ಟುಗಳ ಗ್ರಹಿಕೆಯು ಇಲ್ಲಿ ಮುಖ್ಯವಾಗಿ ಪ್ರಕಟಗೊಂಡಿವೆ.

*ರಾಜಪ್ಪ ದಳವಾಯಿ. ಪ್ರಬುದ್ಧ ಕರ್ನಾಟಕ*

೮. ಇಲ್ಲಿಯ ತನಕ ಮಾಡಿದ ಸಂಕ್ಷಿಪ್ತ ಸಮೀಕ್ಷೆಯಿಂದ ಸ್ಪಷ್ಟವಾಗುವ ಅಂಶಗಳು ಇವು.

ಅ. ಮಾಲಗತ್ತಿಯವರು ಕವಿಯಾಗಿ ನಿಂತನೀರಾಗಿ ಚರ್ವಿತಚರ್ವಣ ಮಾಡಲು ಇಷ್ಟಪಡದೆ ಸದಾ ನೂತನ ಅನುಭವಗಳನ್ನು ಅಭಿವ್ಯಕ್ತಿ ಸಾಧ್ಯತೆಗಳನ್ನು ಶೋಧಿಸುತ್ತಲೆ ಇರುವವರು.

ಆ. ತೀವ್ರ ಪ್ರತಿರೋಧವೇ ಇವರ ಕಾವ್ಯದ ಮುಖ್ಯ ಕಾಳಜಿಯಾದಾಗಲೂ ಎಲ್ಲೋ ಒದು ಕಡೆ ಭಾರತೀಯ ಸಾಂಸ್ಕೃತಿಕ ಸಾಹಿತ್ಯಕ ಪರಂಪರೆಯೊಡನೆ ಸಂಬಂಧವನ್ನು ಕಟ್ಟಿಕೊಂಡಿರಲು ಅವರು ಇಷ್ಟಪಡುತ್ತಾರೆ.

ಇ. ಇವರ ಸೃಜನಾತ್ಮಕ ಕೇಂದ್ರ ಜಾನಪದೀಯ ಲಯ ಹಾಗೂ ಪ್ರಜ್ಞೆ. ಆದ್ದರಿಂದ ಇವರ ಕಾವ್ಯದ ಪರಿಧಿ ಈ ಕೇಂದ್ರಕ್ಕೆ ಎಷ್ಟು ಹತ್ತಿರವಿರುತ್ತದೋ ಅಷ್ಟು ಅದು ಧ್ವನಿಪೂರ್ಣವಾಗಿ ಶ್ರೀಮಂತವಾಗುತ್ತದೆ.ಇವರ ಸೃಜನಶೀಲತೆ "ಯವ್ವ"ದಲ್ಲಿದೆ -"ಅಮ್ಮ" ನಲ್ಲಿಲ್ಲ.

*ಸಿ. ಎನ್. ರಾಮಚಂದ್ರನ್, ೧೯೯೬*